
ದುಡಿವ ಜನರ ಪ್ರಾಣಮಿತ್ರ
ಸಂಪುಟ 3 ಸಂಚಿಕೆ 22-23
ಜೂನ್ 07, 2009
5/-

ಜನಶಕ್ತಿ

ಕನ್ನಡ ವಾರಪತ್ರಿಕೆ





ಕೇಂದ್ರ ಸರ್ಕಾರದಲ್ಲಿ ಕರ್ನಾಟಕ ಸಚಿವರು ಕಾಂಗ್ರೆಸ್ ಕಾರ್ಯತಂತ್ರವೇನು ?

ಭಂಡ ಬಿಜೆಪಿ ಸರ್ಕಾರದ ವಾರ್ಷಿಕ ಸಂಭ್ರಮ



ಶ್ರೀಲಂಕಾ ತಮಿಳರ ಬವಣೆಗೆ ಕೊನೆಯೆಂತು ?

ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗಲಿ


ದೊಡ್ಡ ಹೋರಾಟಗಳಿಗೆ ಸಜ್ಜಾಗಬೇಕು



ಕಾಂ. ಪಿಕೆಎಸ್ ಇನ್ನು ಬರಿ ನೆನಪು



'ಖಾಸಗೀಕರಣ ಕೈಬಿಡಿ' ಬಿಸಿಯೂಟ ನೌಕರರ ಆಗ್ರಹ



ಅವಿಭಜಿತ ಕಮ್ಯುನಿಸ್ಟ್ ಚಳುವಳಿಯ ಕಾಲಘಟ್ಟದಲ್ಲೇ ಕಮ್ಯುನಿಸ್ಟ್ ಪಕ್ಷ ಸೇರಿದ ಕಾಂ. ಪಿ.ಕೆ.ಸುಬ್ರಮಣಿ ತಮ್ಮ ಕೊನೆಗಾಲದವರೆಗೂ ಚಳುವಳಿಯ ಗುರಿಗಳಿಗೆ ಬದ್ಧವಾಗಿದ್ದು, ಅದಕ್ಕಾಗಿ ಶ್ರಮಿಸಿದ ನಿಷ್ಠಾವಂತ ಸಂಗಾತಿಯಾಗಿದ್ದರು.

ಕಾಂ. ಪಿ.ಕೆ.ಎಸ್. ಇನ್ನು ಬರಿ ನೆನಪು

ಸಿಪಿಐ(ಎಂ) ಪಕ್ಷದ ಹಾಗೂ ಸಿಐಟಿಯುವಿನ ಹಿರಿಯ ಮುಖಂಡ ಹಾಗೂ ಹಿರಿಯ ತಲೆಮಾರಿನ ಕಾಂ.ಪಿ.ಕೆ.ಸುಬ್ರಹ್ಮಣಿ ಯವರು 26 ಮೇ 2009 ರಂದು ನಿಧನ ಹೊಂದಿದ್ದಾರೆ. 77 ವರ್ಷದ ಕಾಂ. ಪಿ.ಕೆ.ಸುಬ್ರಹ್ಮಣಿಯವರು ಹುಟ್ಟಿದ್ದು 30 ಸೆಪ್ಟೆಂಬರ್ 1932 ರಲ್ಲಿ.

ಕಾಂ.ಸೂರ್ಯನಾರಾಯಣರಾವ್, ಕೆ.ಆರ್.ನಾಯಕ್, ಚನ್ನಪ್ಪ ಹಗಲವಾಡಿ, ಎನ್.ಎಲ್. ಉಪಾಧ್ಯಾಯ, ಎ.ಕೆ. ಉಪಾಧ್ಯಾಯ ಮುಂತಾದವರೊಡನಾಡಿಯಾಗಿ ಪಕ್ಷದ ಶಿಸ್ತಿನ ಸಿಪಾಯಿಯಂತೆ ಕಳೆದ 50 ವರ್ಷದಿಂದ ಇವರು ಕಮ್ಯೂನಿಸ್ಟ್ ಚಳುವಳಿಯಲ್ಲಿ ದುಡಿದಿದ್ದಾರೆ. ತಮಿಳುನಾಡಿನಿಂದ ಕಾರ್ಮಿಕರನ್ನು ಬಲವಂತವಾಗಿ ತಂದು ಅತ್ಯಂತ ಕಡಿಮೆ ವೇತನ ನೀಡಿ, ಕಾರ್ಖಾನೆ ಮತ್ತು ಪ್ಲಾಂಟೇಷನ್‌ಗಳಲ್ಲಿ ದುಡಿಸಲಾಗುತ್ತಿದ್ದ ಕಾಲದಲ್ಲಿ ಶೋಷಿತ ಕಾರ್ಮಿಕರನ್ನು ಸಂಘಟಿಸಲು ಪಿ.ಕೆ.ಎಸ್ ಸಾಕಷ್ಟು ಶ್ರಮವಹಿಸಿದರು. ಬೆಂಗಳೂರಿನಲ್ಲಿ ಶ್ರೀರಾಮಪುರ ಪ್ರದೇಶದಲ್ಲಿ ತಮಿಳರೇ ಹೆಚ್ಚಾಗಿರುವಲ್ಲಿ ಅದರಲ್ಲೂ ರಾಜಾಮಿಲ್, ಮಿನರ್ವ ಮಿಲ್, ಬಿನ್ನಿಮಿಲ್, ರಾಮ್‌ಕುಮಾರ್ ಮಿಲ್‌ಗಳಲ್ಲಿ ದುಡಿಯುತ್ತಿದ್ದ ತಮಿಳು ಕಾರ್ಮಿಕರನ್ನು ಕೆಂಬಾವುಟದಡಿಯಲ್ಲಿ ತರುವಲ್ಲಿ ಯಶಸ್ವಿಯಾದರು. ಕಮ್ಯುನಿಸ್ಟ್ ಪಕ್ಷವು ಇಬ್ಭಾಗವಾದಾಗ ಸಿಪಿಐ(ಎಂ) ನೊಂದಿಗೆ ಗುರ್ತಿಸಿಕೊಂಡು ಪಕ್ಷದಲ್ಲಿ ಶ್ರಮಿಸಿದರು. ರಾಜಾಮಿಲ್‌ನಲ್ಲಿ ಕಾರ್ಮಿಕನಾಗಿ ಸಿಐಟಿಯು ಸಂಘಟಿಸಿದಾಗ ಕೆಲಸದಿಂದ ವಜಾಗೊಂಡರು.

ಕಾರ್ಮಿಕರಿಗೆ ವೇತನ ಹೆಚ್ಚಳ, ಉತ್ತಮ ಬದುಕಿಗಾಗಿ ಅನೇಕ ಹೋರಾಟಗಳನ್ನು ಸಂಘಟಿಸಿದರು. ಜವಳಿ ಉದ್ಯಮಗಳು ಇರುವಲ್ಲಿ ಕೆಂಬಾವುಟ ಹಾರಾಡುವಂತೆ ಮಾಡಿದರು. ಜಿಲ್ಲಾ ಸಿಲ್ಕ್ ಅಂಡ್ ಪವರ್‌ಲೂಂ ಕಾರ್ಮಿಕರ ಸಂಘದ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು.

ಎರಡು ಬಾರಿ ಸಿಪಿಐ(ಎಂ) ಪಕ್ಷದ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು. ಎರಡು ಅವಧಿಗೆ ಸಿಪಿಐ(ಎಂ) ಪಕ್ಷದ ರಾಜ್ಯಸಮಿತಿ ಸದಸ್ಯರಾಗಿದ್ದರು. ಅನಾರೋಗ್ಯ ಕಾಡುವವರೆಗೂ ಸಿಐಟಿಯು ರಾಜ್ಯ ಸಮಿತಿಯ ಸದಸ್ಯರಾಗಿ ಅವರು ಶ್ರಮಿಸಿದರು.

ಬೆಂಗಳೂರಿನ ಪ್ರಕಾಶನಗರ ಹಾಗೂ ಉಳಿದ ಪ್ರದೇಶಗಳಲ್ಲಿ ಜನಸಾಮಾನ್ಯರಿಗೆ ನಿವೇಶನ ದೊರಕಿಸಿಕೊಡುವ ಹೋರಾಟದಲ್ಲೂ ಕಾಂ: ಪಿ.ಕೆ.ಎಸ್. ನೇತೃತ್ವ ವಹಿಸಿದ್ದರು. ಪ್ರಕಾಶನಗರದಲ್ಲಿ ಕಾರ್ಪೊರೇಷನ್ ಚುನಾವಣೆಗೆ ಸಹ ಸ್ಪರ್ಧಿಸಿದ್ದರು.

ಪಯಣಂ ಪತ್ರಿಕೆ

ಮೂಲತಃ ತಮಿಳುನಾಡಿನವರಾದ ಕಾಂ.ಪಿ.ಕೆ.ಯವರು ಸಂಗಾತಿಗಳನ್ನು ವೈಚಾರಿಕವಾಗಿ ಬೆಳೆಸುವಂತಹ ನಿಟ್ಟಿನಲ್ಲಿ 'ಪಯಣಂ' ತಮಿಳು ಪತ್ರಿಕೆ ಆರಂಭಿಸಿದರು. ತಮಿಳು ಹಾಗೂ ಕನ್ನಡ ಬಲ್ಲವರ ಮಧ್ಯೆ ಸಂಪರ್ಕದ ಕೊಂಡಿಯಾಗಿ 'ತೋಳರ್' (ಸಂಗಾತಿ) ಪತ್ರಿಕೆ ಆರಂಭಿಸಿದರು. ತೋಳರ್ ಪತ್ರಿಕೆಗೆ ತಮಿಳುನಾಡಿನ ಸಿಪಿಐ(ಎಂ) ಪಕ್ಷದ ಅನೇಕ ಹಿರಿಯ ಮುಖಂಡರು ಲೇಖನಗಳನ್ನು ಬರೆಯುತ್ತಿದ್ದರು. ಅದರ ಮೂಲಕ ಸಾಹಿತ್ಯದ ಕುರಿತು, ಪಕ್ಷದ ಧೋರಣೆ ಕುರಿತು 'ತೋಳರ್'ನಲ್ಲಿ ಅನೇಕ ಲೇಖನಗಳು ಪ್ರಕಟಣೆಗೊಳ್ಳುತ್ತಿದ್ದವು. ನಂತರ ಪಯಣಂ ಪತ್ರಿಕೆ ಆರಂಭಿಸಿದರು. ಅನೇಕ ವರ್ಷಗಳ ಕಾಲ ಈ ಪತ್ರಿಕೆಯನ್ನು ನಿರಂತರವಾಗಿ ಹೊರತಂದರು. ಪತ್ರಿಕೆಯನ್ನು ಈಗಲೂ ಹೊರ ತರಲಾಗುತ್ತಿದೆ. ಇದರ ಜೊತೆ ಪಕ್ಷದ ತಮಿಳು ಸಾಹಿತ್ಯವನ್ನು ಹಂಚುವು ದರೊಂದಿಗೆ ಅದರ ಕುರಿತು ಸಾಮೂಹಿಕ ಚರ್ಚೆ ನಡೆಸುತ್ತಿದ್ದರು. ಶ್ರೀರಾಮಪುರದಲ್ಲಿ ಅನೇಕ ಯುವ ಕಾರ್ಯಕರ್ತರನ್ನು ಸಿಪಿಐ(ಎಂ) ಪಕ್ಷಕ್ಕೆ ಸೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಒಂದು ಕಾಲದಲ್ಲಿ ಅಂತಹ ಯುವಜನರಲ್ಲಿ ಖ್ಯಾತ ಸಾಹಿತಿಗಳಾದ ಡಾ: ಸಿದ್ದಲಿಂಗಯ್ಯ, ಡಾ: ಎಲ್.ಹನುಮಂತಯ್ಯ ಮುಂತಾದವರಿದ್ದರು.



'ಪಯಣ' ಪತ್ರಿಕೆಯೊಂದರ ಮುಖಪುಟ

ಶ್ರದ್ಧಾಂಜಲಿ ಸಭೆ

ಕಾಂ.ಪಿ.ಕೆ.ಯವರ ನಿಧನವಾರ್ತೆ ತಿಳಿಯುತ್ತಿದ್ದಂತೆ ನೂರಾರು ಸಂಗಾತಿಗಳು ಕಾಂ.ಪಿ.ಕೆ.ಯವರ ಕುರುಬರಹಳ್ಳಿಯಲ್ಲಿರುವ ಅವರ ಮನೆಗೆ ತೆರಳಿ ಅಂತಿಮದರ್ಶನ ಪಡೆದರು. 27 ಮೇ 2009 ರಂದು 11.30 ಕ್ಕೆ ಹರಿಶ್ಚಂದ್ರ ಘಾಟ್‌ನಲ್ಲಿ ನಡೆದ ಇವರ ಅಂತ್ಯ ಸಂಸ್ಕಾರಕ್ಕೆ ವಿವಿಧ ಸಾಮೂಹಿಕ ಸಂಘಟನೆಗಳ ನಾಯಕರು, ಅಪಾರ ಅಭಿಮಾನಿಗಳು, ಬಂಧು ಬಳಗದವರು ಸೇರಿದರು. ಬೆಂಗಳೂರು ಜಿಲ್ಲಾ ಸಮಿತಿ ಉಸ್ತುವಾರಿಯಲ್ಲಿ ಕಾಂ.ಪಿ.ಕೆ.ಯವರ ಮೃತದೇಹವನ್ನು ಕೆಂಬಾವುಟ ಅಲಂಕರಿಸಿದ ಮೆರವಣಿಗೆಯೊಂದಿಗೆ ತರಲಾಯ್ತು. ಇವರ ಅಂತಿಮದರ್ಶನ ಪಡೆದ ನಂತರ ಶ್ರದ್ಧಾಂಜಲಿ ಸಭೆ ನಡೆಸಲಾಯಿತು. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಜಿ.ಎನ್. ನಾಗರಾಜ್ ರವರು ಕಾಂ.ಪಿ.ಕೆ.ಯವರ ಜೀವನದ ಕೊಡುಗೆ ವಿವರಿಸಿ ಪಕ್ಷದ ಬೆಳವಣಿಗೆಗೆ ಹಾಗೂ ಸಿಐಟಿಯು ಸಂಘಟಿಸುವಲ್ಲಿ ಇವರು ವಹಿಸಿದ ಪಾತ್ರವನ್ನು ವಿವರಿಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಕಾಂ.ವೆಂಕಟಾಚಲಯ್ಯ, ಕಾಂ.ಪ್ರಕಾಶ್, ಕಾಂ.ಗೋಪಾಲಗೌಡ ಮುಂತಾದವರು ಕಾಂ.ಪಿ.ಕೆ.ಯವರ ಕೊಡುಗೆಯನ್ನು ಸ್ಮರಿಸಿದರು. ಮೌನ ಆಚರಣೆ ಮೂಲಕ ಅಗಲಿದ ಸಂಗಾತಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕಾಂ.ಗೋಪಾಲ ಕೃಷ್ಣ ರವರು ತಮ್ಮನ್ನು ಬೆಳೆಸುವಲ್ಲಿ ಕಾಂ.ಪಿ.ಕೆ. ಯವರು ನೀಡಿದ ಶ್ರದ್ಧೆ ಕುರಿತು ನೆನಪಿಸಿ ಕೊಂಡರು. ಪಿ.ಕೆ.ಯವರು ಪತ್ನಿ ಧನಭಾಗ್ಯಮ್ಮ ಹಾಗೂ ಮೂವರು ಮಕ್ಕಳನ್ನು, ಸಂಗಾತಿಗಳನ್ನು ಅಗಲಿದ್ದಾರೆ.

'ಆತ್ಮೀಯ ನಿಷ್ಠಾವಂತ ಸ್ನೇಹಿತರನ್ನು ಕಳಕೊಂಡೆ'

- ವಿ.ಜೆ.ಕೆ.ನಾಯರ್

"ಕಾಂ.ಪಿ.ಕೆ.ಯವರು ಗುಡಿಯಾಥ್ಥಂನಿಂದ ಬಂದವರು. ಇಲ್ಲಿ ಸ್ವಾತಂತ್ರ್ಯಪೂರ್ವ ನಡೆದ ರೈತರ ಹೋರಾಟದ ಫಲವಾಗಿ ಕೆಂಬಾವುಟ ಕಡೆ ಆಕರ್ಷಿತರಾದರು. ಇವರು ಉದ್ಯೋಗ ಅರಸಿ ರಾಜಾಮಿಲ್‌ನಲ್ಲಿ ಕಾರ್ಮಿಕ ರಾಗಿದ್ದರು. ಕಾರ್ಮಿಕ ಸಂಘಟನೆಯಲ್ಲಿ ತೊಡಗಿಸಿಕೊಂಡಾಗ ಕೆಲಸದಿಂದ ವಜಾಗೊಂಡರು. ನಂತರ ಕೆಲವು ದಿನಗಳ ಕಾಲ ಆಟೋಚಾಲಕರಾಗಿದ್ದರು. ಆಗಾಗಲೇ ಇವರು ಸಾಹಿತ್ಯದ ಪತ್ರಿಕೆಯನ್ನು ಹೊರತಂದಿದ್ದರು. ಅವರ ಪ್ರತಿಭೆ ಕಂಡ ನಾನು 'ಕಾಂ.ಪಿ.ಕೆ., ನೀವು ಆಟೋ ಕೋಟನ್ನು ಕಿತ್ತುಹಾಕಿ ಪಕ್ಷದ ಕಾರ್ಯಕರ್ತರಾಗಿ' ಎಂದಾಗ ನನ್ನ ಮಾತಿಗೆ ಬೆಲೆ ಕೊಟ್ಟು ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾದರು. ಅತ್ಯಂತ ನಿಷ್ಠೆಯ ಹಾಗೂ ಪ್ರಾಮಾಣಿಕ ಕಮ್ಯೂನಿಸ್ಟನಾಗಿ ಎಲ್ಲಕ್ಕಿಂತಲೂ ಹೆಚ್ಚಾಗಿ ನನ್ನ ಆತ್ಮೀಯ ಸ್ನೇಹಿತನಾಗಿದ್ದ ಪಿ.ಕೆ. ಇಂದು ನಮ್ಮೊಂದಿಗಿಲ್ಲ".

ಮಹತ್ವದ ತೀರ್ಪು: ಸಾರಿಗೆ ನೌಕರರ ಸಭೆ ಜೂನ್ 12 ಕ್ಕೆ

ಕಾರ್ಮಿಕ ಚಳುವಳಿಯ ಮುಖಂಡರು ಹಾಗೂ ಕಾರ್ಮಿಕರನ್ನು ದೂರದೂರದ ಪ್ರದೇಶಗಳಿಗೆ ವರ್ಗಾವಣೆ ಮಾಡಿ ಚಳುವಳಿ ಮುರಿಯುವುದು ಸಾರಿಗೆ ಸಂಸ್ಥೆಗಳ ಆಡಳಿತ ಮಂಡಳಿಯ ಒಂದು ಕುಖ್ಯಾತವಾದ ತಂತ್ರ. ಕರ್ನಾಟಕದ ರಾಜ್ಯದಲ್ಲಿ ಇತ್ತೀಚೆಗೆ ಸಹ ಕಾರ್ಮಿಕ ಚಳುವಳಿಯ ಮುಖಂಡರು ಇಂತಹ 'ವರ್ಗಾವಣೆ ಶಿಕ್ಷೆ'ಗೆ ಗುರಿಯಾಗಿದ್ದರು.

ಆದರೆ ಇಂತಹ ದುರುದ್ದೇಶಪೂರ್ವಕ ವರ್ಗಾವಣೆಯ ವಿರುದ್ಧ ಇದೀಗ ನ್ಯಾಯಾಲಯ ಮಹತ್ತರವಾದ ತೀರ್ಪೊಂದನ್ನು ನೀಡಿದ್ದು ಕಾರ್ಮಿಕ ಚಳುವಳಿಯ ಹೋರಾಟದಲ್ಲಿ ಮಹತ್ವದ ಮೈಲುಗಲ್ಲಾಗಿದೆ. ಇದೇ ಸಂದರ್ಭವನ್ನು ಬಳಸಿ ಸಾರಿಗೆ ರಂಗದಲ್ಲಿ ಕಾರ್ಮಿಕ ಚಳುವಳಿಯನ್ನು ಬಲಪಡಿಸುವ ನಿಟ್ಟಿನಲ್ಲಿ ಜೂನ್ 12 ಕ್ಕೆ ಬೆಂಗಳೂರಿನ 'ಸೂರಿಭವನ'ದಲ್ಲಿ ಸಭೆಯೊಂದನ್ನು ಕರೆಯಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಫೆಡರೇಷನ್ (ಸಿಐಟಿಯು) ನ ಮುಖಂಡರು, ಕಾರ್ಯಕರ್ತರು, ಹಿತೈಷಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಷ್ಟ್ರೀಯ ಸಾರಿಗೆ ನೌಕರರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕೆ.ಕೆ. ದಿವಾಕರನ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರಸನ್ನ ಕುಮಾರ್, ರಾಜ್ಯ ಫೆಡರೇಷನ್‌ನ ಅಧ್ಯಕ್ಷ ಎಚ್.ರೇವಪ್ಪ, ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಮುಂತಾದವರು ಪಾಲ್ಗೊಳ್ಳಲಿದ್ದಾರೆ. ಸಾರಿಗೆ ರಂಗದಲ್ಲಿ ಕಾರ್ಮಿಕ ಚಳುವಳಿಯ ಕುರಿತು ಚರ್ಚಿಸಲು ಆಸಕ್ತರು ಪಾಲ್ಗೊಳ್ಳುವರು.

ಬೆಂಗಳೂರು ನಗರದಲ್ಲಿ ಮೆರವಣಿಗೆ, ಪ್ರತಿಭಟನೆಗಳನ್ನು ನಿಗ್ರಹಿಸುವ ರಾಜ್ಯ ಸರ್ಕಾರದ ದಮಕಾರಿ ಧೋರಣೆಯನ್ನು ಖಂಡಿಸಿ ಸಿಐಟಿಯು ನೇತೃತ್ವದಲ್ಲಿ ಮೇ 30 ರಂದು ಬೆಂಗಳೂರು ನಗರದಲ್ಲಿ ನಡೆದ ಪ್ರತಿಭಟನೆ. ಚಿತ್ರ.



ಸಂಪಾದಕೀಯ

ಭಂಡ ಸರ್ಕಾರದ ವಾರ್ಷಿಕ ಸಂಭ್ರಮ

ಮೇ 30 ಕ್ಕೆ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ಪೂರೈಸಿದೆ. ಒಂದು ವರ್ಷದ ಅವಧಿಯಲ್ಲಿ ಭಾರಿ ಸಾಧನೆ ಮಾಡಿದೆ ಎಂದು ಡಂಗುರ ಬಾರಿಸುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪನವರ ಸರ್ಕಾರದ ಪ್ರಥಮ ವರ್ಷಾಚರಣೆಯ ಭರ್ಜರಿ ಸಿದ್ಧತೆ ನಡೆದಿವೆ ಎಂಬ ವರದಿಗಳಿವೆ.

5 ವರ್ಷ ಪೂರೈಸಿದ - ಜನರ ಸಂಕಷ್ಟಗಳಿಗೆ ಒಂದಷ್ಟು ನೈಜ ಪರಿಹಾರ ನೀಡಿದ ಸರ್ಕಾರಗಳೇ ವಾರ್ಷಿಕ ಸಂಭ್ರಮಾಚರಣೆ ಮಾಡಿಕೊಳ್ಳದಿರುವಾಗ ಯಡಿಯೂರಪ್ಪನವರ ಸರ್ಕಾರದ ಈ ಸಂಭ್ರಮಾಚರಣೆಗೆ ಕಾರಣವೇನಿರಬಹುದು?

ಮೊದಲಿಗೆ ತನ್ನ ಅನೈತಿಕ ಭ್ರಷ್ಟ ರಾಜಕಾರಣದ ಆಂತರಿಕ ಒತ್ತಡಗಳಿಂದಾಗಿ ಈ ಸರ್ಕಾರ ಐದು ವರ್ಷ ಪೂರೈಸುವುದೇ ಎಂಬ ಅನುಮಾನವೇ ಈ ವರ್ಷಾಚರಣೆಗೆ ಕಾರಣವಾಗಿದೆ

ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಾಣದ ಜನತೆಗೆ ವರ್ಷಾಚರಣೆಯ ಸಂಭ್ರಮದಿಂದ ದೊರಕುವುದಾದರೂ ಏನು? ಇದೊಂದು ಅಸಹ್ಯಕರವಾದ ವೈಭವೀಕರಣ, ಅನಾವಶ್ಯಕವಾದ ದುಂದುವೆಚ್ಚವಾಗಲಿದೆ. ಸರ್ಕಾರ ಏನೆಲ್ಲಾ ಬಡಾಯಿ ಕೊಚ್ಚಿಕೊಂಡರೂ ಒಂದು ವರ್ಷದ ಬೆಳವಣಿಗೆಗಳು ಘಟನಾವಳಿಗಳು ಜನರ ಮುಂದೆ ತೆರೆದ ಪುಸ್ತಕದಂತೆ ಇವೆ.

ಹಸಿರು ಶಾಲು ಹೊದ್ದುಕೊಂಡು ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಯಡಿಯೂರಪ್ಪ ಸರ್ಕಾರ ಮೂರನೇ ದಿನಗಳಲ್ಲಿ ರಸಗೊಬ್ಬರ ಕೇಳಿದ ರೈತರ ಮೇಲೆ ಹತ್ತಾರು ಕಡೆಗಳಲ್ಲಿ ಬೆನ್ನಟ್ಟಿ ಲಾಠಿ ಪ್ರಹಾರ ನಡೆಸಿತು. ಹಾವೇರಿಯಲ್ಲಿ ಗೋಲಿಬಾರ್ ನಡೆಸಿ ರೈತರ ಎದೆಗೆ ಗುಂಡನ್ನೇ ಹಾಕಿತು. ವಿಚಾರಣಾ ಆಯೋಗದ ಮುಂದೆ ಈಗ ಬಿಜೆಪಿ ಶಾಸಕರು ಗೋಲಿಬಾರ್‌ನಲ್ಲಿ ಸತ್ತವರು ರೈತರೇ ಅಲ್ಲ ಎಂದು ವಾದಿಸುತ್ತಿದ್ದಾರೆ.

ಹಾವೇರಿ ಗೋಲಿಬಾರ್, ಪದ್ಮಾವತಿ ಸಾವಿನ ಪ್ರಕರಣದಿಂದ ಎದ್ದುಕಂಡ ಯಡಿಯೂರಪ್ಪ ಸರ್ಕಾರದ ಗೃಹ ಇಲಾಖೆಯ ಶೋಚನೀಯ ವೈಫಲ್ಯ, ಜನವಿರೋಧಿತನ, ಕೋಮುವಾದಿ ಪಕ್ಷಪಾತ, ಪ್ರಜಾಪ್ರಭುತ್ವ ಚಳುವಳಿಗಳ ದಮನೋತ್ಸಾಹ ಇಂದಿಗೂ ಅವ್ಯಾಹತವಾಗಿ ಮುಂದುವರಿದಿದೆ.

ಮಂಗಳೂರಿನಲ್ಲಿ ನೀರಿನ ದರ ಏರಿಕೆ ವಿರುದ್ಧದ ಹೋರಾಟಗಾರರ ಮೇಲೆ ಲಾಠಿ ಪ್ರಹಾರ, ಕರಾವಳಿ ಸಂಪಾದಕರ ಬಂಧನ, ಚಿತ್ರಹಿಂಸೆಗಳು ಇದರಲ್ಲಿ ಕೇವಲ ಒಂದೆರಡು ಉದಾಹರಣೆಗಳಷ್ಟೆ.

ಭಜರಂಗದಳ, ವಿಶ್ವ ಹಿಂದು ಪರಿಷತ್ ಮುಂತಾದ ಸಂಘ ಪರಿವಾರದ ಸಂಘಟನೆಗಳ ಕೋಮುವಾದಿ ದಾಂಧಲೆಗಳನ್ನು ಪತ್ಯಕ್ಷವಾಗಿ, ಪರೋಕ್ಷವಾಗಿ ಬೆಂಬಲಿಸುತ್ತಾ ಸರ್ಕಾರ ನಡೆದುಕೊಂಡ ರೀತಿ ದೇಶದಲ್ಲೆಲ್ಲಾ ಕುಖ್ಯಾತವಾಗಿದೆ.

ದಾವಣಗೆರೆ, ಮಂಗಳೂರು ಸೇರಿದಂತೆ ರಾಜ್ಯವ್ಯಾಪಿ ಚರ್ಚುಗಳ ಮೇಲೆ ದಾಳಿ ನಡೆಸಿದವರ ಬಗೆಗೆ ಮೃದು ಧೋರಣೆ, ರಕ್ಷಣೆ ಕೊಡಬೇಕಾದ ಅಲ್ಪಸಂಖ್ಯಾತರ ಮೇಲೆ ಪೊಲೀಸ್ ದೌರ್ಜನ್ಯ, ಹಾಜಪ್ಪ, ಹಸನಬ್ಬ ಬೆತ್ತಲೆ ಪ್ರಕರಣಗದಲ್ಲಿ ಪ್ರಭುತ್ವ ಅಧಿಕಾರ ಬಳಸಿ ಅಪರಾಧಿಗಳನ್ನು ಶಿಕ್ಷೆಯಿಂದ ತಪ್ಪಿಸಿದ್ದು, ಒಂದೇ ಎರಡೇ? ಪಬ್ ಮೇಲೆ ದಾಳಿ, ಕೇರಳದ ಸಿಪಿಐ ಶಾಸಕರ ಪುತ್ರಿಯನ್ನು ಬಿಡದೇ ಕಾಡಿದ ಹಿಂದುತ್ವ ತಾಲೀಬಾನರ ಗೂಂಡಾಗಿರಿಗೆ ರಕ್ಷಣೆ, ಇನ್ನು ಜನರ ಬದುಕಿನ ಬವಣೆಗಳಿಗೆ ಸರ್ಕಾರ ನೀಡಿದ ಪರಿಹಾರವೇನು? ಚುನಾವಣಾ ಭರವಸೆಯಂತೆ 2 ರೂ.ಗೆ ಕೆ.ಜಿ. ಅಕ್ಕಿ ನೀಡುತ್ತಿದೆಯೇ. ರೈತರ ಜೀವನದೊಂದಿಗೆ, ಉದ್ದಿಮೆಗಳೊಂದಿಗೆ ಕಣ್ಣಾಮುಚ್ಚಾಲೆ ಆಡುವ ವಿದ್ಯುತ್ ಕೊರತೆಯ ಸಮಸ್ಯೆಯನ್ನು ಪರಿಹರಿಸಲಾಗಿದೆಯೇ? ಆ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವಾದರೂ ನಡೆದಿದೆಯೇ? ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆ ಏರಿ ಹಲವು ರಾಜ್ಯ ಸರ್ಕಾರಗಳು ತೆರಿಗೆ ಕಡಿತ ಮಾಡಿದರೂ ಕರ್ನಾಟಕ ರಾಜ್ಯ ಸರ್ಕಾರ ಏಕೆ ತನ್ನ ತೆರಿಗೆಯಲ್ಲಿ ಕಡಿತ ಮಾಡಲಿಲ್ಲ. ಜಾಗತಿಕ, ಆರ್ಥಿಕ ಬಿಕ್ಕಟ್ಟಿನಿಂದ ರಾಜ್ಯದ ಹಲವಾರು ಉದ್ದಿಮೆಗಳು ತೀವ್ರ ಬಿಕ್ಕಟ್ಟಿಗೆ ಸಿಲುಕಿರುವಾಗ ರಾಜ್ಯ ಸರ್ಕಾರ ಏನು ಪರಿಹಾರ ಕೊಟ್ಟಿದೆ. ಅದರಲ್ಲಿಯೂ ಉದ್ಯೋಗ ಕಳೆದುಕೊಂಡು ಕಂಗಾಲಾಗಿರುವ ಕಾರ್ಮಿಕರಿಗಾಗಿ ಸರ್ಕಾರ ಮಾಡಿದ್ದೇನು?

ಈ ಸರ್ಕಾರಕ್ಕೆ ಜನರ ಬದುಕಿನ ಬವಣೆಗಳ ಪರಿಹಾರ ಆದ್ಯತೆ ಅಲ್ಲವೇ ಅಲ್ಲ. ಇಲ್ಲದಿದ್ದಲ್ಲಿ ಬಡಜನರ ಬೆವರಿನಿಂದ ಹಿಂಡಿಕೊಂಡ ಖಜಾನೆ ಹಣವನ್ನು ಹೀಗೆ ಜಾತಿವಾದಿ ಮಠಮಾನ್ಯಗಳಿಗೆ ಕೋಟಿ ಕೋಟಿ ಹಂಚುವುದು ಸಾಧ್ಯವಿತ್ತೇ?

ಮುಖ್ಯಮಂತ್ರಿಗಳ ಮನೆ ರಿಪೇರಿಗೆ ಸರ್ಕಾರದ 56 ರೂ ಖರ್ಚು, ಸಚಿವ ಕರುಣಾಕರರೆಡ್ಡಿ ಮನೆ ರಿಪೇರಿಗೆ ಖಜಾನೆಯ 25 ಲಕ್ಷ ರೂ ಖರ್ಚು, ಸಚಿವರ ಮನೆ ರಿಪೇರಿಗೆ ಒಟ್ಟು 3 ಕೋಟಿ ರೂ. ವೆಚ್ಚ, ಜನರು ಕುಡಿಯುವ ನೀರಿಲ್ಲದೆ, ಕಂಗಾಲಾಗಿರುವಾಗ ಉತ್ತರ ಭಾರತದಿಂದ ಗಂಗಾಜಲದ ಸಾಗಣೆ !! ಲಕ್ಷಾಂತರ ರೂ.ಗಳ ವೆಚ್ಚದಲ್ಲಿ.

ಹಿಂದಿನ ಸರ್ಕಾರ ಅವಧಿಯಲ್ಲಿ ನಡೆದಿದ್ದ 'ಭೂಗಳ್ಳರಿಂದ ಸರ್ಕಾರಿ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳುವ' ಕೆಲಸ ನಿಂತೇ ಹೋಗಿದೆ. ವಶಕ್ಕೆ ತೆಗೆದುಕೊಂಡ ಭೂಮಿಯನ್ನು ಬಡವರಿಗೆ ಹಂಚಿ ಎಂದರೆ ಯಡಿಯೂರಪ್ಪನವರ ಸರ್ಕಾರಕ್ಕೆ ಹೋರಾಟಗಾರರ ಮೇಲೆ ಕಣ್ಣುರಿ.

ಲೋಕಾಯುಕ್ತರು ರಾಜ್ಯ ಸರ್ಕಾರದ ಸಚಿವರೇ ಮಾಲಿಕರಾಗಿರುವ ಸಂಸ್ಥೆಗಳ ವಿರುದ್ಧ ಗಂಭೀರ

ಪುಟ 11ಕ್ಕೆ

ಕೇಂದ್ರ ಸಂಪುಟದಲ್ಲಿ ಕರ್ನಾಟಕದ ಸಚಿವರು

ಕರ್ನಾಟಕದಲ್ಲಿ ಅಭಿವೃದ್ಧಿಯ ಸುರಿಮಳೆಯೋ ? ಕಾಂಗ್ರೆಸ್ ಅಭಿವೃದ್ಧಿಯ ಕಾರ್ಯತಂತ್ರವೋ ?

ಕರ್ನಾಟಕದ ಹಲವಾರು ಕಡೆಗಳಲ್ಲಿ ಪಟಾಕಿಗಳ ಸದ್ದು, ಹೋ..ಹೋ! ಹಾ.. ಹಾ..! ಎಂಬ ಕೂಗಾಟ, ಕುಣಿತ, ಅದ್ದೂರಿಯ ಸ್ವಾಗತ, ಸನ್ಮಾನ ಸಮಾರಂಭಗಳು ಒಂದು ಕಡೆ 19 ಸ್ಥಾನ ಪಡೆದು ಮೆರೆದಾಡಿದ ಬಿಜೆಪಿ, ಮತ್ತೊಂದು ಕಡೆ ಲೋಕಸಭಾ ಚುನಾವಣೆಯಲ್ಲಿ ದೇಶದಲ್ಲಿ ಕಾಂಗ್ರೆಸ್ ಸ್ಥಾನಗಳನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದ್ದರೂ ರಾಜ್ಯದಲ್ಲಿ 2 ಸ್ಥಾನಗಳನ್ನು ಕಳೆದುಕೊಂಡು ಆರಕ್ಕಿಳಿದು ಬಿಜೆಪಿ ಗೆಲುವಿಗೆ ತಮ್ಮ ಗರಿಷ್ಠ ಕೊಡುಗೆಯನ್ನು ಕೊಟ್ಟು ವ್ಂಂಖ ವ್ಂಂಚ್ಚಿ ಕ್ಂಂಡ್ಂ ತಿರುಗಾಡಬೇಕಾಗಿದ್ದ ಕಾಂಗ್ರೆಸ್ಸಿಗರು ಯಾವ ನಾಚಿಕೆಯೂ ಇಲ್ಲದೆ 5 ಜನಮಂತ್ರಿ ಗಳಾಗಿದ್ದಾರೆ ಎಂದು ಅಬ್ಬರ ನಡೆಸಿದ್ದಾರೆ.

ಕರ್ನಾಟಕದಿಂದ 3 ಜನ ಸಂಪುಟ ದರ್ಜೆಯ ಸಚಿವರೂ ಸೇರಿ 5 ಜನ ಸಚಿವರಾಗಿದ್ದಾರೆ. ಆದ್ದರಿಂದ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಹೆಚ್ಚು ಗಮನ ನೀಡುತ್ತದೆ. ಯೋಜನೆಗಳು, ಹಣ ಹರಿದುಬರುತ್ತದೆ. ಆದ್ದರಿಂದ ಕರ್ನಾಟಕದಲ್ಲಿ ಅಭಿವೃದ್ಧಿಯ ಸುರಿಮಳೆಯೇ ಆಗುತ್ತದೆ ಎಂಬ ಭ್ರಮೆಯನ್ನು ಕಾಂಗ್ರೆನವರಿರಲಿ, ಟಿ.ವಿ. ಪತ್ರಿಕೆಗಳ ವರದಿಗಾರರೂ ಸೇರಿದಂತೆ ವ್ಯಾಪಕವಾಗಿ ಹಬ್ಬಿಸಲಾಗುತ್ತಿದೆ. ಆದೇ ಸಮಯದಲ್ಲಿ ಈ ಸಚಿವರುಗಳಿಗೆ ನೀಡಿರುವ ಖಾತೆಗಳು ಅಭಿವೃದ್ಧಿಗೆ ಸಂಬಂಧಿಸದ 66 ಜೊಳ್ಳು ಖಾತೆಗಳು! ಆದ್ದರಿಂದ ರೈಲ್ವೆ ಖಾತೆಯಲ್ಲಿ ಸೀಮಿತವಾಗಿ ಆಗಬಹುದಾದ ಪ್ರಯೋಜನ ಬಿಟ್ಟರೆ ಕರ್ನಾಟಕದ ಸಚಿವರ ಸಚಿವಾಲಯಗಳ ಮೂಲಕ ನೇರವಾಗಿ ಅಭಿವೃದ್ಧಿಗೆ ನೆರವಾಗುವುದಿಲ್ಲ ಎಂಬ ಅಭಿಪ್ರಾಯಗಳೂ ವ್ಯಕ್ತವಾಗಿವೆ.

ಹಿಂದೆಯೂ ಕರ್ನಾಟಕದಿಂದ ಅನೇಕ ಜನ ಕೇಂದ್ರ ಸಚಿವರಾಗಿದ್ದಾರೆ. ರಾಜ್ಯ ಸರ್ಕಾರದಲ್ಲಿಯೂ ಸಚಿವರನ್ನು ನೇಮಿಸುವಾಗ ಪ್ರದೇಶ ಹಾಗೂ ಜಾತಿ ಮೊದಲಾದ ಮಾನದಂಡಗಳ ಆಧಾರದಲ್ಲಿ ಆರಿಸುವುದನ್ನು ನೋಡುತ್ತೇವೆ. ಇದರಿಂದ ಆಯಾ ಪ್ರದೇಶಗಳು, ಜಾತಿಗಳು, ಅಭಿವೃದ್ಧಿಯಾಗಿ ಬಿಡುತ್ತದೆ ಎಂಬ ಭ್ರಮೆಯನ್ನು ಹುಟ್ಟಿಸಲಾಗುತ್ತದೆ. ಆದರೆ ಇಲ್ಲಿಯವರೆಗಿನ ಅನುಭವ ಜನರಿಗೆ ನಿಚ್ಚಳವಾಗಿದೆ. ಪ್ರದೇಶಗಳ, ಜಾತಿಯ ಹೆಸರಿನಲ್ಲಿ ಆಯಾ ಸಚಿವರು ಬೇಕಾದಷ್ಟು ಅಭಿವೃದ್ಧಿಯಾಗಿದ್ದಾರೆ. ಹೀಗಾಗಿಯೇ ಸಂಸತ್ ಸದಸ್ಯರಲ್ಲಿ ಹಾಗೂ ಸಚಿವ ಸಂಪುಟದಲ್ಲಿ ನೂರಾರು ಕೋಟಿಗಳ ಒಡೆಯರು ಎಷ್ಟೊಂದು ಮಂದಿ ಇದ್ದಾರೆ ಎನ್ನುವುದು ಜನಜನಿತವಾಗಿದೆ. ಕರ್ನಾಟಕದಿಂದ ಕೇಂದ್ರ ಸಚಿವರಾಗಿದ್ದ ಹಲವರ ಬಗ್ಗೆಯೂ ಕೇವಲ ರೈಲ್ವೆ ಸಚಿವ ಜಾಫರ್ ಷರೀಫ್‌ರು ರಾಜ್ಯ ರೈಲ್ವೆ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಮಾತ್ರ ಉಲ್ಲೇಖಿಸಲಾಗುತ್ತದೆ. ಒಟ್ಟಿನಲ್ಲಿ ಕೇಂದ್ರ ಸಚಿವ ಸಂಪುಟದಲ್ಲಿ ಎಷ್ಟು ಜನ ಪ್ರಾತಿನಿಧ್ಯ ಪಡೆದಿದ್ದಾರೆ ಎನ್ನುವುದು ಕರ್ನಾಟಕದ ಅಭಿವೃದ್ಧಿಗೆ ಬಹಳ ದೊಡ್ಡ ಸಹಾಯವೇನೂ ಅಲ್ಲ.

ಆದರೆ ಅದೇ ಸಮಯದಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್‌ನ ಸಾಧನೆಯು ಇಷ್ಟೊಂದು ಕಳಪೆಯಾಗಿದ್ದರೂ ಸಚಿವಸ್ಥಾನದ ಸುರಿಮಳೆಯಾಗಿರುವುದರ ಹಿಂದೆ ನಿಶ್ಚಿತವಾದ ಕಾರ್ಯಯೋಜನೆಯಿದೆ. 2004ರ ಸಚಿವ ಸಂಪುಟದಲ್ಲಿ ಜನತೆಯ ಸಂಪರ್ಕವೇ ಇಲ್ಲದ ದಂತ ಗೋಪುರದ ರಾಜಕಾರಣಿಗಳನ್ನು ರಾಜ್ಯ ಸಚಿವರನ್ನಾಗಿಸಿ ಕೈ ಸುಟ್ಟುಕೊಂಡ ಕಾಂಗ್ರೆಸ್ ಕರ್ನಾಟಕದಲ್ಲಿ ತನ್ನ ನೆಲೆಯನ್ನು ವಿಸ್ತರಿಸಲು ಈ ಆಯ್ಕೆಗಳನ್ನು ಮಾಡಿದೆ.

ಇಡೀ ದೇಶದಲ್ಲಿ ತನ್ನ ಶಕ್ತಿ ಕುಗ್ಗುತ್ತಿರುವುದರಿಂದ 2009ರ ಚುನಾವಣೆ ಮೈತ್ರಿಯ ಸಂದರ್ಭದಲ್ಲಿ ತನ್ನ ಮಿತ್ರ ಪಕ್ಷಗಳೇ, ಬಿಹಾರ, ಉತ್ತರ ಪ್ರದೇಶಗಳಲ್ಲಿ ಮಾಡಿದ ಅವಮಾನದಿಂದ ಕುದಿದು ಹೋಗಿರುವ ಕಾಂಗ್ರೆಸ್ ತನ್ನ ನೆಲೆಯನ್ನು ಅಖಿಲ ಭಾರತ ಮಟ್ಟದಲ್ಲಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ದೃಢವಾದ ತೀರ್ಮಾನ ಮಾಡಿದೆ. ಈ ತೀರ್ಮಾನದ ಗೌರವವನ್ನೆಲ್ಲಾ ರಾಹುಲ್‌ಗಾಂಧಿಯ ತಲೆಗೇರಿಸಿ ಅವರನ್ನು ಪುಖಾಂನು ಪುಂಖವಾಗಿ ಹೊಗಳುತ್ತಾ ಭಾರತದ ಟಿ.ವಿ., ಪತ್ರಿಕೆಗಳು ರಾಜಸ್ಥಾನದ ಭಟಂಗಿಗಳಂತೆ ವರ್ತಿಸುತ್ತಿದ್ದಾರೆ. ಎಲ್ಲಿ ಕಾಂಗ್ರೆಸ್ ತನ್ನ ನೆಲೆಯನ್ನು ಶೀಘ್ರವಾಗಿ ವಿಸ್ತರಿಸುವುದು ಅಗತ್ಯವಿದೆ ಮತ್ತು ಸಾಧ್ಯವಿದೆ ಎಂದು ಲೆಕ್ಕ ಹಾಕಿದೆಯೋ ಆ ರಾಜ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಅದರಲ್ಲಿ ಕರ್ನಾಟಕ ರಾಜ್ಯ ಅವರಿಗೆ ಫಲವತ್ತಾಗಿ ಕಂಡಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ. ಹೆಚ್ಚು ಜನ ಬಿಜೆಪಿ ಸಂಸದರನ್ನು ಆರಿಸಿ ಕಳುಹಿಸಲಾಗಿದೆ. ಮುಂದಿನ ಚುನಾವಣೆಗಳ ವೇಳೆಗೆ ಬಿಜೆಪಿ ಬಗ್ಗೆ ತೀವ್ರ ಅಸಂತೃಪ್ತಿ ಬೆಳೆದಿರುತ್ತದೆ. ಅದನ್ನು ರಾಜ್ಯದ ಕೆಲವು ಭಾಗಗಳಲ್ಲಿ ಮಾತ್ರ ಕಾಂಗ್ರೆಸ್ ಉಪಯೋಗಿಸಿಕೊಳ್ಳಲು, ವಿಧಾನಸಭಾ, ಲೋಕಸಭಾ ಸ್ಥಾನಗಳನ್ನು ಪಡೆದುಕೊಳ್ಳಲು ಸಾಧ್ಯ. ಉಳಿದ ಭಾಗಗಳಲ್ಲಿ ಜೆಡಿ(ಎಸ್) ಭದ್ರವಾಗಿದೆ. ಅಲ್ಲಿ ಜೆಡಿ(ಎಸ್) ಪಕ್ಷವೇ ಬಿಜೆಪಿ ವಿರುದ್ಧದ ಅಸಂತೃಪ್ತಿಯ ಲಾಭವನ್ನು ಪಡೆಯುತ್ತದೆ. ಅದರ ಫಲವಾಗಿ ಕಾಂಗ್ರೆಸ್ ರಾಜ್ಯದಲ್ಲಿ ಏಕಾಂಗಿಯಾಗಿ ಬಹುಮತ ಪಡೆಯುವುದು ಕಷ್ಟವಾಗುತ್ತದೆ.

ಅದೇ ಸಮಯದಲ್ಲಿ ಚುನಾವಣೆಯಿಂದ ಚುನಾವಣೆಗೆ ಜೆಡಿ(ಎಸ್) ನ ಶಕ್ತಿ ಕುಗ್ಗುತ್ತಿದೆ. ಜೆಡಿ(ಎಸ್) ನಿಂದ ತೆರವಾದ ಜಾಗವನ್ನು ಆಕ್ರಮಿಸಲು ಬಿಜೆಪಿ ಸರ್ವ ಪ್ರಯತ್ನ ನಡೆಸಿದೆ. ಅದನ್ನು ತಪ್ಪಿಸಿ ಕಾಂಗ್ರೆಸ್ ಆ ಸ್ಥಾನವನ್ನು ಆವರಿಸಿಕೊಳ್ಳಬೇಕು. ಆ ಮೂಲಕ ರಾಜ್ಯದಲ್ಲಿ ಏಕಾಂಗಿಯಾಗಿ ಸರ್ಕಾರ ರಚಿಸುವ ಶಕ್ತಿಯನ್ನೂ ಗಳಿಸಿಕೊಳ್ಳಬೇಕು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ. ಅದಕ್ಕೆ ತಕ್ಕಂತೆ ದೇವೇಗೌಡ ಕುಮಾರಸ್ವಾಮಿಗೆ ಎದುರಾಳಿಯಾಗಿ

ಪುಟ 11ಕ್ಕೆ

ಚಿಕೂನ್ ಗುನ್ಯಾ ಪೀಡಿತ ಕೆ.ಜಿ. ಹಳ್ಳಿ ಜನರ ಬಾಧೆ

2000ದ ವೇಳೆಗೆ ಎಲ್ಲರಿಗೂ ಆರೋಗ್ಯ-ಇದು ಆಲ್‌ಮಾಟ ಘೋಷಣೆ. ಆದರೆ 2009 ಬಂದಾಯ್ತು. ಆಲಮಾಟ ಘೋಷಣೆ ಬರೀ ಘೋಷಣೆಯಾಗಿ ಬಿಳಿ ಹಾಳೆಯ ಮೇಲೆ ಉಳಿದಿದೆ. ಇಂದು ದುಬಾರಿಯಾಗುತ್ತಿರುವ ಆರೋಗ್ಯ ಶ್ರೀಮಂತರ ಸ್ವತ್ತು ಎಂಬಂತಾಗಿ, ಜನಸಾಮಾನ್ಯರಿಗೆ ಎಟುಕದ ಗಗನ ಕುಸುಮವಾಗಿದೆ.

ಜನ ಸಾಮಾನ್ಯರು ಖಾಯಿಲೆಯಿಂದ ಮುಕ್ತಿ ಪಡೆಯುವ ಬದಲು, ಜೀವನದಿಂದಲೇ ಮುಕ್ತಿ ಹೊಂದುತ್ತಿದ್ದಾರೆ. ಮಲೇರಿಯಾ, ಟೈಫಾಯಿಡ್, ಕಾಲರಾ, ಟಿ.ಬಿ. ಅಂತಹ ಮಾರಣಾಂತಿಕ ಖಾಯಿಲೆಗಳು ಅಂದು ಹೇಳ ಹೆಸರಿಲ್ಲದಂತಾಗಿದ್ದುದು ಇಂದು 'ಹೋದ್ಯಾ ಪಿಶಾಚಿ ಎಂದರೆ ಬಂದೇ ಗವಾಕ್ಷಲಿ' ಎಂಬಂತೆ ಮತ್ತೆ ತಲೆ ಎತ್ತುತ್ತಲಿದೆ. ಇದರ ಜೊತೆ ಜೊತೆಯಲ್ಲೇ ಡೆಂಗಿ, ಹಂದಿಜ್ವರ,ಚಿಕನ್ ಗುನ್ಯಾ ಅಂತಹ ಹೊಸ ಹೊಸ ಖಾಯಿಲೆಗಳು ಸುನಾಮಿ ತರ ಬಂದು ಅಪ್ಪಳಿಸಿ ಜನಸಾಮಾನ್ಯರ ಜೀವ ತಿನ್ನುತ್ತಿವೆ.

ಜೀವ ರಕ್ಷಿಸುವ ಔಷಧಿಗಳಿದ್ದರೂ, ಬಡ ಜನರಿಗೆ ಮಾತ್ರ ದಕ್ಕುತ್ತಿಲ್ಲ. ಒಂದೆರಡು ವರ್ಷಗಳಿಂದ ಚಿಕನ್ ಗುನ್ಯಾ ನಗರದ ಎಲ್ಲಾ ಭಾಗಗಳಲ್ಲೂ ಹಬ್ಬಿ ಜನ ಭಯಭೀತರಾಗಿದ್ದಾರೆ. ಕಳೆದ ಏಪ್ರಿಲ್ 17 ರಿಂದ ಕೆ.ಜಿ.ಹಳ್ಳಿಯ ವಿವಿಧ ಪ್ರದೇಶಗಳಲ್ಲಿ ಜನ ಚಿಕನ್ ಗುನ್ಯಾದಿಂದ ನರಳುತ್ತಿದ್ದಾರೆ. ಚಿಕನ್ ಗುನ್ಯಾ ರೋಗ ಪೀಡಿತ ಪ್ರದೇಶವಾದ ಕೆ.ಜಿ.ಹಳ್ಳಿಗೆ ಜನವಾದಿಯ ಜಿಲ್ಲಾ ಅಧ್ಯಕ್ಷೆ ಶಾರದಾ, ಕಾರ್ಯದರ್ಶಿ ಗೌರಮ್ಮ, ಜಿಲ್ಲಾ ಸಮಿತಿ ಸದಸ್ಯರಾದ ಪ್ರಭಾ 25.05.09ರಂದು ಭೇಟಿ ನೀಡಿದ್ದರು.

ಕೆ.ಜಿ.ಹಳ್ಳಿಯ ಪ್ರಾಥಮಿಕ ಸಮುದಾಯ ಕೇಂದ್ರಕ್ಕೆ (ಸಿಹೆಚ್‌ಸಿ) ಭೇಟಿ ನೀಡಿದಾಗ ಕಂಡ ದೃಶ್ಯವೆಂದರೆ ಸಿಹೆಚ್‌ಸಿ ಒಳಗೆ ಕಸದ ರಾಶಿ, ಕುಳಿತುಕೊಳ್ಳಲು ರೋಗಿಗಳಿಗೆ ಸ್ಥಳವಿಲ್ಲ. ನೂತನ ಕಟ್ಟಡ ನಿರ್ಮಾಣವಾಗಿದೆ. ಇನ್ನೂ ಪ್ರಾರಂಭವಾಗಿಲ್ಲ.

ಚಿಕನ್‌ಗುನ್ಯಾ ಎಂಬ ಸುದ್ದಿ ಪ್ರಚಾರ ಆದಾಗಿನಿಂದ ಆರೋಗ್ಯ ಕೇಂದ್ರಕ್ಕೆ ಪ್ರತಿದಿನ 600 ಜನ ರೋಗಿಗಳು ಬರಲು ಪ್ರಾರಂಭಿಸಿದ್ದಾರೆ. ಅದರಲ್ಲಿ 300 ಜನರಿಗೆ ಮಾತ್ರ ಈ ಖಾಯಿಲೆ, ಉಳಿದವರು ತಮಗೂ ಬಂದಿದೆ ಅಂತ ಬರುತ್ತಾರೆ. ಇಂಜೆಕ್ಷನ್ ಕೊಡಿ ಅಂತ ಪೀಡಸ್ತಾರೆ, ಚಿಕನ್ ಗುನ್ಯಾ ಮಾತ್ರೆಯಿಂದಲೇ ವಾಸಿ ಆಗುತ್ತದೆ ಆದ್ರೆ ಇಂಜೆಕ್ಷನ್‌ನಿಂದಲೇ ವಾಸಿ ಆಗ್ತದೆ ಎಂಬ ತಪ್ಪು ಕಲ್ಪನೆ ಇದೆ. ಅದನ್ನು ನೀವು ಅವರಿಗೆ ತಿಳಿಸಿ ಹೋಗಲಾಡಿಸಬೇಕು ಅಂತಾರೆ ಓಪಿಡಿ ಪ್ಲೇಸ್‌ನಲ್ಲಿ ವೈದ್ಯರಾಗಿ ಬಂದಿರುವ ಡಾ: ಸುಧಾರಾಣಿ.

ಸಿಹೆಚ್‌ಸಿ ಪಕ್ಕದಲ್ಲಿರುವ ಕಾಡಗೊಂಡನಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ ಭೇಟಿ ನೀಡಲಾಯಿತು. ಅಲ್ಲಿ 6 ನರ್ಸ್‌ಗಳಿಗೆ 3 ಜನ ವೈದ್ಯರಿಗೆ ಪ್ರಾವಿಷನ್ ಇದೆ. ಆದರೆ ಅಲ್ಲಿರುವುದು ಇಬ್ಬರು ನರ್ಸ್, ಒಬ್ಬರು ಡಾಕ್ಟರ್. ಆ ದಿನ ಡಾಕ್ಟರ್ ಅನಿತಾ ಶ್ರೀಲಕ್ಷ್ಮಿ ರಜೆಯಲ್ಲಿದ್ದರು. ನಮಗೆ ಸಿಗಲಿಲ್ಲ. ಒಂದು ತಿಂಗಳಿಂದ ಚಿಕನ್‌ಗುನ್ಯಾ ಈ ಸುತ್ತಮುತ್ತಲ ಪ್ರದೇಶಗಳಲ್ಲಿ ಕಾಣಿಸಿಕೊಂಡಿವೆ.

ಇತ್ತೀಚಿಗೆ ಅದನ್ನು ನಿವಾರಿಸಲು ಸಾಧ್ಯವಾಗಿದೆ. ಇವತ್ತು 10 ಜನ ಮಾತ್ರ ಬಂದಿದ್ರು, ಅವರಿಗೆ ಮಾತ್ರೆ ಕೊಟ್ಟು ಕಳುಹಿಸಿದ್ದೇವೆ. ಮಧ್ಯಾಹ್ನ ಜನ ಬರುವುದಿಲ್ಲ. ಇಲ್ಲಿ ಡ್ರಿಪ್ಸ್ ಸೌಲಭ್ಯ ಇಲ್ಲ. ಮಲ್ಟಿಪರ್ಪಸ್ ವರ್ಕರ್ಸ್ ಇಲ್ಲ, ಲಿಂಕ್ ವರ್ಕರ್ಸ್ ಅಂತೂ ಮೊದಲೇ ಇಲ್ಲ ಅಂತ ವಿಷಾದನೀಯವಾಗಿ ವರದಿ ಒಪ್ಪಿಸ್ತಾರೆ ಆರೋಗ್ಯ ಕೇಂದ್ರದ ನರ್ಸ್ ಗ್ಲೋರಿ ಪ್ರೇಮ.

ಸೊಳ್ಳೆ ಮೂಲಗಳ ನಾಶ ಮಾಡೋದ್ರಿಂದ ಮಾತ್ರ ಈ ಕಾಯಿಲೆಯನ್ನು ತಡೆಗಟ್ಟಲು ಸಾಧ್ಯ. ಮನೆಗಳಿಗೆ ಹೋಗಿ ಸಮೀಕ್ಷೆ ಮಾಡಿದ್ರೆ ಲಾರ್ವಾ ಹುಳುಗಳು ನೀರಿನಲ್ಲಿರುವುದು ಕಂಡು ಬರುತ್ತದೆ. ಆ ನೀರನ್ನು ಹೊರಗೆ ಚೆಲ್ಲಿ, ಈ ನೀರಿನಿಂದಲೇ ಕಾಯಿಲೆ ಬರುವುದು ಎಂಬ ಜಾಗೃತಿ ಜನರಲ್ಲಿ ಮೂಡಿಸಿದಾಗ ಮಾತ್ರ ಈ ಕಾಯಿಲೆಯನ್ನು ತಡೆಗಟ್ಟಲು ಸಾಧ್ಯ. ಸೊಳ್ಳೆ ಉತ್ಪತ್ತಿಯಾಗುವ ಮೂಲ ನಿರ್ಮೂಲನೆ ಮಾಡಿ ಸೋರ್ಸ್ ರಿಡಕ್ಷನ್ ಮಾಡಿರುವುದರಿಂದಲೇ ಈ ಕಾಯಿಲೆ ಕಂಟ್ರೋಲ್‌ಗೆ ಬಂದಿದೆ ಅಂತ ಹೇಳ್ತಾರೆ ಡಿ.ಜೆ.ಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಹೆರಿಗೆ ಆಸ್ಪತ್ರೆಯ ಸಹಾಯಕ ಸರ್ಜನ್ ಡಾ: ಬಿ.ಸುನಿತಾ.

ಏಪ್ರಿಲ್ 17 ರಿಂದ ದಿನಕ್ಕೆ 1000 ಜನ ರೋಗಿಗಳು ಬರ್ತಿದ್ದರು. ಚಿಕಿತ್ಸೆ ಕೊಡ್ತಾ ಇದ್ದೀವಿ ಈಗ ರೋಗಿಗಳ ಸಂಖ್ಯೆ ಕಡಿಮೆ ಆಗಿದೆ, ನೋಡಿಕೊಳ್ಳಬೇಕು, ಇದಕ್ಕೂ ಗಮನಹರಿಸಬೇಕು. ಸಾಕಾಗಿ ಹೋಗಿದೆ ಒಂದು ತಿಂಗಳಿಂದ, ನಾಳಿದ್ದಿನಿಂದ ರಜೆ ಹಾಕಿ ಹೋಗ್ತಿನಿ ಎಂದು ತಮ್ಮ ಬೇಸರವನ್ನು ತೋಡಿಕೊಂಡರು ಡಾ: ಸುನಿತಾ.

ಇಲ್ಲಿ ಎಷ್ಟು ಜನ ಡಾಕ್ಟರ್ಸ್ ಇದ್ದಾರೆ ಎಂಬ ಪ್ರಶ್ನೆಗೆ ಇಬ್ಬರು ಡಾಕ್ಟರ್ಸ್‌ಗೆ ಪ್ರಾವಿಷನ್ ಇದೆ, ಆದ್ರೆ ಇಲ್ಲಿ ಇರುವವಳು ನಾನೊಬ್ಬಳೇ ಡಾಕ್ಟರ್. ಅವಶ್ಯಕತೆ ಇರುವಾಗ ಡಾಕ್ಟರ್ಸ್ ಅನ್ನು, ನರ್ಸ್‌ಗಳನ್ನು ನೇಮಕ ಮಾಡಬಾರದೆ, ಕೆ.ಜಿ. ಹಳ್ಳಿ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲೂ ಒಬ್ಬರೆ ವೈದ್ಯರಿದ್ದಾರೆ ಎಂದು ಕೇಳಿದರು. ಇಡೀ ಬಿಬಿಎಂಪಿಯಲ್ಲಿ acute staff shortage ಇದೆ ಕಣ್ರೆ, ತಕ್ಷಣ ನೇಮಕಾತಿ ಸಾಧ್ಯವಿಲ್ಲ, ಇದು Long process ಅಂತ ಉತ್ತರ ನೀಡ್ತಾರೆ ಡಾ: ಸುನೀತಾ.

ಜನವಾದಿಯ ಉದ್ದೇಶ, ಅಲ್ಲಿಗೆ ಹೋಗಿ ಇದನ್ನು ಕೇಳಿಕೊಂಡು ಬರುವುದಾಗಿರಲಿಲ್ಲ. ತುರ್ತಾಗಿ ಕಾಯಿಲೆಯಿಂದ ನರಳುವವರಿಗೆ ಚಿಕಿತ್ಸೆ ಕೊಡಿಸುವುದಾಗಿತ್ತು. ಆದರೆ ಅಲ್ಲಿ ಹೋಗಿ ನೋಡಿದ ನಂತರ ಕಂಡು ಬಂದುದು ಕಸ ವಿಲೇವಾರಿ ಆಗದೆ ಇರುವುದು, ಪ್ರತಿನಿತ್ಯ ನೀರು ಬರದಿರುವುದು, ತುರ್ತಾಗಿ ಆಗಬೇಕಾಗಿರುವುದು 1. ಕಸ ವಿಲೇವಾರಿ ಆಗಬೇಕು. 2. ಪ್ರತಿದಿನ ನೀರು ದೊರೆಯಬೇಕು.

ಪ್ರತಿ ದಿನ ನೀರು ದೊರೆತರೆ, ಒಂದು ವಾರಗಳ ಕಾಲ ನೀರನ್ನು ಶೇಖರಿಸಿಟ್ಟುಕೊಳ್ಳುವ ಪ್ರಮೇಯ ಬರುವುದಿಲ್ಲ. ಶೇಖರಿಸಿಟ್ಟ ನೀರಿನಲ್ಲಿ ಲಾರ್ವಾ ಹುಳುಗಳು ಶೇಖರಣೆ ಆಗುವುದನ್ನು ತಡೆಗಟ್ಟಬಹುದು. ಕೆ.ಜಿ.ಹಳ್ಳಿ ಡಿ.ಜೆ.ಹಳ್ಳಿಗಳಲ್ಲಿ ಹೆಚ್ಚಾಗಿ ವಾಸಿಸುವವರು ಬಡ ಮುಸಲ್ಮಾನರು ಹಾಗೂ ತಮಿಳು ಭಾಷಿಗರು. ಬಡ ಮುಸಲ್ಮಾನರು ಹಾಗೂ ತಮಿಳು ಜನತೆ ವಾಸಿಸುವ ಪ್ರದೇಶ ಎಂಬ ಕಾರಣಕ್ಕಾಗಿ ಆರೋಗ್ಯ ಇಲಾಖೆ ನಿರ್ಲಕ್ಷ್ಯ ವಹಿಸಿದಂತಿದೆ. ಇದರ ವಿರುದ್ಧ ಹೋರಾಟ ಕಟ್ಟಿ ಬೆಳೆಸುವುದೇ ಅದಕ್ಕಿರುವ ದಾರಿ.

ಕಲುಷಿತ ನೀರನ್ನೇ ಶೇಖರಿಸಿಕೊಳ್ಳುವ, ಆ ನೀರನ್ನೇ ಅಡಿಗೆಗೆ, ಕುಡಿಯಲು ಬಳಸುವುದರಿಂದ ಕಾಯಿಲೆ ಬರುತ್ತದೆ, ಅನಾಹುತವಾಗುತ್ತದೆ ಎಂಬುದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಜನವಾದಿ ಈ ಕೂಡಲೇ ಒಂದು ಮೆಡಿಕಲ್ ಕ್ಯಾಂಪ್ ನಡೆಸುವುದರ ಮೂಲಕ ಜಾಗೃತಿ ಕ್ಯಾಂಪ್ ಅನ್ನು ಮಾಡಲು ತೀರ್ಮಾನಿಸಿದೆ.

● ಕೆ.ಎಸ್.ಶಾರದಾ

ಬೇತಾಳನ ಕತೆಗಳು ಖಾಲಿ ?!

ಎಷ್ಟು ಸಿನಿಮಾಗಳು ತೋಪಾದರೂ ಮತ್ತೆ ಮತ್ತೆ ಅಂಥದ್ದೇ ಡಬ್ಬಾ ಸಿನಿಮಾಗಳನ್ನು ತೆಗೆಯುವ ಕನ್ನಡ ಸಿನಿಮಾ ನಿರ್ಮಾಪಕನಂತೆ ರಾಜ ತ್ರಿವಿಕ್ರಮನು ಅರಣ್ಯದಲ್ಲಿನ ಮರದಲ್ಲಿ ನೇತಾಡುತ್ತಿದ್ದ ಶವವನ್ನು ಹೆಗಲಿಗೇರಿಸಿ ಕೊಂಡು ಹೊರಟನು. ಆಗ ಅದರೊಳಗಿದ್ದ ಬೇತಾಳವು ಅಯ್ಯಾ ರಾಜನೇ, ಎಷ್ಟು ಭ್ರಷ್ಟರನ್ನು ಹಿಡಿದರೂ ಅವರೆಲ್ಲ ಭಡ್ತಿ ಪಡೆಯುತ್ತಿರುವುದನ್ನು ನೋಡುತ್ತಿದ್ದರೂ ಮತ್ತೆ ಮತ್ತೆ ಭ್ರಷ್ಟರ ಮೇಲೆ ಲೋಕಾಯುಕ್ತರು ಧಾಳಿ ಮಾಡುವಂತೆ ನಿನ್ನ ಪ್ರಯತ್ನವು ವ್ಯರ್ಥವಲ್ಲವೇ? ಸುಮ್ಮನೇ ಶ್ರಮ ಪಡುತ್ತಿರುವ ನಿನ್ನ ಮಾರ್ಗಾಯಾಸ ಪರಿಹಾರಕ್ಕಾಗಿ ನಿನಗೊಂದು ಕತೆ ಹೇಳುವೆ ಕೇಳು.

ಇಂದಾನೊಂದು ಕಾಲದಲ್ಲಿ ಯೂರಪ್ಪ ಈರಪ್ಪ ಎಂಬ ಇಬ್ಬರು ಗೆಳೆಯರಿದ್ದರು. ಚಡ್ಡಿ ದೋಸ್ತು, ಗಳಸ್ಯ ಕಂಠಸ್ಯ ಅಂತ ಹೇಳ್ತಾರಲ್ಲ ಹಾಗೆ. ಮಾಡಲು ಏನೂ ಕೆಲಸವಿಲ್ಲದ್ದರಿಂದ ರಾಜಕೀಯ ಸೇರಿ ಹಕ್ಕ ಬುಕ್ಕರು ರಾಜ್ಯ ಕಟ್ಟಿದಂತೆ ಕಮಲ ಪಕ್ಷವನ್ನು ಕಟ್ಟಿದರು. ಎಂದಾದರೊಂದು ದಿನ ರಾಜನಾಗಬೇಕೆಂಬುದು ಯೂರಪ್ಪನ ಜೀವನದ ಮಹತ್ವಾಕಾಂಕ್ಷೆಯಾಗಿತ್ತು. ಛಲ ಬಿಡದ ತ್ರಿವಿಕ್ರಮನಾದ ನಿನ್ನಂತೆಯೇ ಅವರು ಕೂಡ ಛಲ ಬಿಡದೆ ಏನೇನೋ ಮಾಡಿ ರಾಜನಾಗಿಯೇ ಬಿಟ್ಟ. ಅಲ್ಲಿವರೆಗೂ ಯೂರಪ್ಪ ಈರಪ್ಪರ ಮಧ್ಯೆ ಏನೂ ಭಿನ್ನಾಭಿಪ್ರಾಯಗಳಿರಲಿಲ್ಲ. ಆದರೆ ಯೂರಪ್ಪನ ಆಸೆ ಅಲ್ಲಿಗೇ ಮುಗಿಯಲಿಲ್ಲ. ತನ್ನ ಯುವರಾಜ ಗವೇಂದ್ರನನ್ನು ಚಕ್ರವರ್ತಿ ಮಾಡಬೇಕೆಂಬ ದುರಾಸೆಯುಂಟಾಯಿತು.

ಕ್ಯಾತೆ

ತ್ರೀ

ಅದಾದರೂ ತೊಂದರೆಯೇನಿರಲಿಲ್ಲ. ಆದರೆ ಅದಕ್ಕಾಗೆ ಯೂರಪ್ಪನು ತನ್ನ ಬಾಲ್ಯದ ಜೊತೆಗಾರ ಈರಪ್ಪನನ್ನೇ ತುಳಿಯಲಾರಂಭಿಸಿದ. ಇದರು ವಿರುದ್ಧ ಕೋಪಗೊಂಡು ಯೂರಪ್ಪನ ವಿರುದ್ಧವೇ ತಿರುಗಿ ಬೀಳಲು ಪ್ರಯತ್ನ ಪಟ್ಟ. ಆದರೆ ಯೂರಪ್ಪನ ಶಕ್ತಿಯ ವಿರುದ್ಧ ಈರಪ್ಪನ ಶಕ್ತಿ ಸಾಲದಾಯಿತು.

ಎಲೈ ರಾಜ ತ್ರಿವಿಕ್ರಮನೇ ಆ ಯೂರಪ್ಪ ಈರಪ್ಪ ಒಟ್ಟಿಗೇ ಬೆಳೆದರೂ ಯೂರಪ್ಪ ಈರಪ್ಪನನ್ನೇ ತುಳಿದಿದ್ದೇಕೆ? ಮುಂದೆ ಈರಪ್ಪನ ಗತಿಯೇನು ಎಂದು ತಿಳಿದೂ ಹೇಳದಿದ್ದರೆ ನಿನ್ನ ತಲೆ ಎಲ್.ಕೆ. ಅಡ್ವಾಣಿಯವರ ಪ್ರಧಾನಿಯಾಗುವ ಕನಸಿನಂತೆ ಸಿಡಿದು ಚೂರಾಗಿ ಹೋಗುವುದು ಎಂದು ಬೇತಾಳವು ಹೇಳಿತು. ಆಗ ರಾಜ ತ್ರಿವಿಕ್ರಮನು ಎಲೈ ಬೇತಾಳವೇ ಇತ್ತೀಚಿಗೆ ಟೀವಿ ನೋಡಿ ನೋಡಿ ನೀನೂ ಹಾಳಾಗಿ ಹೋಗಿದ್ದೀಯ. ನಿನ್ನ ಕತೆಗಳೆಲ್ಲ ಖಾಲಿಯಾಗಿ, ಕತೆಯಿಲ್ಲದಿದ್ದರೂ ಸುಮ್ಮನೇ ಎಳೆಯುವ ಧಾರವಾಹಿಯಂತೆ ನೀನೂ ಕಾಲಹರಣ ಮಾಡಲು ಏನೇನೋ ಹೇಳಲಾರಂಬಿಸಿದ್ದೀಯ. ಯೂರಪ್ಪ ಈರಪ್ಪನನ್ನು ತುಳಿಯಲು ಕಾರಣವೇನೆಂದು ಕೇಳಿದ್ದೀಯ. ರಾಜಕೀಯದಲ್ಲಿ ಯಾರೂ ಮಿತ್ರರೂ ಇಲ್ಲ ಶತೃಗಳೂ ಇಲ್ಲ ಎಂಬುದು ಗೊತ್ತಿದೆಯಲ್ಲ. ಶತೃಗಳನ್ನೆಲ್ಲ ಆಪರೇಷನ್ ಮಾಡಿ ಮಿತ್ರರನ್ನಾಗಿಸಿಕೊಂಡ ಮೇಲೆ ಮಿತ್ರರು ಸಹಜವಾಗಿ ಶತೃಗಳಾಗಿದ್ದಾರೆ. ಈರಪ್ಪನ ಗತಿಯೇನೆಂದು ಕೇಳಿದ್ದೀಯೆ. ಭವಿಷ್ಯ ಹೇಳಲು ನಾನೇನು ಮಠದ ಸ್ವಾಮಿಯೇ? ಅಥವಾ ಭವಿಷ್ಯವೆಂದು ಬುರುಡೆ ಬಿಡಲು ನಾನೇನು ಟೀವಿಯಲ್ಲಿ ಬರುವ ಬ್ರಹ್ಮಾಂಡ ಅಂಕಲ್ಲೋ? ಎಂದು ಹೇಳಲು, ರಾಜನ ಮೌನ ಭಂಗವಾದುದರಿಂದ ನಾನು ಹೋಗುತ್ತಿದ್ದೇನೆ ಎಂದು ಬೇತಾಳವು ಅಧಿಕಾರಸ್ತರಿಗೆ ಜೋತು ಬೀಳುವ ಪುಡಾರಿಗಳಂತೆ ಮರದಲ್ಲಿ ನೇತಾಡಲಾರಂಭಿಸಿತು

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸರಿಯಾಗಿ ಜಾರಿ ಮಾಡಿದರೆ ಕೇಂದ್ರ ಸರ್ಕಾರಕ್ಕೆ ಹೆಸರು ಬರುತ್ತದೆ ಎಂದು ಕರ್ನಾಟಕ ರಾಜ್ಯ ಸರ್ಕಾರ ಯೋಚಿಸಿದರೆ ಜನರ ಆಕ್ರೋಶದ ಹೊಡೆತಕ್ಕೆ ಈ ಸರ್ಕಾರ ಗುರಿಯಾಗಬೇಕಾಗುತ್ತದೆ.

ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಯಾಗಲಿ

ನಿತ್ಯಾನಂದಸ್ವಾಮಿ


ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ ಕರ್ನಾಟಕದಲ್ಲಿ ವಿಫಲವಾಗಿದೆ ಎಂದು ರಾಜ್ಯ ಬಿಜೆಪಿ ಸರ್ಕಾರ ಮೊದಲ ಬಾರಿಗೆ ಒಪ್ಪಿಕೊಂಡಿದೆ. ಮೇ 5 ರಂದು ವಿಕಾಸಸೌಧದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿ ಯಡಿಯೂರಪ್ಪರವರು ಈ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು ಎಂದು ವರದಿಯಾಗಿದೆ. ಉದ್ಯೋಗ ಖಾತ್ರಿ ಯೋಜನೆ ರಾಜ್ಯದಲ್ಲಿ ವಿಫಲವಾಗಿರಲು ಯಡಿಯೂರಪ್ಪನವರ ಸರ್ಕಾರವೇ ಕಾರಣವಾಗಿದೆ. ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಯಾಗಲು ಬಿಟ್ಟರೆ, ಅದರ ಕೀರ್ತಿ ಕೇಂದ್ರದ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ ಎಂಬ ರಾಜಕೀಯ ಮತ್ಸರದಿಂದಾಗಿ ರಾಜ್ಯ ಸರ್ಕಾರ ಯೋಜನೆಯ ಜಾರಿಗಾಗಿ ಆಸಕ್ತಿ ತೋರಿರಲಿಲ್ಲ. ಈಗ ಚುನಾವಣೆಯ ನಂತರ ರಾಜ್ಯ ಬಿಜೆಪಿ ಸರ್ಕಾರಕ್ಕೆ ಯೋಜನೆಯ ಮಹತ್ವ ಅರ್ಥವಾದಂತೆ ಕಾಣುತ್ತದೆ. ಈ ಯೋಜನೆ ಸರಿಯಾಗಿ ಜಾರಿಯಾದರೆ ಗ್ರಾಮೀಣ ಮತಗಳನ್ನು ಸುಲಭವಾಗಿಬುಟ್ಟಿಗೆ ಹಾಕಿಕೊಳ್ಳಬಹುದು ಎಂದು ಯಡಿಯೂರಪ್ಪನವರಿಗೆ ಈಗ ಜ್ಞಾನೋದಯ ಆಗಿರಬಹುದು.

ಅನಾಸಕ್ತಿ ಯಾಕೆ?

ಸರ್ಕಾರದ ಅನಾಸಕ್ತಿಯಿಂದಾಗಿ ಅಧಿಕಾರಿಗಳು ಸಹ ಯೋಜನೆಯ ಜಾರಿಗಾಗಿ ಕನಿಷ್ಠ ಆಸಕ್ತಿಯನ್ನೂ ತೋರಲಿಲ್ಲ. ಇದರ ಜಾರಿಯಾದರೆ ತಮಗೆ ವ್ಯಕ್ತಿಗತವಾಗಿ ಏನೂ ಲಾಭವಿಲ್ಲ ಎಂಬುದೇ ಅವರ ಅನಾಸಕ್ತಿ ಮತ್ತು ಅಸಹಕಾರದ ಮೂಲ. ಉದಾಹರಣೆಗೆ, ಅರಣ್ಯ ಇಲಾಖೆಯ ಅಧಿಕಾರಿಗಳು, ಅರಣ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ಬಳಸಬಹುದಾಗಿದೆ. ಆದರೆ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಈ ವಿಚಾರದಲ್ಲಿ ಆಸಕ್ತಿಯೇ ಇದ್ದಂತಿಲ್ಲ ಎಂದು ಮುಖ್ಯಮಂತ್ರಿ ಭಾಗವಹಿಸಿದ್ದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಆರೋಪ ವ್ಯಕ್ತವಾಯಿತು. ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯ ಅಭಿವೃದ್ಧಿ ಹೆಸರಿನಲ್ಲಿ ಸರ್ಕಾರದ ಹಣವನ್ನು ದುರುಪಯೋಗ ಮಾಡಿದ್ದೇ ಹೆಚ್ಚು. ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ಆ ರೀತಿಯ ದುರುಪಯೋಗ ಮಾಡಿಕೊಳ್ಳಲು ಅಷ್ಟೇನು ಸುಲಭ ಅವಕಾಶಗಳು ಇಲ್ಲದಿರುವುದೇ ಅರಣ್ಯ ಅಧಿಕಾರಗಳ ಮುತುವರ್ಜಿಯ ಕೊರತೆಗೆ ಕಾರಣವಾಗಿದೆ ಎಂದರೆ ತಪ್ಪಾಗದು.

ಯೋಜನೆಯನ್ನು ಆಕರ್ಷಕಗೊಳಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕೂಲಿ ದರವನ್ನು ಕೂಡಲೇ 82 ರೂಪಾಯಿಯಿಂದ 100ಕ್ಕೆ ಏರಿಸಬೇಕು. ರಾಜ್ಯ ಸರ್ಕಾರ ಕೃಷಿ ಕಾರ್ಮಿಕರಿಗೆ ನಿಗದಿಪಡಿಸಿರುವ ಕೂಲಿ ದಿನಕ್ಕೆ 100 ರೂ. ಇರುವಾಗ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿಯೂ 100 ರೂ.ದರದಲ್ಲಿ ಕೂಲಿ ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರವೇ ಮೂಲ ಕೂಲಿ ದರವನ್ನು 60 ರಿಂದ 100 ರೂಪಾಯಿಗೆ ಏರಿಸುವಂತೆ ಒತ್ತಾಯಿಸಬೇಕಾಗಿದೆ. ಕೆಲವು ರಾಜ್ಯಗಳಲ್ಲಿ ಈಗಾಗಲೇ ಕೃಷಿ ಕಾರ್ಮಿಕರ ದಿನಗೂಲಿ ರೂ.120 ದಾಟಿರುವುದರಿಂದ ಉದ್ಯೋಗ ಖಾತ್ರಿ ಯೋಜನೆಯ ಕೂಲಿ ದರ 150 ರೂ. ಆಗಬೇಕೆಂಬ ಬೇಡಿಕೆ ನ್ಯಾಯಬದ್ಧವಾಗಿದೆ.

ಇದುವರೆಗೆ ಕೇವಲ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ರೈತರ ಹಾಗೂ ಅತಿಸಣ್ಣ ರೈತರ



ಜಮೀನುಗಳಲ್ಲಿ ಮಾತ್ರ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೃಷಿ ಹೊಂಡ, ಇಂಗು ಗುಂಡಿಗಳನ್ನು ನಿರ್ಮಾಣ ಮಾಡಲು ಅವಕಾಶ ಇತ್ತು. ಈ ನಿಯಮವನ್ನು ಸಡಿಲುಮಾಡಿ 5 ಎಕರೆವರೆಗೆ ಜಮೀನು ಹೊಂದಿರುವ ಎಲ್ಲಾ ರೈತರ ಭೂಮಿಗೂ ಇದನ್ನು ವಿಸ್ತರಿಸಲು ನಿರ್ಧರಿಸಿರುವುದು ಸ್ವಾಗತಾರ್ಹವಾಗಿದೆ. ಅದೇ ರೀತಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರ ಬಿತ್ತನೆ, ನೀರು ಹಾಯಿಸುವುದು, ಕಳೆ ಕೀಳುವುದು, ಕಟಾವು ಮಾಡುವುದು ಮೊದಲಾದ ಕೃಷಿ ಕೆಲಸಗಳಿಗೂ ಅವಕಾಶ ಮಾಡಿಕೊಡುವುದು ಅಗತ್ಯವಿದೆ. ಇದರಿಂದ ಕೃಷಿ ಕೆಲಸಗಳಿಗಾಗಿ ಕೃಷಿ ಕಾರ್ಮಿಕರು ಲಭ್ಯವಾಗುತ್ತಿಲ್ಲ ಎಂಬ ಸಮಸ್ಯೆಗೂ ಪರಿಹಾರ ದೊರೆತಂತಾಗುತ್ತದೆ. ಮಾತ್ರವಲ್ಲ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯದೆ ಹಾನಿ ಅನುಭವಿಸುವ ಬಡ ರೈತರಿಗೆ ಸಹಾಯವಾಗುತ್ತದೆ.

ಈವರೆಗೆ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಮಾಡಿದ ಕೆಲಸವನ್ನು ಅಳೆಯುವ ಕಾರ್ಯವನ್ನು ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯ ಕಿರಿಯ ಎಂಜಿನಿಯರ್‌ಗಳು ನಿರ್ವಹಿಸುತ್ತಿದ್ದರು. ಇಡೀ ತಾಲ್ಲೂಕಿನ ಹೊಣೆಗಾರಿಕೆಯ ಕಾರಣದಿಂದ ಅವರು ಈ ಕೆಲಸವನ್ನು ಸಮರ್ಪಕವಾಗಿ ಮಾಡುತ್ತಿರಲಿಲ್ಲ. ಹಾಗಾಗಿ ಕೆಲಸಗಾರರಿಗೆ ಸಕಾಲಕ್ಕೆ ಕೂಲಿ ಹಣ ಸಂದಾಯವಾಗುತ್ತಿರಲಿಲ್ಲ. ಈಗ ಪ್ರತಿ 3 ಗ್ರಾಮ ಪಂಚಾಯಿತಿಗಳಿಗೆ ಒಬ್ಬರಂತೆ ಒಟ್ಟು 1,700 ಕಿರಿಯ ಇಂಜಿನಿಯರ್‌ಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲು ಸರ್ಕಾರ ತೀರ್ಮಾನಿಸಿದೆ ಎಂದು ವರದಿಯಾಗಿದೆ. ತೀರ್ಮಾನ ತುರ್ತಾಗಿ ಜಾರಿಗೆ ಬರುವುದು ಅತ್ಯಗತ್ಯವಾಗಿದೆ. ಹಾಗೆಯೇ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಅನುಷ್ಠಾನದಲ್ಲಿ ಗ್ರಾಮ ಪಂಚಾಯತ್ ಕಾರ್ಯದರ್ಶಿಯ ಪಾತ್ರ ಪ್ರಮುಖವಾಗಿದೆ. ಅನೇಕ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯದರ್ಶಿ ಸ್ಥಾನಗಳು ಖಾಲಿಬಿದ್ದು ಒಬ್ಬ ಕಾರ್ಯದರ್ಶಿಗೆ ಎರಡು ಮೂರು ಪಂಚಾಯಿತಿಗಳ ಜವಾಬ್ದಾರಿ ನೀಡಲಾಗಿದೆ. ಇದರಿಂದಾಗಿ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಅಡೆತಡೆಯಾಗುತ್ತಾ ಬಂದಿದೆ. ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಸ್ಥಾನಗಳನ್ನು ಕೂಡಲೇ ತುಂಬುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕಾಗಿದೆ.

ಕೆಲಸ ನಡೆಯುವ ಸ್ಥಳದಲ್ಲಿ ಕೂಲಿ ಕಾರ್ಮಿಕರ ಪೈಕಿಯೇ ಒಬ್ಬರನ್ನು ರೋಜಗಾರ್ ಸಹಾಯಕರೆಂದು ನೇಮಕ ಮಾಡಲು ಸರ್ಕಾರ ನಿರ್ಧರಿಸಿರುವುದೂ ಸ್ವಾಗತಾರ್ಹವಾಗಿದೆ. ಕನಿಷ್ಠ 50 ಜನ ಕೆಲಸ ಮಾಡುವ ಕಡೆ ಒಬ್ಬರಂತೆ ನೇಮಕವಾಗುವ ಈ ಸಹಾಯಕರು ಕೆಲಸಗಾರರ ಹಾಜರಾತಿ, ಕಾಮಗಾರಿಗಳ ಉಸ್ತುವಾರಿ ಮೊದಲಾದ ಕೆಲಸಗಳನ್ನು ನಿರ್ವಹಿಸಿದ್ದಾರೆ. ಗ್ರಾಮ ಪಂಚಾಯಿತಿಗಳ ಸದಸ್ಯರಿಗೆ ಈ ಯೋಜನೆಯ ಮಹತ್ವದ ಬಗ್ಗೆ ಸರಿಯಾದ ಕಣ್ಣೋಟ ನೀಡುವ ತರಬೇತಿ ಅತ್ಯಗತ್ಯವಾಗಿದೆ. ಕಾಂಗ್ರೆಸ್, ಬಿಜೆಪಿ, ಜನತಾದಳ ಮೊದಲಾದ ರಾಜಕೀಯ ಪಕ್ಷಗಳ ಹಿನ್ನೆಲೆ ಹೊಂದಿರುವ ಈ ಸದಸ್ಯರು ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನವನ್ನು ಸ್ವಂತ ಆದಾಯಕ್ಕೆ ಬಳಸಿಕೊಳ್ಳುವ ಪ್ರವೃತ್ತಿಯುವರಾಗಿರುತ್ತಾರೆ. ಚುನಾವಣೆಗಳಲ್ಲಿ ಅವರೂ ಸಹ ಹಣ ಖರ್ಚು ಮಾಡಿ ಆಯ್ಕೆಯಾಗಿರುವುದರಿಂದ ತಮಗೆ ಹಣ ಗಳಿಕೆ ಮಾಡಲು ಹಕ್ಕಿದೆ ಎಂದು ಅವರು ಭಾವಿಸುತ್ತಿರುತ್ತಾರೆ. ಈ ಯೋಜನೆಯನ್ನು ಸರಿಯಾಗಿ ಜಾರಿ ಮಾಡಬೇಕೆನ್ನುವ ಬಗ್ಗೆ ಸರ್ಕಾರ ಪ್ರಾಮಾಣಿಕವಾಗಿದ್ದರೆ, ಗ್ರಾಮ ಪಂಚಾಯತ್ ಸದಸ್ಯರಿಗೆ ಸರಿಯಾದ ಕಣ್ಣೋಟ ನೀಡಲು ಅದು ಕಾರ್ಯಕ್ರಮಗಳನ್ನು ರೂಪಿಸಬೇಕು. ಗ್ರಾಮೀಣ ಕೂಲಿಕಾರರನ್ನು, ಮಹಿಳೆಯರನ್ನು, ಯುವಕರನ್ನು ಸಂಘಟಿಸುತ್ತಿರುವ ಪ್ರಗತಿಪರ ಸಂಘಟನೆಗಳ ಸಹಕಾರ ಪಡೆಯಲು ಸರ್ಕಾರ ಮುಂದಾಗಬೇಕು.

ಜೀವಜಲ

ಪರಿತಪಿಸುತಿಹರು, ಸಾಯುತಿಹರು ಇಲ್ಲಿ
ಸಾಮಾನ್ಯರು ಸಿಗದೇ ಜೀವಜಲ
ತರಿಸುವುದಲ್ಲಿ ಸರ್ಕಾರ
ಶಿವಪೂಜೆಗೆಂದು ದೂರದ ಗಂಗಾಜಲ

- ಜಾಗೃತಿ,
ರಾಯಚೂರು

'ಅಕ್ಷರ ದಾಸೋಹ ಖಾಸಗೀಕರಣದಿಂದ ಸಾಮಾಜಿಕ ನ್ಯಾಯಕ್ಕೆ ಧಕ್ಕೆ' ಚಿಂತಕರ ಅಭಿಮತ

ಪ್ರಜಾಸತ್ತಾತ್ಮಕ ಮೌಲ್ಯ, ಸಾಮಾಜಿಕ ಸಾಮರಸ್ಯ, ಶೈಕ್ಷಣಿಕ ಹಾಗೂ ಧಾರ್ಮಿಕ ಸಮಾನತೆಗಾಗಿ ಶಾಲಾ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಬಿಸಿ ಊಟ ಯೋಜನೆಯನ್ನು ಖಾಸಗೀಕರಣ ಗೊಳಿಸಬಾರದು ಎಂದು ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಸೇರಿದಂತೆ ಗಣ್ಯರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಅಕ್ಷರದಾಸೋಹ ಖಾಸಗೀಕರಣ ವಿರೋಧಿ ಸಮಿತಿ ಬೆಂಗಳೂರಿನ ರಾಜ್ಯ ಯುವ ಜನ ಕೇಂದ್ರದ ಸಭಾಂಗಣದಲ್ಲಿ ಮೇ 25 ರಂದು ಹಮ್ಮಿಕೊಂಡಿದ್ದ ಬಿಸಿಯೂಟ, ಖಾಸಗೀಕರಣ ಚಿಂತನಗೋಷ್ಠಿಯನ್ನು ಪ್ರೊ: ಬರಗೂರು ಉದ್ಘಾಟಿಸಿದರು.



ಇಸ್ಕಾನ್ ಬಿಸಿಯೂಟದ ಮೂಲಕ ಧಾರ್ಮಿಕ ಪಂಥವನ್ನು ಪರೋಕ್ಷವಾಗಿ ಪ್ರಚಾರ ಮಾಡುತ್ತಿದ್ದರೆ, ಹಿಂದುತ್ವದ ಪ್ರತಿಪಾದಕರಾಗಿರುವ ಸಂಸದ ಅನಂತ್‌ಕುಮಾರ್‌ನ ಪತ್ನಿಯ ನೇತೃತ್ವದ ಅಧಮ್ಯ ಚೇತನ ಸಂಸ್ಥೆಯು ರಾಜಕೀಯ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಆದ್ದರಿಂದ ಇಸ್ಕಾನ್, ಅಧಮ್ಯ ಚೇತನ ಸೇರಿದಂತೆ ಖಾಸಗಿಯವರಿಗೆ ವಿಸ್ತರಿಸಬಾರದು ಎಂದು ಬರಗೂರು ಒತ್ತಾಯಿಸಿದರು.

ರಾಜ್ಯದಲ್ಲಿ 1 ರಿಂದ 10ನೇ ತರಗತಿವರೆಗೆ ಸುಮಾರು 73 ಲಕ್ಷ ವಿದ್ಯಾರ್ಥಿಗಳಿಗೆ ಬಿಸಿಯೂಟವನ್ನು ನೀಡಲಾಗುತ್ತಿದೆ. ಇದರಿಂದಾಗಿ ಶಾಲೆಯನ್ನು ಬಿಡುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಅಲ್ಲದೆ ಬಿಸಿಯೂಟವನ್ನು ದಲಿತ ಹಾಗೂ ಹಿಂದುಳಿದ ವರ್ಗಗಳ ಮಹಿಳೆಯರೇ ಹೆಚ್ಚಾಗಿ ತಯಾರಿಸುತ್ತಿರುವುದರಿಂದ ಸಾಮಾಜಿಕ ಸಾಮರಸ್ಯ, ಸಮಾನತೆಯ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಂತಾಗಿದೆ ಎಂದರು.

ಆದರೆ ಬಿಸಿಯೂಟದ ಖಾಸಗೀಕರಣದಿಂದ ಅಡಿಗೆ ಮಾಡುತ್ತಿರುವವರು ಉದ್ಯೋಗ ವಂಚಿತರಾಗಲಿದ್ದಾರೆ. ಆದ್ದರಿಂದ ನಾಡಿನ ಜಾತ್ಯಾತೀತರು, ವಿಚಾರವಂತರು, ಚಿಂತಕರು ಖಾಸಗೀಕರಣವನ್ನು ವಿರೋಧಿಸಬೇಕಿದೆ ಎಂದು ಹೇಳಿದರು.

ನ್ಯಾಯವಾದಿ ಪ್ರೊ. ರವಿವರ್ಮಕುಮಾರ್ ಮಾತನಾಡಿ ಖಾಸಗೀಕರಣಕ್ಕೆ ಅವಕಾಶ ನೀಡಿದರೆ ಜಾತ್ಯಾತೀತತೆಗೆ ಕೊಡಲಿ ಪೆಟ್ಟು ನೀಡಿದಂತಾಗುತ್ತದೆ. ಸರ್ಕಾರ ಬಿಸಿಯೂಟ ಯೋಜನೆಯನ್ನು ಖಾಸಗೀಕರಣಗೊಳಿಸುವ ಮೂಲಕ ಬ್ರಾಹ್ಮಣೀಕರಣಗೊಳಿಸುತ್ತಿದೆ. ಅಗ್ರಹಾರದಂತಿರುವ ಇಸ್ಕಾನ್, ಅಧಮ್ಯ ಚೇತನ ಸಂಸ್ಥೆಗೆ ಬಿಸಿಯೂಟ ವಿತರಿಸಲು ಅವಕಾಶ ನೀಡಿರುವ ಸರ್ಕಾರ ದಲಿತ ಪರ ಸಂಘಟನೆಗಳಿಗೂ ಅವಕಾಶ ನೀಡಲಿ ಎಂದು ಸವಾಲು ಹಾಕಿದರು.

ಬಸವಣ್ಣ 12ನೇ ಶತಮಾನದಲ್ಲಿ ಪ್ರತಿಪಾದಿಸಿದ ಅಸ್ಪೃಶ್ಯತೆ ನಿವಾರಣೆ, ಸಹಪಂಕ್ತಿ ಭೋಜನವು ಬಿಸಿಯೂಟ ಯೋಜನೆಯ ಮೂಲಕ ಅನುಷ್ಠಾನಗೊಂಡಿದೆ. ಈ ಯೋಜನೆಯು ಸದ್ದಿಲ್ಲದೆ ಸಾಮಾಜಿಕ ಕ್ರಾಂತಿಯನ್ನು ಮಾಡುತ್ತಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ಸರ್ಕಾರ ಇಸ್ಕಾನ್‌ಗೆ ಬಿಸಿಯೂಟ ವಿತರಣೆಗೆ ಅವಕಾಶ ನೀಡಬಾರದು. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಹೇಳಿದರು. ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಗುರಿಕಾರ ಮಾತನಾಡಿ ಖಾಸಗೀಕರಣ ಯೋಜನೆಯನ್ನು ವಿರೋಧಿಸಿದರು.

ಇಸ್ಕಾಂ ವಂಚನೆ

ಅಕ್ಷರದಾಸೋಹ ನೌಕರರ ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಮಾತನಾಡಿ ಇಸ್ಕಾನ್ ವಿದೇಶದಲ್ಲಿ ಶಾಲಾ ಮಕ್ಕಳನ್ನು ಭಿಕ್ಷುಕರಂತೆ ಬಿಂಬಿಸಿ ಒಬ್ಬರಿಗೆ ಒಂದು ಹೊತ್ತಿನ ಊಟಕ್ಕೆ ವಿದೇಶಿಯರಿಂದ 6 ರೂ. ಹಾಗೂ ಸರ್ಕಾರದಿಂದ 3.50 ರೂ. ಪಡೆಯುವ ಮೂಲಕ ವಾರ್ಷಿಕ 60 ಕೋಟಿ ರೂ. ಲಾಭ ಗಳಿಸುತ್ತಿದೆ ಎಂದು ತಿಳಿಸಿದರು.

ಡಿಎಸ್‌ಎಸ್ (ಅಂಬೇಡ್ಕರ್ ವಾದ) ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ ನಷ್ಟದಲ್ಲಿದ್ದ ಮೈಸೂರು ಲ್ಯಾಂಪ್‌ನಲ್ಲಿ ಬದಲಾವಣೆ ತಂದು ಲಾಭ ತೋರಿಸಿದ ದಲಿತ ಅಧಿಕಾರಿಯನ್ನು ಹಿಂದೆ ಸರ್ಕಾರ ವರ್ಗಾವಣೆ ಮಾಡಿತು. ಹಾಗೆಯೇ ಬಿಸಿಯೂಟ ಯೋಜನೆಯಲ್ಲೂ ಸರ್ಕಾರ ಖಾಸಗೀಕರಣದ ವ್ಯಾಮೋಹ ತೋರುತ್ತಿದೆ ಎಂದರು. ಶಾಸಕ ಜಯಪ್ರಕಾಶ್ ಹೆಗಡೆಯವರೂ ಮಾತನಾಡಿ ಬಿಸಿಯೂಟ ಯೋಜನೆಯ ಖಾಸಗೀಕರಣ ಖಂಡಿಸಿದರು. ಸರೋಜ ಸ್ವಾಗತಿಸಿದರು. ಟಿ.ಲೀಲಾವತಿ ಕಾರ್ಯಕ್ರಮ ನಿರೂಪಿಸಿದರು. ಯಮುನಾ ಗಾಂವ್ಕರ್ ವಂದಿಸಿದರು.

○

'ಖಾಸಗೀಕರಣ ಕೈಬಿಡಿ' ಬಿಸಿಯೂಟ ನೌಕರರ ಆಗ್ರಹ

ಎಲ್ಲವ್ವ ನಾಗಪ್ಪ ನಾಯ್ಕರ್, ಆಶಾವಾದಿ ಮಹಿಳೆ. ಒಂದು ವರ್ಷದ ಹಿಂದೆ ಆಕೆಯನ್ನು ಕೆಲಸದಿಂದ ತೆಗೆದಿದ್ದಾರೆ.ಆಕೆ ದೂರದ ಬೆಳಗಾಂ ಜಿಲ್ಲೆಯಿಂದ ಬೆಂಗಳೂರು ನಗರಕ್ಕೆ ಹೋರಾಟಕ್ಕೆ ಬಂದಿದ್ದಾರೆ. ಶಾಲೆಗಳಿಗೆ ಬಿಸಿಯೂಟ ಪೂರೈಸುವುದನ್ನು ಖಾಸಗೀಕರಣ ಮಾಡಿದ್ದರಿಂದ ಆಕೆ ಮತ್ತು ಜೊತೆಗಾರ್ತಿಯರು ಕೆಲಸ ಕಳೆದುಕೊಂಡಿದ್ದಾರೆ.

ಹುಲಿಕಟ್ಟಿ ಊರಿನ ಶಾಲೆಯಲ್ಲಿ 460 ಜನ ಮಕ್ಕಳು. ಒಬ್ಬರು ಮುಖ್ಯ ಅಡಿಗೆ ಕೆಲಸಗಾರ್ತಿ ಮತ್ತು ಸಹಾಯಕಿಯರು ಒಟ್ಟು 3 ಜನ ಸೇರಿ ಎಲ್ಲ ಮಕ್ಕಳಿಗೂ ಬಿಸಿ ಬಿಸಿ ಊಟ ಬಡಿಸುತ್ತಿದ್ದರು. ಈಗ ಈ ಊರಿಗೆ ದೂರದ ಹುಬ್ಬಳ್ಳಿ ಕೇಂದ್ರದಿಂದ 'ಬಿಸಿ' ಊಟ ಬರುತ್ತದಂತೆ. "ನಡುರಾತ್ರಿ 2ಕ್ಕೆ ಮಾಡಿದ್ದು, ಬೆಳಿಗ್ಗೆ 10 ಗಂಟೆ ಸಾಲಿಗೆ ಬರ್ತದ ರೀ.. ಮಕ್ಕಳು ಊಟ ಮಾಡೋ ಹೊತ್ತಿಗಿ ಹಳಸಿರ್ತದರಿ..." ಅಂತ ಯಲ್ಲವ್ವ ಈಗ ನಡೆಯುತ್ತಿರುವುದರ ಬಗೆಗೆ ಹೇಳುತ್ತಾರೆ.

'ಮುಸರಿ ಬಾಂಡೆ ತಿಕ್ಕೋದು ಸಾಲಿ ಮಕ್ಕಳ ಕಡೆ ಮಾಡ್ತಿಸಾರ ಈವಾಗ.' ಅಂತಾರೆ ಅವರು. ಶಾಲೆಯ ಮಕ್ಕಳು ಪಾಠ ಕಲಿಯಬೇಕೋ ಪಾತ್ರೆ ತೊಳಿಯಬೇಕೋ? ಈ ಪ್ರಶ್ನೆಯೂ ಎದ್ದು ಬಂದಿದೆ. ಇದು ಬಿಸಿಯೂಟ ಖಾಸಗೀಕರಣಕ್ಕೆ ಮುಂದಾಗಿರುವ ರಾಜ್ಯ ಸರ್ಕಾರದ ನೀತಿಯ ದುಷ್ಪರಿಣಾಮ.

ಪರ್ವಿನ್‌ಬಾನು ಮತ್ತೊಬ್ಬ ಮಹಿಳೆ. ಹಿಂಗಳಗಿ ಗ್ರಾಮ, ಬಾಗಲಕೋಟೆ ಜಿಲ್ಲೆಯಿಂದ ಅವರು ಬೆಂಗಳೂರಿಗೆ ಬಂದಿದ್ದಾರೆ. ಮುಖ್ಯ ಅಡುಗೆಯವರಾಗಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3-4 ಗಂಟೆವರೆಗೆ ಕೆಲಸ ಮಾಡಿದರೂ ಆಕೆಗೆ ಸಿಗುತ್ತಿದ್ದ ಸಂಬಳ 650 . ಈಗ ಬಿಸಿಯೂಟ ಪೂರೈಕೆಯನ್ನು ಖಾಸಗಿಯವರಿಗೆ, ಯಾವುದೋ ಎನ್‌ಜಿಓಗೆ ಕೊಡಲಾಗಿದೆ. 650 ರೂ. ಇದ್ದ ಸಂಬಳ ಮತ್ತೆ



ಕುಸಿದು 400-500 ಕ್ಕೆ ಇಳಿದಿದೆ. ಏನಾದರೂ, ಹೆಚ್ಚು ಮಾತಾಡಿದರೆ ಕೆಲಸ ಮಾಡಿದ ದಿನಕ್ಕೂ 'ರಜೆ' ಬರ್ಕೋತ್ತಾರಂತೆ.

ಹೀಗೆ ಒಬ್ಬೊಬ್ಬರದು ಒಂದೊಂದು ಕತೆ, ಕತೆ ಕಣ್ಣೀರ ಕತೆ. ಪರ್ವಿನ್ ಬಾನು ಗಂಡ ತೀರಿಕೊಂಡಿದ್ದಾರೆ. ಬಿಸಿಯೂಟ ಯೋಜನೆಯಲ್ಲಿ ವಿಧವೆಯರು, ಗಂಡ ಕೈಕೊಟ್ಟು ಹೋದವರು, ಸಾಮಾಜಿಕವಾಗಿ, ದಮನಕ್ಕೆ ಒಳಗಾದ ದಲಿತ ಮಹಿಳೆಯರು, ಹಿಂದುಳಿದವರೇ ಹೆಚ್ಚಾಗಿದ್ದಾರೆ.

ಅಡುಗೆಯ ಕೆಲಸವೇ ಇರಲಿ ಅಥವಾ ಸಹಾಯಕಿಯರ ಕೆಲಸವೇ ಇರಲಿ ಸಿಗುವ ಸಂಬಳ ಬಾರಿ ಅಲ್ಲದೇ ಹೋದರೂ, ಮುಳುಗುವವರಿಗೆ ಹುಲ್ಲು ಕಡ್ಡಿ ಆಸರೆ ಎಂಬಂತೆ ಇದು ಒಂದು ಆಸರೆ. ಈ ದುಡಿಯುವ ಜನರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಕೊಟ್ಟು ಅವರ ಜೀವನಕ್ಕೆ ಒಂದು ಭದ್ರತೆ ಒದಗಿಸುವ ಜವಾಬ್ದಾರಿ ಚುನಾಯಿತ ಸರ್ಕಾರಕ್ಕಿದೆ.

ಜನ ಚಳುವಳಿಗಳ ಒತ್ತಡ, ಸುಪ್ರೀಂಕೋರ್ಟ್ ತೀರ್ಪಿನ ಒತ್ತಡಕ್ಕೆ ಯೋಜನೆ ಜಾರಿಗೊಳಿಸುತ್ತಿರುವ ಸರ್ಕಾರಗಳು ಎಷ್ಟು ಸಾಧ್ಯವೋ ಅಷ್ಟು ಜವಾಬ್ದಾರಿಯಿಂದ ಜಾರಿಕೊಳ್ಳುವ ಹವಣಿಕೆಯಲ್ಲಿವೆ. ಅಂತಹ ಸರ್ಕಾರಗಳಿಗೆ ಬಿಸಿಯೂಟ ಪೂರೈಸುವ ಯೋಜನೆಯನ್ನು ಖಾಸಗೀಕರಿಸಿ ಕೈ ತೊಳೆದುಕೊಳ್ಳುವ ಆತುರ. ರಾಜ್ಯ ಬಿಜೆಪಿ ಸರ್ಕಾರದ್ದೂ ಅದೇ ಕತೆ. ಬಿಸಿಯೂಟ ನೀಡುವ ನೆಪದಲ್ಲಿ ಜಾತಿವಾದಿ, ಮಠಗಳು, ಧಾರ್ಮಿಕ ಸಂಘ-ಸಂಸ್ಥೆಗಳು ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಧಾರ್ಮಿಕ ನಂಬಿಕೆ, ಕಂದಾಚಾರ, ಜಾತಿಯತೆ ಪ್ರಚಾರಕ್ಕೆ ಇದನ್ನು ಬಳಸಿಕೊಂಡರು 'ಜಾತ್ಯತೀತ ಸಂವಿಧಾನ' ದ ಅಡಿಯಲ್ಲಿ ಕೆಲಸ ಮಾಡುವ ಸರ್ಕಾರಗಳಿಗೆ ಯಾವ ಸಮಸ್ಯೆಯೂ ಇಲ್ಲ.

ಇದನ್ನೆಲ್ಲಾ ನೋಡುತ್ತಾ ಕೈ ಕಟ್ಟಿ ಕೂರಲಾಗುತ್ತದೆಯೇ? ಕರ್ನಾಟಕ ರಾಜ್ಯ ಬಿಸಿಯೂಟ ನೌಕರರ ಸಂಘ ಇಂತಹ ದುಡಿಯುವ ಜನಕ್ಕೆ ವಿರುದ್ಧವಾದ, ಶಿಕ್ಷಣ ವಿರೋಧಿಯಾದ ಧೋರಣೆ ಖಂಡಿಸಿ ಹೋರಾಟ ನಡೆಸುತ್ತಲೇ ಬಂದಿದೆ.

ಮೇ 26, ಸೋಮವಾರ ಬೆಂಗಳೂರಿನಲ್ಲಿ ಸಾವಿರಾರು ಜನರ ಬೃಹತ್ ಪ್ರತಿಭಟನೆ. ಸಿಐಟಿಯುವಿನ ಕೆಂಬಾವುಟ ಹಿಡಿದ ಮಹಿಳೆಯರು ರೈಲು ನಿಲ್ದಾಣದಿಂದ ಮೆರವಣಿಗೆ ಹೊರಟೇ ಬಿಟ್ಟರು. ಹಳೇ ಜೈಲು ಪಕ್ಕದ ರಸ್ತೆ ಬದಿಯಲ್ಲಿ ಬಹಿರಂಗ ಸಭೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರು, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿರವರು ಸರ್ಕಾರದ ಧೋರಣೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ಬಿಸಿಯೂಟ ಯೋಜನೆ ಖಾಸಗೀಕರಣದ ಹಿಂದೆ ಇರುವ ಲೂಟಿಕೋರ

ಪುಟ 15ಕ್ಕೆ

ಯುಪಿಎ ಸರಕಾರದ ಎರಡನೇ ಆವೃತ್ತಿ ಬಂದಿದೆ. ಆದರೆ ಅದು ಯಾವ ದಿಕ್ಕಿನಲ್ಲಿ ಸಾಗಲಿದೆ ಎಂದು ಇನ್ನೂ ಪ್ರಕಟಿಸಿಲ್ಲ. ಕಳೆದ ಬಾರಿ ಇದ್ದಂತೆ ಅದಕ್ಕೆ ಈ ಬಾರಿ ಒಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಇಲ್ಲ. ಇನ್ನೊಂದೆಡೆ ಕಾರ್ಪೊರೇಟ್ ಕುಳಗಳ ಬೋಪರಾಕ್. ಆದ್ದರಿಂದ ಜನಗಳಿಗೆ ಅಗತ್ಯವಾಗಿ, ತುರ್ತಾಗಿ ಬೇಕಾಗಿರುವ ಪರಿಹಾರ, ಅವರ ಜೀವನ ಮಟ್ಟದ ಸುಧಾರಣೆ ಜನಾಂದೋಲನಗಳ ನಿರಂತರ ಒತ್ತಡ ಮತ್ತು ಹೋರಾಟಗಳಿಂದ ಮಾತ್ರ ಬರಲುಸಾಧ್ಯ ಎಂಬುದಂತೂ ಸ್ಪಷ್ಟ.

ದೊಡ್ಡ ಹೋರಾಟಗಳಿಗೆ ಸಜ್ಜಾಗಬೇಕು

15ನೇ ಲೋಕಸಭಾ ಚುನಾವಣೆಗಳ ಫಲಿತಾಂಶಗಳು ಬಂದು ಹನ್ನೆರಡು ದಿನಗಳ ನಂತರ ಕೊನೆಗೂ ಯುಪಿಎ ಸರಕಾರದ ಎರಡನೇ ಆವೃತ್ತಿಯ ಸರಕಾರದ ಪೂರ್ಣ ಸಂಪುಟದ ಸದಸ್ಯರ ಹೆಸರುಗಳು ಪ್ರಕಟಗೊಂಡಿವೆ. ಸುದೀರ್ಘ ಕಸರತ್ತಿನ ನಂತರ ಖಾತೆಗಳ ಹಂಚಿಕೆ ಆಗಿದೆ. ಮೊದಲು ವಾರದ ಹಿಂದೆ ಪ್ರಧಾನ ಮಂತ್ರಿಗಳ ಜೊತೆಗೆ ಪ್ರಮಾಣ ವಚನ ಸ್ವೀಕರಿಸಿದ 19ರಲ್ಲಿ ಕೂಡಾ ಆರು ಮಂತ್ರಿಗಳ ಖಾತೆಗಳಷ್ಟೇ ಪ್ರಕಟವಾಯಿತು. ನಂತರ ಉಳಿದವರ ಸರದಿ. 2004 ರಲ್ಲಿ ಯುಪಿಎ ನಲ್ಲಿ ಕಾಂಗ್ರೆಸ್‌ನ ಸದಸ್ಯ ಬಲ ಕಡಿಮೆಯಿದ್ದರೂ, ಇತರರದ್ದು ಹೆಚ್ಚಿದ್ದರೂ ಹತ್ತು ದಿನಗಳೊಳಗೆ ಪೂರ್ಣ ಸಂಪುಟ ಪ್ರಮಾಣ ವಚನ ಸ್ವೀಕರಿಸಿತ್ತು ಹಾಗೂ ನಂತರ ಕೆಲವೇ ಗಂಟೆಗಳೊಳಗೆ ಖಾತೆಗಳ ಪ್ರಕಟಣೆಯೂ ಆಗಿತ್ತು. ಈ ಸರಕಾರದ ಧೋರಣೆಗಳ ದಿಕ್ಕನ್ನು ನಿರ್ಧರಿಸುವಲ್ಲಿಯೂ ಇಂತಹುದೇ ಅನಿಶ್ಚಿತತೆಗಳಿದ್ದರೆ ಜನಗಳು ತಮ್ಮ ಹೆಚ್ಚುತ್ತಿರುವ ದೈನಂದಿನ ಹೊರೆಗಳಿಂದ ಪರಿಹಾರ ಸಿಗಬಹುದೆಂದು ನಿರೀಕ್ಷಿಸುವುದು ಕಷ್ಟವೇ.

ಡಾ. ಮನಮೋಹನ ಸಿಂಗ್‌ರನ್ನು ಮತ್ತೊಮ್ಮೆ ಪ್ರಧಾನ ಮಂತ್ರಿಗಳಾಗಿ ಆರಿಸಿದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಅವರು ಈ ವಿಜಯ 'ಏರುತ್ತಿರುವ ನಿರೀಕ್ಷೆಗಳ ಸವಾಲ್'ನೊಂದಿಗೆ ಬಂದಿದೆ ಎಂದಿದ್ದಾರೆ. ಈ ಜನಾದೇಶ 'ಎಲ್ಲರನ್ನು ಒಳಗೊಳ್ಳುವ ಬೆಳವಣಿಗೆ', ' ಸಮತ್ವಪೂರ್ಣ ಅಭಿವೃದ್ಧಿ' ಮತ್ತು 'ಒಂದು ಜಾತ್ಯಾತೀತ ಬಹುರೂಪೀ ಭಾರತ' ಬೇಕೆಂದು ನೀಡಿರುವ ಜನರ ತೀರ್ಪು ಎಂದು ಅವರು ವರ್ಣಿಸಿದ್ದಾರೆ. ಇವನ್ನು ಸಾಧಿಸಬೇಕಾದರೆ ಹಲವು ನಿರ್ಣಾಯಕ ಧೋರಣೆಗಳ ಕ್ರಮಗಳನ್ನು ಆಚರಣೆಗೆ ತರಬೇಕಾಗುತ್ತದೆ.


ಕಂದರ ಹೆಚ್ಚಲಿದೆ

'ಹೊಳೆಯುತ್ತಿರುವ' ಮತ್ತು 'ನರಳುತ್ತಿರುವ' ಭಾರತಗಳ ನಡುವಿನ ಕಂದರ ಜಾಗತಿಕ ಆರ್ಥಿಕ ಹಿಂಜರಿತದಿಂದಾಗಿ ಇನ್ನೂ ಆಳಗೊಳ್ಳುತ್ತಿದೆ. ಆದರೆ ಯುಪಿಎ ಸರಕಾರ ಈಗಲೂ ಇದನ್ನು ನಿರಾಕರಿಸುತ್ತಲೇ ಇದೆ. ಆರ್ಥಿಕ ಪರಿಸ್ಥಿತಿಯನ್ನು ಬಿಂಬಿಸುವ 2009ರ ಮೊದಲ ಮೂರು ತಿಂಗಳ ಅಂಕೆ-ಸಂಖ್ಯೆಗಳು ಪ್ರಕಟವಾಗಿವೆ. ಮಾರ್ಚ್ ತಿಂಗಳಲ್ಲಿ ಭಾರತದ ಕೈಗಾರಿಕಾ ಉತ್ಪಾದನೆ ಹಿಂದಿನ ವರ್ಷದ ಈ ತಿಂಗಳಿಗೆ ಹೋಲಿಸಿದರೆ 2.3 ಶೇ. ದಷ್ಟು ಇಳಿದಿದೆ. ಉದ್ಯೋಗಾವಕಾಶಗಳಲ್ಲಿ ದೊಡ್ಡ ಭಾಗವಿರುವ ಸರಕುಗಳ ಉತ್ಪಾದನೆಯ ವಲಯದಲ್ಲಿ ಈ ಇಳಿಕೆ ಇನ್ನೂ ಹೆಚ್ಚು, 3.3ದಷ್ಟು. ಅಂತರ್ರಾಷ್ಟ್ರೀಯ ವ್ಯಾಪಾರದಲ್ಲಿ ಜಾಗತಿಕ ಹಿಂಜರಿತದ ನಕಾರಾತ್ಮಕ ಪ್ರಭಾವ ತೀವ್ರಗೊಳ್ಳುತ್ತಿದೆ. ಸತತ ಏಳನೆ ತಿಂಗಳಲ್ಲಿ ಭಾರತದ ರಫ್ತುಪ್ರಮಾಣ ಇಳಿದಿದೆ-33 ಶೇಕಡಾದಷ್ಟು. ಆಮದುಗಳು, ಅದರಲ್ಲೂ ಬಂಡವಾಳ ಸರಕುಗಳ ಆಮದುಗಳು 35 ಶೇಕಡಾ ಇಳಿದಿದೆ. ಮೂಲರಚನೆಗಳ ಅಭಿವೃದ್ಧಿಯಲ್ಲಿ ಇವುಗಳ ಕೊಡುಗೆ ಮಹತ್ವದ್ದು.

ಇವೆಲ್ಲದರ ಅರ್ಥ ಇಷ್ಟೆ. ಉದ್ಯೋಗಗಳ ಈಗಿನ ಮಟ್ಟ ಮತ್ತು ಮುಂದಿನ ಅವಕಾಶಗಳು ಗಮನಾರ್ಹವಾಗಿ ಇಳಿಯಲಿವೆ. ಇದು 'ಹೊಳೆಯುತ್ತಿರುವ' ಮತ್ತು 'ನರಳುತ್ತಿರುವ' ಭಾರತಗಳ ನಡುವಿನ ಕಂದರವನ್ನು ಇನ್ನಷ್ಟು ಹೆಚ್ಚಿಸಿ ಇನ್ನೂ ಲಕ್ಷಾಂತರ ಜನಗಳನ್ನು ವಿಪರೀತ ಬಡತನದ ಮಟ್ಟಕ್ಕೆ ನೂಕಲಿದೆ. ಈ ಪರಿಸ್ಥಿತಿಯನ್ನು ಎದುರಿಸುವ ಮತ್ತು ಜನಗಳಿಗೆ ಸ್ವಲ್ಪವಾದರೂ ಪರಿಹಾರ ಒದಗಿಸುವ ಏಕೈಕ ವಿಧಾನವೆಂದರೆ ಬೆಳವಣಿಗೆಗೆ ಕುಮ್ಮಕ್ಕು ಕೊಟ್ಟು ಉದ್ಯೋಗಾವಕಾಶಗಳು ಮತ್ತು ಆಂತರಿಕ ಬೇಡಿಕೆಗಳನ್ನು ಸೃಷ್ಟಿಸಲು ಸಾರ್ವಜನಿಕ ಹೂಡಿಕೆಗಳನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸುವುದು.

ಕಾರ್ಪೊರೇಟ್ ಮಂದಿ ಪಾಠ ಕಲಿಯರು

ಆದರೆ ತದ್ವಿರುದ್ಧವಾಗಿ 'ಹೊಳೆಯುತ್ತಿರುವ' ಭಾರತ, ದೊಡ್ಡ-ದೊಡ್ಡ ಕಾರ್ಪೊರೇಟ್‌ಗಳು ಬೋಪರಾಕು ಹಾಕುತ್ತಾ, ಪ್ರಣಬ್ ಮುಖರ್ಜಿಯವರನ್ನು ಹಣಕಾಸು ಮಂತ್ರಿಗಳಾಗಿ ನೇಮಿಸಿರುವುದನ್ನು ಹಾಡಿ ಹೊಗಳುತ್ತಾ ಲಂಗು ಲಗಾಮಿಲ್ಲದ ನವ-ಉದಾರವಾದಿ ಆರ್ಥಿಕ ಮತ್ತು ಹಣಕಾಸು ಸುಧಾರಣೆಗಳತ್ತ ತಕ್ಷಣ ಹೊರಡಿ ಎಂದು ಹುರಿದುಂಬಿಸುತ್ತಿದ್ದಾರೆ. ಯುಪಿಎ ಸರಕಾರಕ್ಕೆ ಈಗ ಎಡಪಕ್ಷಗಳ ಬೆಂಬಲ ಬೇಕಿಲ್ಲ ಎಂದು ಆನಂದ ಪರವಶರಾಗಿರುವ ಅವರು ಸಾರ್ವಜನಿಕ ವಲಯದ ಹೂಡಿಕೆ ಹಿಂತೆಗೆತವನ್ನು ದೊಡ್ಡ ಪ್ರಮಾಣದಲ್ಲಿ ಮಾಡಿ, ಎಡಪಕ್ಷಗಳು ಹಿಂದಿನ ಸರಕಾರಕ್ಕೆ ಮಾಡಲು ಬಿಡದ ಹಣಕಾಸು ವಲಯದ ಸುಧಾರಣೆಗಳ ಬಗ್ಗೆ ಕೂಡಲೇ ಶಾಸನಗಳನ್ನು ತಂದು ಪೆನ್ಶನ್ ನಿಧಿಗಳನ್ನು ಖಾಸಗೀಕರಿಸಿ, ವಿಮಾವಲಯದಲ್ಲಿ ವಿದೇಶಿ ಹೂಡಿಕೆಗಳನ್ನು ಹೆಚ್ಚಿಸಲು, ಭಾರತದ ಖಾಸಗೀ ಬ್ಯಾಂಕುಗಳನ್ನು ವಿದೇಶಿ ಬ್ಯಾಂಕುಗಳು ವಹಿಸಿಕೊಳ್ಳಲು ಅವಕಾಶ ಒದಗಿಸಿ ಎಂದು ಸರಕಾರಕ್ಕೆ ಹೇಳುತ್ತಿದ್ದಾರೆ. ರೂಪಾಯಿಯ ಪೂರ್ಣ ಪರಿವರ್ತನೀಯತೆ ತರಬೇಕೆಂಬ ಕೂಗು ಕೂಡ ಬೇಗನೆ ಏಳಲಿದೆ.



ಈ ಕಾರ್ಪೊರೇಟ್ ಮಂದಿಗೆ ಈಗಲೂ ಲಂಗುಲಗಾಮಿಲ್ಲದ ಹಣಕಾಸು ವಲಯದ ಸುಧಾರಣೆಗಳೇ ಬೃಹತ್ ಪ್ರಮಾಣದ ಆರ್ಥಿಕ ಕುಸಿತಕ್ಕೆ ಅಡಿಪಾಯ ಹಾಕಿದ್ದು, ಜಾಗತಿಕ ಬಂಡವಾಳಶಾಹಿ ಹಿಂಜರಿತಕ್ಕೆ ದಾರಿ ಮಾಡಿಕೊಟ್ಟದ್ದು ಎಂಬ ವಾಸ್ತವತೆಯನ್ನು ಒಪ್ಪಿಕೊಳ್ಳಲು ಆಗುತ್ತಿಲ್ಲ. ವಿಶ್ವಬ್ಯಾಂಕ್ ಕೂಡಾ 2009ರಲ್ಲಿ ಮೊತ್ತಮೊದಲ ಬಾರಿಗೆ ವಿಶ್ವದ ಉತ್ಪಾದನೆ ಇಳಿಯಲಿದೆ ಎಂದು ಅಂದಾಜು ಮಾಡಿದೆ. ಎಡಪಕ್ಷಗಳ ಒತ್ತಡಗಳಿಂದಾಗಿ ಹಿಂದಿನ ಯುಪಿಎ ಸರಕಾರ ತಂದ ಜನಪರ ಧೋರಣೆಗಳು ಮತ್ತು ಹಣಕಾಸು ಸುಧಾರಣೆಗಳನ್ನು ತಡೆ ಹಿಡಿದದ್ದೇ ಯುಪಿಎ ಗೆಲುವಿಗೆ ಗಮನಾರ್ಹ ಕೊಡುಗೆ ನೀಡಿವೆ ಎಂಬ ಸರಳ ಸಂಗತಿಯನ್ನು ಈ ಕಾರ್ಪೊರೇಟ್ ಮಂದಿ ಒಪ್ಪಲು ಸಿದ್ಧರಿಲ್ಲ.

ಅಮೆರಿಕಾದ ವಾಲ್ ಸ್ಟ್ರೀಟ್‌ನ ಉನ್ನತ ಹಣಕಾಸು ಪುರೋಹಿತರ 'ಐವರ ಪಡೆ'ಯ ದಿವಾಳಿಯಿಂದಲಾದರೂ ನಮ್ಮ ದೇಶದ ಈ ಕಾರ್ಪೊರೇಟ್ ಮಂದಿ ಏನೂ ಪಾಠ ಕಲಿತಂತಿಲ್ಲ. ಅಮೆರಿಕಾದ ಅಧ್ಯಕ್ಷ ಒಬಾಮ ಕೂಡಾ ವಾಲ್‌ಸ್ಟ್ರೀಟ್ ಮಂದಿಗೆ ಬದಲಾಗಿ ಸಾಮಾನ್ಯ ಜನರತ್ತ ಗುರಿಯಿಟ್ಟ ಧೋರಣೆಗಳ ಬಗ್ಗೆ ಮಾತಾಡುತ್ತಿದ್ದಾರೆ!

ಎತ್ತ ಸಾಗಲಿದೆ?

ನಿಜ, ಈ ಹೊಸ ಯುಪಿಎ ಸರಕಾರ ಯಾವ ದಾರಿ ಹಿಡಿಯುತ್ತದೆ ಎಂಬುದು ಜೂನ್ 4 ರಂದು ಸಂಸತ್ತಿನ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಷ್ಟ್ರಪತಿಗಳು ಮಾಡುವ ಭಾಷಣದಲ್ಲಿ ತಿಳಿಯುತ್ತದೆ. ಜುಲೈ ಅಂತ್ಯದೊಳಗೆ ಒಂದು ಪೂರ್ಣ ಪ್ರಮಾಣದ ಬಜೆಟನ್ನು ಮಂಡಿಸುವುದಾಗಿ ಹಣಕಾಸು ಮಂತ್ರಿಗಳು ಪ್ರಕಟಿಸಿದ್ದಾರೆ. ಸಂವಿಧಾನಿಕ ವಾಗಿಯೂ ಇದು ಅಗತ್ಯ. ಏಕೆಂದರೆ ಲೇಖಾನುದಾನದ ಅವಧಿ ಜುಲೈ 31 ರಂದು ಅಂತ್ಯಗೊಳ್ಳುತ್ತದೆ. ಅಷ್ಟರೊಳಗೆ ಪೂರ್ಣ ಪ್ರಮಾಣದ ಬಜೆಟ್ ಇಲ್ಲದಿದ್ದರೆ ಮತ್ತೊಮ್ಮೆ ಲೇಖಾನುದಾನ ಪಡೆಯಬೇಕಾಗುತ್ತದೆ. ಇದು ಸೂಕ್ತವಲ್ಲ.

ಈಗಾಗಲೇ ಗಮನಿಸಿರುವಂತೆ, ಈ ಯುಪಿಎ ಸರಕಾರ ದೇಶದ ಮುಂದೆ ಒಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ಇಟ್ಟಿಲ್ಲ. ಆದ್ದರಿಂದ ಅದರ ಆರ್ಥಿಕ ನೀತಿಗಳೇನು, ಸಾಮಾಜಿಕ ವಲಯಗಳಲ್ಲಿ ಅದರ ನೀತಿಗಳೇನು ಎಂಬ ಧೋರಣೆಗಳ ಕುರಿತ ಘೋಷಣೆಗಾಗಿ ಕಾಯಬೇಕಷ್ಟೇ.

ಈ ನೀತಿ-ನಿಲುವಿನಲ್ಲಿ ಏನೇ ಇರಲಿ, ಜನಗಳಿಗೆ ಅಗತ್ಯವಾಗಿ, ತುರ್ತಾಗಿ ಬೇಕಾಗಿರುವ ಪರಿಹಾರ, ಅವರ ಜೀವನ ಮಟ್ಟದ ಸುಧಾರಣೆ ಜನಾಂದೋಲನಗಳ ನಿರಂತರ ಒತ್ತಡ ಮತ್ತು ಹೋರಾಟಗಳಿಂದ ಮಾತ್ರ ಬರುತ್ತದೆ ಎಂಬುದಂತೂ ಸ್ಪಷ್ಟ. ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಅಡಿಪಾಯವನ್ನು ರಕ್ಷಿಸಲು ಮತ್ತು ಮತ್ತಷ್ಟು ಬಲಪಡಿಸಲು ಹಾಗೂ ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿ ಆರ್ಥಿಕ ಮತ್ತು ರಾಜಕೀಯ ಸಾರ್ವಭೌಮತೆಯನ್ನು ರಕ್ಷಿಸಲು ಕೂಡಾ ಇಂತಹ ಹೋರಾಟಗಳನ್ನು ನಡೆಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ದೊಡ್ಡ ಹೋರಾಟಗಳಿಗೆ ಜನತೆ ಸನ್ನದ್ಧರಾಗಬೇಕಾಗಿದೆ.

ಸತ್ಯಂ

ಮುಕ್ತ ವ್ಯಾಪಾರದ ವ್ಯವಸ್ಥೆಯಲ್ಲಿ
ಖಾಸಗಿಯವರ ನಿರ್ವಹಣೆ
ಫಲಿತಾಂಶವೇನೆಂದರೆ
ಕಾಣುತ್ತಿಲ್ಲವೇ
'ಸತ್ಯಂ'ನ ಉದಾಹರಣೆ

- ಜಾಗೃತಿ, ರಾಯಚೂರು



ಶ್ರೀಲಂಕಾ ತಮಿಳರ ಬವಣೆಗೆ ಕೊನೆಯಂತು ?

ಶರತ್‌ಚಂದ್ರ

'ಒಬ್ಬ ತಾಯಿ 3 ತಿಂಗಳ ಹಸುಗೂಸಿಗೆ ಹಾಲು ಕುಡಿಸುತ್ತಿರುವಾಗ ದೂರದಲ್ಲಿ ಸಿಡಿದ ಶೆಲ್ ತುಂಡಿನಿಂದ ಮಗು ಸಾಯುತ್ತದೆ. ತಾಯಿ ತೀವ್ರವಾಗಿ ಗಾಯಗೊಳ್ಳುತ್ತಾಳೆ.. ..

ಆ ಪ್ರದೇಶದಿಂದ ಓಡಿಹೋಗುವ ಪ್ರಯತ್ನದಲ್ಲಿ ಕುಟುಂಬ ಹಳ್ಳ ದಾಟುತ್ತಿರುವಾಗ ಮಹಿಳೆಯ ಪತಿ ಗುಂಡಿಗೆ ಬಲಿಯಾಗಿ ಮುಳುಗುತ್ತಾನೆ. ಆತ ಎತ್ತಿಕೊಂಡಿದ್ದ ಮಗು ಸಹ ಸಾಯುತ್ತದೆ.. .. ..

ಸೈನ್ಯದ ಅಧಿಕಾರಿಗಳು ಎತ್ತರದ ಮರದಿಂದ ಲೌಡ್ ಸ್ಪೀಕರ್‌ಗಳಲ್ಲಿ ನಾಗರಿಕರು ಆ ಪ್ರದೇಶ ಬಿಟ್ಟು ಬೇಗ ಹೊರಡುವಂತೆ, ತಾವು ಅಲ್ಲಿಗೆ ದಾಳಿ ಮಾಡುವುದಾಗಿ ಘೋಷಿಸುತ್ತಾರೆ. ಜನ ಇನ್ನೇನು ಹೊರಡುವ ಮೊದಲೇ ಅಲ್ಲಿ ದೊಡ್ಡ ಶೆಲ್ ಬಂದು ಬೀಳುತ್ತದೆ. ನೂರಾರು ಜನ ಸಾಯುತ್ತಾರೆ, ಗಾಯಗೊಳ್ಳುತ್ತಾರೆ.. ..

ಆ ಪ್ರದೇಶದಿಂದ ಓಡಿಹೋಗುವ ಪ್ರಯತ್ನದಲ್ಲಿದ್ದ ಕುಟುಂಬದ ಯಜಮಾನನನ್ನು ತಲೆಯಲ್ಲಿ ಗುಂಡು ಇಟ್ಟು ಕೊಲ್ಲಲಾಗುತ್ತದೆ. ಅವನ 14 ವರ್ಷದ ಮೇಲ್ಪಟ್ಟ ಮಕ್ಕಳನ್ನು ಎಲ್.ಟಿ.ಟಿ.ಇ. ಪಡೆಗೆ ಸೇರಲು ಕರೆದುಕೊಂಡು ಹೋಗಲಾಗುತ್ತದೆ..

ಎಲ್.ಟಿ.ಟಿ.ಇ.ಯ 6 ಸೈನಿಕರ ಗುಂಪು ಹತ್ತಿರ ಬಂದಾಗ 14 ವರ್ಷದ ಮಕ್ಕಳನ್ನು ಅಡಗಿಸಿಡಲು ಒದ್ದಾಡುತ್ತಾರೆ. 30 ಹೊಸ ಮರಿ ಸೈನಿಕರೊಂದಿಗೆ ಬರದಿದ್ದರೆ, ಆ 6 ಸೈನಿಕರಿಗೂ ತೀವ್ರ ಶಿಕ್ಷೆ ಕಾದಿರುತ್ತದೆ......?

ಇವು ಈಗ ತಮ್ಮ ದೇಶದಲ್ಲೇ ನಿರಾಶ್ರಿತರಾಗಿರುವ 2.7 ಲಕ್ಷಕ್ಕೂ ಹೆಚ್ಚು ತಮಿಳರಲ್ಲಿ ಹಲವರ ಅನುಭವ. ಇವು ಎಲ್.ಟಿ.ಟಿ.ಇ. ನಿಯಂತ್ರಣದ ಪ್ರದೇಶದಲ್ಲಿ ವಾಸಿಸಿದ್ದ, ಆ ಮೇಲೆ ಗೋಳಿಬಾರು-ನಿಷೇಧಿತ ಪ್ರದೇಶ ಎಂದು ಘೋಷಿಸಲಾದ ಪ್ರದೇಶದಲ್ಲಿ ಸಿಕ್ಕಿ ಹಾಕಿಕೊಂಡವರ ಬವಣೆಯ ಕೆಲವು ಮುಖಗಳು. ಇವು 'ಮಾನವ ಹಕ್ಕುಗಳಿಗಾಗಿ ಜಾಫ್ನಾ ವಿಶ್ವವಿದ್ಯಾಲಯದ ಅಧ್ಯಾಪಕರು' ಸಂಘಟನೆಯ ಪ್ರತ್ಯಕ್ಷ ಸಮೀಕ್ಷೆಯ ಅಪರೂಪದ ಪಕ್ಷಪಾತ-ರಹಿತ ವರದಿಯ ತುಣುಕುಗಳು.



ಎಲ್.ಟಿ.ಟಿ.ಇ.-ಶ್ರೀಲಂಕಾ ಸೈನ್ಯದ ನಡುವಿನ ಯುದ್ಧದ ನಾಲ್ಕನೇ ಮತ್ತು ಕೊನೆಯ 'ಘಟ್ಟ'ದಲ್ಲಿ ಎಲ್.ಟಿ.ಟಿ.ಇ. ಗೆ ಹಿನ್ನಡೆ ಆದಂತೆ ಅವರ ವಶದಲ್ಲಿ ಇದ್ದ ಪ್ರದೇಶದಲ್ಲಿ 2.7 ಲಕ್ಷಕ್ಕೂ ಹೆಚ್ಚು ತಮಿಳರು ಕಡಿಮೆ ಕಡಿಮೆ ಪ್ರದೇಶಕ್ಕೆ ತಳ್ಳಲ್ಪಟ್ಟರು. ಈ ಎರಡು ಪಡೆಗಳ ನಡುವೆ 'ಅತ್ತ ದರಿ ಇತ್ತ ಪುಲಿ' ಎಂಬಂತೆ ಸಿಕ್ಕಿ ಹಾಕಿಕೊಂಡರು. ಕೊನೆಯ ಹಂತದಲ್ಲಿ ಗೋಳಿಬಾರು-ನಿಷೇಧಿತ ಪ್ರದೇಶ ಎಂದು ಶ್ರೀಲಂಕಾ ಸೈನ್ಯ ಘೋಷಿಸಿದ ಪ್ರದೇಶಕ್ಕೆ ಬರುವ ಪ್ರಯತ್ನದಲ್ಲಿ ಅಥವಾ ಬರದ್ದರಿಂದ ಎರಡೂ ರೀತಿಯಲ್ಲಿ ಸಾವು-ನೋವುಗಳಿಗೆ ಗುರಿಯಾದರು. ಈಗ ಯುದ್ಧ ಮುಗಿದ ಮೇಲೂ ಅತ್ಯಂತ ಗಂಭೀರ ಸ್ಥಿತಿಯಲ್ಲಿ ನಿರಾಶ್ರಿತರ ಕ್ಯಾಂಪಿನಲ್ಲಿ ಅತ್ಯಂತ ದಯನೀಯ ಸ್ಥಿತಿಯಲ್ಲಿ ವಾಸಿಸುತ್ತಿದ್ದಾರೆ.




ಕಳೆದ ಹಲವು ತಿಂಗಳುಗಳಿಂದ ಹಲವು ಬಾರಿ (ಎಲ್.ಟಿ.ಟಿ.ಇ. ಹಿನ್ನಡೆ ಆದಾಗಲೆಲ್ಲ) ಓಡುತ್ತಾ ಓಡುತ್ತಾ ಜರ್ಜರಿತರಾಗಿದ್ದಾರೆ. ಹಲವು ವಾರಗಳ ಕಾಲ ಆಹಾರ, ವಿಶ್ರಾಂತಿ, ಆರೋಗ್ಯ ಸೇವೆ, ನೆಮ್ಮದಿ ಇಲ್ಲದೆ ಎಲುಬಿನ ಹಂದರಗಳಾಗಿದ್ದಾರೆ.

ನಿರಾಶ್ರಿತರ ಕ್ಯಾಂಪಿನಲ್ಲಿ ಕಂಡ ತಮಿಳರ ಪರಿಸ್ಥಿತಿ ನೋಡಿದ ಒಬ್ಬ ವಿದೇಶೀ ಪತ್ರಕರ್ತ 'ನಾನು ಶ್ರೀಲಂಕಾದಲ್ಲಿ ಇದ್ದೇನೋ, ಮಧ್ಯ ಆಫ್ರಿಕಾದಲ್ಲಿ ಇದ್ದೇನೋ ಎಂದು ಗೊಂದಲ ಆಯ್ತು' ಎಂದು ಉದ್ಗರಿಸಿದನಂತೆ. ನಿರಾಶ್ರಿತರು ತಮ್ಮ ಮನೆಗಳಿಗೆ ಸದ್ಯಕ್ಕೆ ಪುನಃ ಮರಳಲಾಗದ ಸ್ಥಿತಿಯಲ್ಲಿ ಇದ್ದಾರೆ. ಶ್ರೀಲಂಕಾ ಸೈನ್ಯ ಮತ್ತು ಎಲ್.ಟಿ.ಟಿ.ಇ. ನಡುವೆ ಸುಮಾರು 33 ವರ್ಷಗಳ ಕಾಲ ನಡೆದ ಭೀಷಣ ಯುದ್ಧದಲ್ಲೇ ತಮಿಳು ನಾಗರಿಕರಿಗೆ ಒದಗಿದ ಅತ್ಯಂತ ಕೆಟ್ಟ ಪರಿಸ್ಥಿತಿ ಇದು. ಶ್ರೀಲಂಕಾದ ತಮಿಳರನ್ನು ಇಂತಹ ಪರಿಸ್ಥಿತಿಗೆ ತಂದು ನಿಲ್ಲಿಸಿದ ಚಾರಿತ್ರಿಕ ಕಾರಣಗಳೇನು ? ಹಲವು ದಶಕಗಳಿಂದ ನೆನೆಗುದಿಗೆ ಬಿದ್ದಿರುವ ಶ್ರೀಲಂಕಾದ ತಮಿಳರ ಸಮಸ್ಯೆಗೆ ಪರಿಹಾರ ಏನು ? ಎಲ್.ಟಿ.ಟಿ.ಇ.ಯ ಅಂತ್ಯ ಶ್ರೀಲಂಕಾದ ತಮಿಳರ ಚಳುವಳಿಯ ಮೇಲೆ ಏನು ಪರಿಣಾಮ ಬೀರಬಹುದು?

ಆಳುವ ವರ್ಗ ಪೋಷಿಸಿದ ಸಿಂಹಳಿ ಸಂಕುಚಿತವಾದ

ಶ್ರೀಲಂಕಾದಲ್ಲಿ ಸಿಂಹಳಿ ಮಾತನಾಡುವ ಭೌದ್ಧ ಧರ್ಮ ಅನುಸರಿಸುವ ಜನ ಬಹುಸಂಖ್ಯಾತರು. ಸಿಂಹಳಿ ಮಾತನಾಡುವವರು ಸುಮಾರು ಶೇ. 75 ಮತ್ತು ಭೌದ್ಧ ಧರ್ಮ ಅನುಸರಿಸುವವರು ಸುಮಾರು ಶೇ. 69 ಇದ್ದಾರೆ. ತಮಿಳರು ಅತಿ ದೊಡ್ಡ ಅಲ್ಪ ಸಂಖ್ಯಾತರು. ತಮಿಳರಲ್ಲಿ ಹೆಚ್ಚಿನವರು ಹಿಂದೂ ಧರ್ಮ ಅನುಸರಿಸುವವರು. ಶ್ರೀಲಂಕಾದ ಉತ್ತರ ಮತ್ತು ಪೂರ್ವ ಪ್ರದೇಶಗಳಲ್ಲಿ ವಾಸಿಸಿದ್ದಾರೆ. ಆ ಪ್ರದೇಶಗಳಲ್ಲಿ ತಮಿಳರು ಬಹುಸಂಖ್ಯಾತರು.

ಬ್ರಿಟಿಷರು ಅವರ ಆಡಳಿತ ಅವಧಿಯಲ್ಲಿ ಶ್ರೀಲಂಕಾದ ಎಸ್ಟೇಟ್‌ಗಳಲ್ಲಿ ಕೆಲಸ ಮಾಡಲು ತಮಿಳರನ್ನು ಕರೆದುಕೊಂಡು ಹೋಗಿದ್ದರು. ಅಲ್ಲದೆ ಅದರ ಮೊದಲೂ ತಮಿಳರು ದೊಡ್ಡ ಸಂಖ್ಯೆಯಲ್ಲಿ ಭಾರತದಿಂದ ವಲಸೆ ಹೋಗಿದ್ದರು. ಅಲ್ಲದೆ ಹಲವು ಶತಮಾನಗಳಿಂದ ಅಲ್ಲೇ ನೆಲೆಸಿದವರೂ ಇದ್ದಾರೆ. ತಮಿಳರು ಭಾಷಿಕ ಮತ್ತು ಧಾರ್ಮಿಕ ಎರಡೂ ರೀತಿಯ ಅಲ್ಪ ಸಂಖ್ಯಾತರಾಗಿರುವುದು, ಕೆಲವು ಪ್ರದೇಶಗಳಲ್ಲಿ ದಟ್ಟವಾಗಿ ವಾಸಿಸಿರುವುದು, ಆ ಕಾರಣದಿಂದ ತಮಿಳು-ಸಿಂಹಳಿ ಜನರ ನಡುವೆ ಕೊಡು-ಕೊಳ್ಳುವ ವ್ಯವಹಾರ ಸೀಮಿತವಾಗಿರುವುದು, ಶ್ರೀಲಂಕಾದ ತಮಿಳರ ನೆರೆಯ ದೊಡ್ಡ ಪ್ರಬಲ ದೇಶದ (ಭಾರತ) ಪ್ರಬಲ ದೇಸೀ-ರಾಷ್ಟ್ರೀಯ (ತಮಿಳು) ಗುಂಪಿನ ಜತೆ (ಸ್ವಾಭಾವಿಕವಾದ) ಘನವಾದ ಸಾಂಸ್ಕೃತಿಕ ಸಂಬಂಧಗಳನ್ನು ಸಿಂಹಳೀಯರು ಅನುಮಾನ-ಆತಂಕದಿಂದ ಕಾಣುವುದು ಅಥವಾ ಅದನ್ನು ವಿದೇಶೀ ನಿಷ್ಠೆ ಎಂದು ಬಗೆಯುವುದು - ಈ ಮುಂತಾದ ಕಾರಣಗಳಿಂದ ಸಿಂಹಳಿಯರು ಮತ್ತು ತಮಿಳರ ನಡುವಿನ ಸಂಬಂಧಗಳು ಸಂಕೀರ್ಣವಾಗಿವೆ. ಅದರಲ್ಲಿ ಕೆಲವು ಅನುಮಾನಗಳು, ಅಸಮಾದಾನಗಳು, ತಪ್ಪು ತಿಳುವಳಿಕೆಗಳು ಸ್ವಾಭಾವಿಕವೇ. ಹಲವು ಬ್ರಿಟಿಷ್ ವಸಾಹತುಗಳಂತೆ ಶ್ರೀಲಂಕಾದಲ್ಲೂ ಬ್ರಿಟಿಷರು ಧರ್ಮ-ಭಾಷೆ-ಜನಾಂಗೀಯ ಆಧಾರಗಳ ಮೇಲೆ ಒಡೆದು ಆಳಿದ್ದರು. ಸ್ವಾಭಾವಿಕವಾಗಿಯೇ ಸಿಂಹಳಿಯರು ಮತ್ತು ತಮಿಳರು ಒಂದಾಗದಂತೆ ನೋಡಿಕೊಂಡಿದ್ದರು. ಆ ನಂತರ ಅಧಿಕಾರ ಪಡೆದ ಆಳುವ ವರ್ಗಗಳು ಎಲ್ಲಾ ಧರ್ಮ - ಭಾಷೆ - ಜನಾಂಗಗಳ ಜನತೆಯ ಐಕ್ಯ ನಾಡು ಕಟ್ಟುವ ಬದಲು, ಬ್ರಿಟಿಷರ ಒಡೆದು ಆಳುವ ನೀತಿ ಮುಂದುವರೆಸಿದರು. ಸಿಂಹಳಿಯರು ಮತ್ತು ತಮಿಳರ ನಡುವೆ ಇದ್ದ ಅನುಮಾನಗಳು ಅಸಮಾದಾನಗಳು ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವ ಬದಲು, ತಮ್ಮ ಬೇಳೆ ಬೇಯಿಸಿಕೊಳ್ಳಲು ಬಹುಸಂಖ್ಯಾತ ಸಿಂಹಳಿ



ಸಂಕುಚಿತವಾದವನ್ನು ಪೋಷಿಸುತ್ತಾ ಬಂದರು. ತಮಿಳು ಭಾಷೆ-ಸಂಸ್ಕೃತಿಗಳಿಗೆ ಕೊಡಬೇಕಾಗಿದ್ದ ಗೌರವ ಮತ್ತು ಸಮಾನ ಸ್ಥಾನಮಾನ, ತಮಿಳು ಪ್ರದೇಶಗಳ ಸಮಗ್ರ ಬೆಳವಣಿಗೆಗೆ ಬೇಕಾಗಿದ್ದ ಪ್ರಾದೇಶಿಕ ಸ್ವಾಯತ್ತತೆ ಕೊಡಲಿಲ್ಲ. ಶ್ರೀಲಂಕಾ ಸಿಂಹಳೀಯರಿಗೆ ಮಾತ್ರ ಸೇರಿದ್ದು. ತಮಿಳರು ಅಲ್ಲಿ ಎರಡನೇ ದರ್ಜೆಯ ಪ್ರಜೆಗಳು ಎಂಬ ಭಾವನೆ ಬರುವಂತೆ ನಡೆದುಕೊಂಡರು. ತಮಿಳು ಪ್ರದೇಶಗಳಲ್ಲಿ ಅಭಿವೃದ್ಧಿ ಕಡೆಗಣಿಸಲಾಯಿತು.

ತಮಿಳು ಪ್ರತ್ಯೇಕತೆಗೆ ಬೀಜ

ಸ್ವಾಭಾವಿಕವಾಗಿಯೇ ಇಂತಹ ಪರಿಸ್ಥಿತಿ ವಿರುದ್ಧ ತಮಿಳರ ಆಕ್ರೋಶ, ಪ್ರತಿಭಟನೆ ಬೆಳೆಯಿತು. 1956, 1958, 1978, 1981 ಮತ್ತು 1983 ರಲ್ಲಿ ಭಾರೀ ದೊಡ್ಡ ಮತ್ತು ವ್ಯಾಪಕವಾದ ಚಳುವಳಿಗಳು ನಡೆದವು.

ರನ್ನು ಶ್ರೀಲಂಕಾ ಸರ್ಕಾರ ಅತ್ಯಂತ ಕ್ರೂರವಾಗಿ ಮನ ಮಾಡಿತು. 1983 ರ ವ್ಯಾಪಕ ಳಿಳು-ವಿರೋಧಿ ದಂಗೆ ಮತ್ತು ದಮನ ಚಕ್ರ ವ್ಯಾಪಕ ಮತ್ತು ಭೀಕರ. ಇಂದಿಗೂ ಈ ಗೆ ಮತ್ತು ದಮನ ಚಕ್ರಗಳಲ್ಲಿ ಪಾಲ್ಗೊಂಡವರಿಗೆ ಆಗಿಲ್ಲ. ಶ್ರೀಲಂಕಾ ಸರ್ಕಾರ ತಮಿಳರ ್ಯಯುತ ಬೇಡಿಕೆಗಳನ್ನು ಗಮನಕ್ಕೆ ದುಕೊಳ್ಳಲೂ ನಿರಾಕರಿಸಿತು. ಬದಲಾಗಿ ಸಿಂಹಳೀ ಕುಚಿತವಾದವನ್ನು ಇನ್ನಷ್ಟು ಬಳಸಲು ಹರಡಲು ಯತ್ನಿಸಿದರು. 1972 ರ ಸಂವಿಧಾನ ತಿದ್ದುಪಡಿ ದಕ್ಕೆ ಉದಾಹರಣೆ. ಈ ತಿದ್ದುಪಡಿ ಪ್ರಕಾರ ಸಿಂಹಳಿ ಶದ ಅಧಿಕೃತ ಭಾಷೆ. ಬುದ್ಧ ಧರ್ಮ ಪ್ರಧಾನ ರ್ಮ. ಬೇರೆ ಭಾಷೆ, ಧರ್ಮಗಳಿಗೆ ಅವಕಾಶವಿಲ್ಲ ದಂತೆ ಆಯಿತು. ಇದು ತಮಿಳರ ಆಕ್ರೋಶ, ಸಮಾಧಾನಗಳನ್ನು ಇನ್ನಷ್ಟು ಹೆಚ್ಚಿಸಿದವು. ಂತಿಯುತ ಚಳುವಳಿಗಳಿಂದ ಪ್ರಯೋಜನ ಇಲ್ಲ, ವು ಶ್ರೀಲಂಕಾದ ಸರ್ಕಾರದ ಗಮನ ಯುವುದಿಲ್ಲ. ಸಶಸ್ತ್ರ ಹಿಂಸಾತ್ಮಕ ಹೋರಾಟವೇ ಶ್ರೀಲಂಕಾದ ರಾಷ್ಟ್ರೀಯ ಚೌಕಟ್ಟಿನೊಳಗೆ ಆಶೋತ್ತರ ಈಡೇರಿಸಲು ಅವಕಾಶ ಇಲ್ಲ. ಮಿಳರಿಗೆ ಪ್ರತ್ಯೇಕ ದೇಶ ಸ್ಥಾಪಿಸುವುದೇ ದಾರಿ ಂಬ ಭಾವನೆ ತಮಿಳು ಳುವಳಿಯಲ್ಲಿ ಬಲವಾಯಿತು. ಹಿಂದೆ ಮ್ಯುನಿಸ್ಟ್ ಮತ್ತು ಜಾತಿ-ವಿರೋಧಿ ಳುವಳಿಗಳಲ್ಲಿ ಭಾಗವಹಿಸಿದ ರಾರು ಯುವಕರು ಈ ಸಮರಶೀಲ ಳುವಳಿಗೆ ಆಕರ್ಷಿತರಾಗಿ ಅದರಲ್ಲಿ ಡಗಿಸಿಕೊಂಡರು. 1983 ರ ವ್ಯಾಪಕ ಮಿಳು-ವಿರೋಧಿ ದಂಗೆ ಮತ್ತು ಮನ ಚಕ್ರದ ನಂತರ ಈ ಚಳುವಳಿ ೀವ್ರವಾಯಿತು.

ಇದು ತಮಿಳು ಸಂಯುಕ್ತ ಮೋಚನಾ ರಂಗ (ತಮಿಳು ಯುನೈಟೆಡ್ ಲಿಬರೇಷನ್ ಫ್ರಂಟ್ TULF) ಸ್ಥಾಪನೆಗೆ ಹಾದಿ ಡಕೊಟ್ಟಿತು. TULF ಆ ಮೇಲೆ ಲವು ಕವಲುಗಳಾಗಿ ಒಡೆಯಿತು. T PLOTE, EPRLF, EROS, EPDP, ELO - ಇವೇ ಕೆಲವು ಹೊಮ್ಮಿದ ಪ್ರಮುಖ ಂಘಟನೆಗಳು. ಇವುಗಳಲ್ಲಿ ಹಲವು ಎಡ-ಪ್ರಗತಿಪರ ದ್ಧಾಂತದ ಒಲವು ಉಳ್ಳವಾಗಿದ್ದವು. ಪ್ರತ್ಯೇಕ ಈಳಂ' ಅವುಗಳ ಆರಂಭಿಕ ಘೋಷಣೆ ಆಗಿದ್ದರೂ ಲವು ಹಂತಗಳ ಸೈದ್ಧಾಂತಿಕ-ರಾಜಕೀಯ-ಮಿಲಿಟರಿ ಕಲಾಟ ಅನುಭವಗಳ ನಂತರ ತಮ್ಮ ನಿಲುವನ್ನು ದಲಿಸಿದವು. ಶ್ರೀಲಂಕಾದ ಆಳುವ ವರ್ಗಗಳ ತಾಸಕ್ತಿ ಸೃಷ್ಟಿಸಿದ ಸಮಸ್ಯೆ ಇದು. ಪ್ರತ್ಯೇಕ 'ಈಳಂ' ನತೆಯನ್ನು ಭಾಷೆ-ಧರ್ಮಗಳ ಆಧಾರದ ಮೇಲೆ ಡೆಯುವ ಆಳುವ ವರ್ಗಗಳ ಹುನ್ನಾರವನ್ನು ಲಪಡಿಸುತ್ತದೆ. ಶ್ರೀಲಂಕಾದ ರಾಷ್ಟ್ರೀಯ ಚೌಕಟ್ಟಿನೊಳಗೆ ತಮಿಳು ಸ್ವಾಯತ್ತತೆ ಕೊಡುವ ಪ್ರಮುಖ ಸಂವೈಧಾನಿಕ ಬದಲಾವಣೆಗಳಿಂದ ತಮಿಳು ಮಸ್ಯೆಗೆ ಪರಿಹಾರ ಸಾಧ್ಯ ಎಂದು ಕಂಡುಕೊಂಡವು. ರಾಜಕೀಯ ಚಟುವಟಿಕೆ, ಪಾಲ್ಗೊಳ್ಳುವಿಕೆ ಮತ್ತು ಳುವಳಿಯ ಅಗತ್ಯ ಕಂಡುಕೊಂಡವು. ತಮಿಳು ಗಳ ನಡುವೆ ಐಕ್ಯ ಹೋರಾಟದ ಗಂಭೀರ ಪ್ರಯತ್ನಗಳೂ ನಡೆದವು. ಕೆಲವು 'ಸಮಾಜವಾದಿ ಈಳಂ' ಘೋಷಣೆಯೊಂದಿಗೆ ಮುಂದುವರಿದವು ಉದಾ.

ಎಲ್.ಟಿ.ಟಿ.ಇ. - ಉಗ್ರ ಸಂಕುಚಿತ ರಾಷ್ಟ್ರೀಯತೆಯ ತಪ್ಪು ಹಾದಿ

ಆದರೆ ಎಲ್.ಟಿ.ಟಿ.ಇ. ಮಾತ್ರ ತನ್ನದೇ ಆದ ಉಗ್ರ ಮತ್ತು ಸಂಕುಚಿತ ರಾಷ್ಟ್ರೀಯತೆಯ ಬಲಪಂಥೀಯ ದಾರಿ ತುಳಿಯಿತು. ಸಶಸ್ತ್ರ ವಿಮೋಚನಾ ಹೋರಾಟದ ಮೂಲಕ ಪ್ರತ್ಯೇಕ ಈಳಂ ಸ್ಥಾಪನೆ ಒಂದೇ ತಮಿಳರ ಸಮಸ್ಯೆಗೆ ಪರಿಹಾರ. ಬೇರೆ ಯಾವುದೇ ಪರಿಹಾರ ದಾರಿ ಬಗ್ಗೆ ಯೋಚನೆ ಸಹ ಮಾಡುವವರು ತಮಿಳರಿಗೆ ದ್ರೋಹ ಮತ್ತು ಘಾತಕ ಬಗೆಯುವವರು ಎಂದು ಜರೆಯಿತು. ಮಾತ್ರವಲ್ಲ ಅಂತಹ ಸಂಘಟನೆಗಳ ನಾಶ ಮಾಡಲು ದಾಳಿಗೆ ಮುಂದಾಯಿತು. ಈ ಸಂಘಟನೆಗಳ 400 ಕ್ಕೂ ಹೆಚ್ಚು ಪ್ರಮುಖ ನಾಯಕರು ಮತ್ತು ಕಾರ್ಯಕರ್ತರ ಕೊಲೆ ಮಾಡಿತು. ಪದ್ಮನಾಭ (EPRLF), ಅಮೃತಲಿಂಗಂ, ಯೋಗೇಶ್ವರನ್, ಸಾಮಿ ತಂಬಿ ಮುತ್ತು (TULF) ಎಲ್.ಟಿ.ಟಿ.ಇ.ಗೆ ಬಲಿಯಾದ ಪ್ರಮುಖ ನಾಯಕರು. ಕೆಲವು ಕೊಲೆಗಳನ್ನು ಭಾರತದ ನೆಲದಲ್ಲೇ ನಡೆಸಲು ಸಹ ಎಲ್.ಟಿ.ಟಿ.ಇ. ಹಿಂದೆ





ಮುಂದೆ ನೋಡಲಿಲ್ಲ. ತಾನು ತಮಿಳರ ಹಿತಾಸಕ್ತಿ ಎತ್ತಿ ಹಿಡಿಯುವ ಏಕಮಾತ್ರ ಸಂಘಟನೆ ಎಂದು ಹೇಳಿಕೊಳ್ಳುತ್ತಾ ಇತರ ಸಂಘಟನೆಗಳ ನಾಶಕ್ಕೆ ವ್ಯವಸ್ಥಿತ ಪ್ರಯತ್ನ ನಡೆಸಿತು. ಅದರಲ್ಲಿ ಸಾಕಷ್ಟು ಸಫಲವೂ ಆಯಿತು.

ಶ್ರೀಲಂಕಾ ಸರ್ಕಾರಕ್ಕೆ ಇದು ಅನುಕೂಲಕರವಾಗಿ ಪರಿಣಮಿಸಿತು. ತಮಿಳು ಸಂಘಟನೆಗಳ ನಡುವೆ ಇನ್ನಷ್ಟು ಅನುಮಾನ, ತಿಕ್ಕಾಟ, ಹಿಂಸಾಚಾರಕ್ಕೆ ಅದು ತುಪ್ಪ ಸುರಿಯಿತು. ಅಲ್ಲದೆ ಎಲ್.ಟಿ.ಟಿ.ಇ.ಯ ಉಗ್ರ ಸಂಕುಚಿತ ರಾಷ್ಟ್ರೀಯತೆಯ ನೀತಿಯನ್ನು ತೋರಿಸಿ ಎಲ್ಲಾ ತಮಿಳು ಸಂಘಟನೆಗಳನ್ನು ದಮನಿಸುವುದು ಸುಲಭವಾಯಿತು. ತಮಿಳು ರಾಜಕೀಯ ಹೋರಾಟಕ್ಕೆ ಹಾದಿ ಮುಚ್ಚಿತು. ಉಗ್ರ ಸಿಂಹಳೀ ಸಂಕುಚಿತವಾದ ಬೆಳೆಸಲು ಹರಡಲೂ ಇದರಿಂದ ನೆರವಾಯಿತು. ಆಳುವ ವರ್ಗಗಳ ವಿರುದ್ಧ ಉಗ್ರ ಎಡ ಚಳುವಳಿಯಾಗಿ ಆರಂಭವಾದ ಜೆ.ವಿ.ಪಿ. ಉಗ್ರ ಸಿಂಹಳೀ ಸಂಕುಚಿತವಾದವನ್ನು ಒಪ್ಪಿಕೊಂಡಿತು. ಎಲ್.ಟಿ.ಟಿ.ಇ. ಮತ್ತು ಜೆ.ವಿ.ಪಿ. ಜನತೆಯ ದೊಡ್ಡ ಶತ್ರು. ಶ್ರೀಲಂಕಾದ ಜನತೆಯನ್ನು ಎಲ್.ಟಿ.ಟಿ.ಇ. ಮತ್ತು ಜೆ.ವಿ.ಪಿ.ಯಂತಹ ಉಗ್ರಗಾಮಿಗಳಿಂದ 'ರಕ್ಷಿಸುವುದು' ತನ್ನಿಂದ ಮಾತ್ರ ಸಾಧ್ಯ ಎಂದು ಆಳುವ ವರ್ಗಗಳ ಪಕ್ಷಗಳು ಜನತೆಯನ್ನು ನಂಬಿಸುವುದು ಸುಲಭವಾಯಿತು. ಶ್ರೀಲಂಕಾ ಸರ್ಕಾರದ ತಮಿಳು-ವಿರೋಧಿ ಧೋರಣೆ ಮತ್ತು ದಮನ ಸಹ ಹೆಚ್ಚು ಹೆಚ್ಚು ತಮಿಳು ಯುವಕರನ್ನು ಎಲ್.ಟಿ.ಟಿ.ಇ.ಯ ಉಗ್ರ ಪ್ರತ್ಯೇಕತೆಯತ್ತ ಆಕರ್ಷಿತವಾಗುವಂತೆ ಮಾಡಿದವು. ಎಲ್.ಟಿ.ಟಿ.ಇ.ಯ ಪ್ರಾಬಲ್ಯ, ಮಿಲಿಟರಿ ಬಲ ಬೆಳೆಯುತ್ತಾ ಹೋಯಿತು. ಉಳಿದ ಸಂಘಟನೆಗಳು ಕ್ಷೀಣಿಸುತ್ತಾ ಹೋದವು. ಶ್ರೀಲಂಕಾ ಕ್ರಮೇಣ ಎರಡು ಉಗ್ರ ಬಲಪಂಥೀಯ ರಾಷ್ಟ್ರೀಯತಾ-ಸಂಕುಚಿತ ವಾದಿ ಶಕ್ತಿಗಳ ರಣಾಂಗಣ ವಾಯಿತು.

ಶ್ರೀಲಂಕಾದ ತಮಿಳರ ಬವಣೆಯನ್ನು ನಿವಾರಿಸುವ ಹೋರಾಟಕ್ಕೆ ಸ್ವಾಭಾವಿಕವಾಗಿಯೇ ಭಾರತದ ಜನತೆಯ ಅನುಕಂಪ ಬೆಂಬಲ ಇತ್ತು. ಅದರಲ್ಲೂ ತಮಿಳುನಾಡಿನಲ್ಲಿ ಇದು ಪ್ರಬಲ ಸೌಹಾರ್ದ ಬೆಂಬಲ ನೀಡುವ ಮಟ್ಟಕ್ಕೆ ಹೋಯಿತು. ಇದರ ಒತ್ತಡದಿಂದ ಭಾರತ ಸರ್ಕಾರ ಸಹ ಶ್ರೀಲಂಕಾದ ತಮಿಳರ ಸಮಸ್ಯೆಗೆ ರಾಜಕೀಯ ಪರಿಹಾರಕ್ಕೆ ಹಲವು ಸೂಚನೆಗಳನ್ನು ನೀಡಿತು. 1960 ರ ಶಾಸ್ತ್ರಿ-ಬಂಡಾರನಾಯಕೆ ಒಪ್ಪಂದ, 1987 ರ ರಾಜೀವ್ ಗಾಂಧಿ-ಜಯವರ್ಧನೆ ಒಪ್ಪಂದದ ಹಲವು ಅಂಶಗಳು ಇವಕ್ಕೆ ಉದಾಹರಣೆಗಳು. ಆದರೆ ಈ ಒಪ್ಪಂದಗಳಲ್ಲಿ ಇದ್ದ ರಾಜಕೀಯ ಪರಿಹಾರದ ಅಂಶಗಳ ಪ್ರಾಮಾಣಿಕ ಜಾರಿಗೆ ಯಾವ ಶ್ರೀಲಂಕಾ ಸರ್ಕಾರವೂ ಪ್ರಯತ್ನಿಸಲಿಲ್ಲ. ಭಾರತ ಸರ್ಕಾರಕ್ಕೂ ಸಹ ಅಂತಹ ರಾಜತಾಂತ್ರಿಕ ಒತ್ತಡ ಹೇರಲು ಸಾಧ್ಯವಾಗಲಿಲ್ಲ. ಇವೆಲ್ಲವನ್ನು ಬಳಸಿ ರಾಜಕೀಯ ಒತ್ತಡ ಹೇರಿ ತಮಿಳರ ಬವಣೆಯನ್ನು ಕಡಿಮೆ ಮಾಡುವ ಹಂತ ಹಂತದ ಕ್ರಮಗಳಿಗೆ ಎಲ್.ಟಿ.ಟಿ.ಇ. ಆಸಕ್ತಿ ತೋರಲಿಲ್ಲ. ರಾಜೀವ ಗಾಂಧಿ ನಡೆಸಿದ 'ಭಾರತೀಯ ಶಾಂತಿ ಪಾಲನಾ ಪಡೆ' ಯ ಪ್ರಯೋಗ ಸಹ ದುರಂತಕಾರಿ ಕೊನೆ ಕಂಡಿತು. ಗೆರಿಲ್ಲಾ ಹೋರಾಟದ ಬಲವನ್ನು ರಾಜಕೀಯ ಚೌಕಾಶಿಗೆ ಬಳಸುವ ಚಾಕಚಕ್ಯತೆ ಸಹ ತೋರಿಸಲಿಲ್ಲ. ತಮಿಳರ ಸಮಸ್ಯೆ ಪರಿಹಾರಕ್ಕೆ ಸಿಂಹಳೀ ಜನತೆಯ ಬೆಂಬಲ ಗೆಲ್ಲುವ ಯಾವುದೇ ಪ್ರಯತ್ನ ಮಾಡಲಿಲ್ಲ. ಮಾತ್ರವಲ್ಲ ಅದಕ್ಕೆ ವಿರುದ್ಧವಾಗಿ ಪ್ರತ್ಯೇಕ 'ಈಳಂ'ಗೆ ಹಠ ಹಿಡಿದು ಶ್ರೀಲಂಕಾದಲ್ಲಿ ಪ್ರಕ್ಷೋಭೆ ಹೆಚ್ಚಿಸುತ್ತಾ ಹೋಯಿತು. ಎಲ್.ಟಿ.ಟಿ.ಇ. ಗೆ 'ಈಳಂ' ಸರ್ಕಾರದ ಅಧಿಕಾರ ಹಿಡಿಯುವುದನ್ನು ಬಿಟ್ಟರೆ ತಮಿಳರ ಸಮಸ್ಯೆ ಪರಿಹಾರಕ್ಕೆ ಯಾವುದೇ ಆಸಕ್ತಿ ಇಲ್ಲ ಎಂಬ ವ್ಯಾಪಕ ಭಾವನೆ ಮೂಡಿತು.

ನಾಲ್ಕು ಹಂತಗಳ ಭೀಕರ ಯುದ್ಧ

ಎಲ್.ಟಿ.ಟಿ.ಇ. ನಾಲ್ಕು ಹಂತಗಳಲ್ಲಿ ಶ್ರೀಲಂಕಾದ ಸರ್ಕಾರದ ವಿರುದ್ಧ ಪೂರ್ಣ ಪ್ರಮಾಣದ ಅತ್ಯಂತ ಹಿಂಸಾತ್ಮಕ ಯುದ್ಧ ನಡೆಸಿತು. ಸಿಂಹಳೀ ಮತ್ತು ಜಗತ್ತಿನ ಜನತೆಯ ಅನುಕಂಪ ಕಳೆದುಕೊಳ್ಳುವ ಎಲ್ಲಾ ತರದ ಭೀಕರ ಭಯೋತ್ಪಾದಕ ಕೃತ್ಯಗಳನ್ನು ನಡೆಸಿತು. ಭಾರತ ಮತ್ತು ಶ್ರೀಲಂಕಾದ ಆಳುವ ವರ್ಗಗಳು ಮಿಲಿಟರಿ ಸಹಕಾರ ಮಾಡುವ ಸ್ಥಿತಿ ನಿರ್ಮಿಸಿತು. ಶ್ರೀಲಂಕಾದ ರಕ್ಷಣಾ ಮಂತ್ರಿ/ಕಾರ್ಯದರ್ಶಿ, ಉನ್ನತ ರಾಜಕೀಯ ನಾಯಕರ ಮತ್ತು ಮಿಲಿಟರಿ ಅಧಿಕಾರಿಗಳ ಹತ್ಯೆ ಮಾಡಿತು. ರಾಜೀವ ಗಾಂಧಿಯವರ ಹತ್ಯೆಯೊಂದಿಗೆ ಅದು ಪರಾಕಾಷ್ಠೆ ಮುಟ್ಟಿತು. 'ಆತ್ಮಹತ್ಯಾ ದಳಗಳು' ಅದರ ಭೀಕರ ಟ್ರೇಡ್ ಮಾರ್ಕ್ ಆದವು. ಅದರ ಭೀಕರ ಕೃತ್ಯಗಳಿಗೂ ಶ್ರೀಲಂಕಾ ತಮಿಳರ ಸಮಸ್ಯೆ ಪರಿಹಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂಬ ವ್ಯಾಪಕ ಭಾವನೆ ಮೂಡಿತು. ವಿದೇಶಗಳಲ್ಲಿ ನೆಲೆಸಿರುವ ಶ್ರೀಲಂಕಾದ ತಮಿಳರ ಧನ ಬೆಂಬಲದಿಂದ ಎಲ್.ಟಿ.ಟಿ.ಇ. ಗಟ್ಟಿಗೊಳ್ಳುತ್ತಾ ಹೋಯಿತು. ಶ್ರೀಲಂಕಾದ ಸರ್ಕಾರದ ವಿರುದ್ಧ ಯುದ್ಧದಲ್ಲಿ ಹಿನ್ನಡೆಯಾದಾಗ ಪುನಃ ಮಿಲಿಟರಿ ಬಲಗೂಡಿಸಲು ಶಾಂತಿ ಮಾತುಕತೆಯಲ್ಲಿ ತೊಡಗುತ್ತಿತ್ತು. ಮಿಲಿಟರಿ ಬಲಗೂಡಿದಂತೆ ಪುನಃ ಯುದ್ಧ ಹೂಡುತ್ತಿತ್ತು. ಶಾಂತಿ ಮಾತುಕತೆ-ಒಪ್ಪಂದ ಬಗ್ಗೆ ಅದು ಪ್ರಾಮಾಣಿಕವಾಗಿಲ್ಲ. ಅದು ಅದರ ಮಿಲಿಟರಿ ತಂತ್ರದ ಭಾಗ ಅಷ್ಟೇ ಎಂಬ ಭಾವನೆ ಮೂಡಿದೆ.

1985-89 ರ ನಡುವೆ ಎಲ್.ಟಿ.ಟಿ.ಇ. ಮೊದಲ ಹಂತದ ಯುದ್ಧ ಮಾಡಿತು. 1989-90 ಶಾಂತಿ ಮಾತುಕತೆಗಳಲ್ಲಿ ತೊಡಗಿತ್ತು. 1990-1995 ಅವಧಿಯಲ್ಲಿ ಎರಡನೇ ಹಂತದ ಯುದ್ಧ ಮಾಡಿತು. 1995 ರ ಮೊದಲ ಭಾಗದಲ್ಲಿ ಪುನಃ ಶಾಂತಿ



ಮಾತುಕತೆಗಳಲ್ಲಿ ತೊಡಗಿತ್ತು. 1995-2000 ಅವಧಿಯಲ್ಲಿ ಮೂರನೇ ಹಂತದ ಯುದ್ಧ ಮಾಡಿತು. 2000-2005 ಅವಧಿಯಲ್ಲಿ ಹಲವು ಸ್ಥಳಗಳಲ್ಲಿ ಪ್ರಬಲ ಅಂತರ್ರಾಷ್ಟ್ರೀಯ ಬೆಂಬಲದಿಂದ ಪುನಃ ದೀರ್ಘ ಶಾಂತಿ ಮಾತುಕತೆಗಳಲ್ಲಿ ತೊಡಗಿತ್ತು. ಬಾಲಸಿಂಗಂ, ತಮಿಳ್ ಸೆಲ್ವನ್, ಕರುಣಾ ಮುಂತಾದ

ಪುಟ 14ಕ್ಕೆ



■ ಕೆ. ನೀಲಾ



ಆಂಧ್ರಪ್ರದೇಶದಂತಹ ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲೂ ಕಾಂಗ್ರೆಸ್ ಮರಳಿ ಅಧಿಕಾರ ಹಿಡಿಯುವಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಾಕಷ್ಟು ನೆರವಾಗಿದೆಯಂತೆ. ಆದರೆ ಕಾಂಗ್ರೆಸ್, ಬಿಜೆಪಿಗಳಿಗೆ ಇದನ್ನು ಜಾರಿ ಮಾಡುವ ಮನಸ್ಸು ಇತ್ತೇ? ಇದೆಯೇ? ಗ್ರಾಮೀಣ ಉದ್ಯೋಗ ಖಾತ್ರಿ ಜಾರಿಯಾದ್ದದು ಹೇಗೆ ಎಂಬುದಕ್ಕೆ ಬೀದರ್‌ನ ಈ ಘಟನಾವಳಿಗಳು ಸಾಕ್ಷಿಯಾಗಿವೆ.

ಯಾಕ ಕೆಲಸ ಕೊಟ್ಟಿಲ್ಲ ?

ಯಾರು ಯಾರಿಗೆಲ್ಲ ನಮ್ಮ ಯಾತ್ರೆಯ ಬಗ್ಗೆ ಸಂಪೂರ್ಣ ಮಾಹಿತಿ ಕೊಟ್ಟು ಅವರಿಂದ ಸಹಾಯ ಪಡೆದು ಅಂತೂ ಉದ್ಯೋಗ ಖಾತ್ರಿ ಕಾಯ್ದೆಯಡಿಯಲ್ಲಿ ಗ್ರಾಮೀಣ ಪ್ರದೇಶದ ದುಡಿಯುವ ಜನತೆಗೆ ಕೆಲಸ ದೊರಕಿಸುವ ಮನಸ್ಸು ಮಾಡಿ ಹೊರಟೇ ಬಿಟ್ಟೆವು. ಮೀನಾಕ್ಷಿ ನಾನು ನಮ್ಮೊಂದಿಗೆ ಇಸಾಮೊದ್ದಿನ್ ಸಂಗಶೆಟ್ಟಿ ಪಾಟಿಲರು ಸೇರಿಕೊಂಡರು. ಮನೋಹರ ಸಹ ಜೀಪು ಹತ್ತೇ ಬಿಟ್ಟರು. ವಿದ್ಯಾರ್ಥಿ ಸಂಘದ ದಿನೇಶ ತುಂಬ ಹುರುಪಿನಿಂದ ಪಾಲ್ಗೊಂಡು ನಮ್ಮ ಕೆಲಸಕ್ಕೆ ಭರವಸೆ ತಂದನು.

ಮೊದಲ ದಿನ ಬೀದರನ ಅಯಾಸಪೂರಕ್ಕೆ ಹೋದ ಅನುಭವ ನಮ್ಮನ್ನು ಬಿಟ್ಟಿರಲಿಲ್ಲ. ನಾನು ಮೀನಾಕ್ಷಿ ಶಂಭುಲಿಂಗ ಮತ್ತು ದಿನೇಶ ನಾಲ್ಕೂ ಜನವೂ ದ್ವಿಚಕ್ರ ವಾಹನ ಹತ್ತಿ ಹೋಗಿದ್ದೆವು. ಆ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಕೆಲಸವೆನ್ನುವುದನ್ನು ಸೀದಾ ಸೀದಾ ಜೆಸಿಬಿ ಯಂತ್ರದ ಮೂಲಕ ಮಾಡಿ ಜನರ ಕೈಗೆ ನೂರು ಇನ್ನೂರು ಕೊಟ್ಟು ಅವರಿಂದ ಸಹಿ ಪಡೆದು ಎಲ್ಲ ಹಣವನ್ನೂ ನುಂಗಿ ನೀರು ಕುಡಿದಿದ್ದರು. ಅವರಲ್ಲಿ ಒಬ್ಬ ವ್ಯಕ್ತಿಯು ಕಿರಾಣಿ ಅಂಗಡಿ ನಡೆಸುವಾತ. ನಾವು ಬರುವುದು ಆತನ ಮಾಹಿತಿಗಿತ್ತು. ನಮ್ಮ ಬಹಿರಂಗ ಸಭೆಯು ಮುಗಿಸಿ ಬರುವಾಗ ಒಂದು ಜೋರು ಮಳೆ ಸುರಿಯಿತು. ಸುಗುಣಮ್ಮನ ಮನೆಯಲ್ಲಿ ರೊಟ್ಟಿ ಪುಂಡಿಪಲ್ಲೆ ಉಂಡು ಗಾಡಿ ಹತ್ತಬೇಕೆಂದರೆ ಅಲ್ಲಿ ಆಗಿದ್ದೇನು? ಗಾಡಿಯೊಳಗಿನ ಎಣ್ಣೆ ಪೂರ್ತಿ ಖಾಲಿ ಮಾಡಲಾಗಿದೆ. ರಾತ್ರಿ ಹೊತ್ತು ಎಲ್ಲಿಯೂ ಎಣ್ಣೆ ಸಿಗುವುದಿಲ್ಲ. ಕಿತಾಪತಿ ಯಾರದ್ದೆಂದು ನಮ್ಮ ಅರಿವಿಗೆ ಬಂದಿತು. ಮೀನಾಕ್ಷಿ ಹೇಳಿದಳು, 'ಸುಗುಣಮಕ್ಕ ಅಂಗಳದಾಗ ಹೊರಸು ತಂದು ಹಾಕು. ಮುಂಜಾನೆದ್ದು ಹೊರಡ್ತಿವಿ. ನಿಮ್ಮೂರಾಗ ಚಲೋ ತಣ್ಣಗ ಗಾಳಿ ಅದಾ.'

ನಾಲ್ಕು ತಾಸು ಮುತ್ತಿಗೆ

ಹನ್ನೊಂದನೆ ತಾರೀಖಿನಂದು ದುಪ್ಪಟ್ಟು ಹುರುಪಿನಿಂದ ಹತ್ತಾರು ಗ್ರಾಮದ ಜನ ಕೆಂಬಾವುಟ ಹಿಡಿದು ಬಂದರು. ಜಿಲ್ಲಾ ಪಂಚಾಯತ್ ಘೇರಾವ್‌ಗೆ ಮುಂದಾದರು. ಅಲಿಯಾಬಾದ್‌ನಲ್ಲಿ ಒಂದು ವಾರದ ಬಾಕಿ ಕೊಟ್ಟೇ ಇಲ್ಲ. ಅರ್ಜಿ ಸಲ್ಲಿಸಿದರೂ ಕೆಲಸ ಕೊಡಲಿಲ್ಲ. ಎಲ್ಲಿಯೂ ಕ್ಷೇತ್ರದ ಸವಲತ್ತುಗಳು ದೊರಕಿಸಲಿಲ್ಲ. ಒಂದೇ ಎರಡೇ? ನೂರಾರು ಆಕ್ರೋಶದ ಸವಾಲುಗಳನ್ನು ಹೊತ್ತು ಬಂದಿದ್ದರು. ಕನಿಷ್ಠ ನಾಲ್ಕು ತಾಸು ಮುತ್ತಿಗೆಯಲ್ಲಿ ಅಧಿಕಾರಿಗಳು ನಡುಗಿ ಹೋದರು. ಬೇಸಿಗೆ ಪೂರ್ತಿ ಕೆಲಸ ಕೊಡದ ತಪ್ಪು ಅವರದ್ದೆಂದು ಅಧಿಕಾರಿಗಳ ಮುಖದ ಮೇಲೇ ಹೇಳಿದರು. ನಮ್ಮ ಹಕ್ಕೊತ್ತಾಯಗಳು ಪಡೆದು ಮುತ್ತಿಗೆಯನ್ನು ವಾಪಾಸು ಪಡೆಯಲಾಯಿತು.

ಯಾಕ ಕೆಲಸ ಕೊಟ್ಟಿಲ್ಲ?

ಯಾವ ಪಂಚಾಯತ್‌ನಲ್ಲೂ ಉದ್ಯೋಗ ಖಾತ್ರಿ ಏನು ಎಂಬುದನ್ನು ಜನತೆಗೆ ಅರಿವು ಮೂಡಿಸುವ ಕೆಲಸ ಪ್ರಜ್ಞಾಪೂರ್ವಕವಾಗಿ ಮಾಡದೇ ಕೈಬಿಡಲಾಗಿತ್ತು. ನಮ್ಮ 'ಕೆಲಸದ ಹಕ್ಕಿನ ಅರಿವು ಆಂದೋಲನದ ಯಾತ್ರೆ'ಯು ಮರು ದಿನದಿಂದ ಸುರುವಾಯಿತು. ಔರಾದನ ಕಟ್ಟಡ ಕಾರ್ಮಿಕ ಸಂಘದ ವಿಶ್ವನಾಥ ನಮ್ಮೊಂದಿಗೆ ಸೇರಿಕೊಂಡರು. ನೇರವಾಗಿ ಸುಂಧಾಳ ಗ್ರಾಮ ಪಂಚಾಯತ್ ಕಚೇರಿಗೆ ನಡೆದೆವು. ನೂರಾರು ಜನ ತಮಗೆ ಕೆಲಸ ಬೇಕೆಂದು ಧಾವಿಸಿ ಬಂದಿದ್ದರು. ಹಿಂದಿನ ವರ್ಷದಲ್ಲಿ ಕೆಲಸ ಮಾಡಿಸಿದ ಮಾಹಿತಿ ಕೊಡಲು ಕೇಳಿದೆವು. ಉಹುಂ. ಎಲ್ಲವೂ ಬೋಗಸ್. ಕಾರ್ಯದರ್ಶಿ ಮಾತೇ ಆಡಲಿಲ್ಲ. 'ನಾಲ್ಕು ದಿನದಾಗ ಕೆಲಸ ಕೊಡ್ತಿವ್ರಿ. ಅರ್ಜಿ ಕುಡ್ರಿ' ಇದೊಂದೇ ಆತನ ಮಾತಾಗಿತ್ತು. ಈವರಿಗಿ ಯಾಕ ಕೆಲಸ ಕೊಟ್ಟಿಲ್ಲ? ಅನ್ನುವ ಪ್ರಶ್ನೆಗೆ ಮೌನವೇ ಉತ್ತರವಾಗಿತ್ತು. ಬಂದವರಿಗೆ ಫಾರಂ ನಂ 6 ವಿತರಣೆ ಮಾಡಿಸಿ ಸಂಘದ ಮುಖಂಡರಿಗೆ ಭರ್ತಿ ಮಾಡುವ ಜವಾಬ್ದಾರಿ ಕೊಟ್ಟು, ರೇಗಾ ಕುರಿತು ಸಂಪೂರ್ಣ ಮಾಹಿತಿ ಹೇಳಿ ಕೆರೆಯ ಕೆಲಸ ಸುರು ಮಾಡಲು ಒಪ್ಪಿಸಿ ನಾಗಮಾರಪಳ್ಳಿ ಗ್ರಾಮ ಪಂಚಾಯತ್‌ನತ್ತ ನಮ್ಮ ಪಯಣ ಸಾಗಿತು. ಗುರುಪಾದಪ್ಪ ನಾಗಮಾರಪಳ್ಳಿ ಎಂಬ ಭ್ರಷ್ಟ ರಾಜಕಾರಣಿಯ ಊರಿದು. ಜನರನ್ನು ಹಾಡೇ ಹಗಲೇ ಲೂಟಿ ಮಾಡಿಯೇ ರಾಜಕಾರಣ ಮಾಡಿದ ಮನುಷ್ಯ. ರಸ್ತೆಯಲ್ಲಿ ನಮ್ಮ ವಾಹನ ಧೂಳೆಬ್ಬಿಸುತ ಹೊರಟಿತು. ರಸ್ತೆಯಲ್ಲಿ ದೂರದಿಂದ ಕುಂಚಗಿ ಹೊದ್ದುಕೊಂಡು ಬೆಂಕಿಯಂಥ ಬಿಸಿಲು ಸೀಳಿ ಕೆಲವು ಆಕೃತಿಗಳು ನಡೆದು ಬರುತ್ತಿದ್ದವು. ಮೂಳೆ ಚಕ್ಕಳದ ಜನ ಅವರು. ಕಾಲಲ್ಲಿ ಸವೆದು ಹೋದ ಚಪ್ಪಲಿಗಳು. ಹರಿದ ಪಂಚಿ ಸೀರೆಗಳು. ಕಣ್ಣಲ್ಲಿ ದಿವ್ಯ ನಿರಾಶೆ. ಅವರು ಬಡಕಲಾದ ತಮ್ಮ ಶರೀರವನ್ನು ವೇಗದಿಂದ ತಳ್ಳುತ ಬರುತ್ತಿದ್ದರು. 'ಕೆಲಸ ಕುಡ್ತೀರಂತಲ ತಾಯಿ. ಎಲ್ಲಿನೂ ಧಂದ್ಯಾ ಸಿಗವಲ್ದು. ಹೊಟ್ಟಿಗಿ ಯಾನ ಉಣ್ಣಬೇಕು' ದಿನದಾಗ ಒಮ್ಮನೂ ಹೊಟ್ಟಿ ತುಂಬ ಉಣಲಾಕ ಸಿಗಾಲ್ದು. ನಮ್ಮೂರಾಗ ಮಸಿನ್ ಹಚ್ಚಿ ಕೆಲಸ ಮಾಡಸ್ಯಾರ. ನಮಗ ಕುಡ್ರಿ ಅಂದ್ರ ಬಯ್ದು ಓಡ್ಸಿ ಹಾಕ್ಯಾರ? ಅವರು ಬೆವರು ಒರೆಸಿಕೊಳ್ಳುತ ಖಡಿ ಬಿಸಿಲಲ್ಲಿ ನಿಂತು ದಯನೀಯವಾಗಿ ಎಲ್ಲವನೂ ವಿವರಿಸುತ್ತಿದ್ದರು. ಬಿಸಿಲೆಂಬೋ ಬಿಸಿಲೇ ಕರಗಿ ಹರಿಯುತ್ತಿದಯೇನೋ ಎನ್ನುವಂತೆ ಎಲ್ಲ ಮೈಯಲ್ಲಿ ಬೆವರು ಧಾರೆಗಟ್ಟಿತ್ತು. ಅವರು ಹೇಳುವ ಪರಿಗೆ, ನಡೆದು ಬಂದ ರೀತಿಗೆ ಮತ್ತು ಅಸ್ಥಿಪಂಜರದಂಥ ಮೈಯನ್ನು ನೋಡಿದ ಯಾರಿಗಾದರೂ ಹೃದಯ ಕಲಕಿ ಹೋಗುವುದು. ಕರುಳು ಕಿತ್ತು ಬರುವಂಥ ಹೊತ್ತದು. ಅವರು ಕೈಗೊಂದು ಕೆಲಸ ಮಾತ್ರ ಕೇಳುತ್ತಿದ್ದರು. ಹೊಟ್ಟೆ ತುಂಬ ಊಟ ಮಾತ್ರವೇ ಬೇಕಾಗಿತ್ತು. ಯಾಕೆಂದರೆ ಮರುದಿನ ದುಡಿಯಲು ಊಟ ಬೇಕಾಗಿತ್ತು. ಅವರೇನು ಅರ್ಜಿ ಸಲ್ಲಿಸಿ ಹುಟ್ಟಿ ಬಂದವರಲ್ಲ. ಎಲ್ಲರ ಜನ್ಮದಂತೆ ಅವರೂ ಜನ್ಮಿಸಿದವರು. ಅವರಿಗೇನು ಗೊತ್ತು ಈ ಕಿತ್ತು ತಿನ್ನುವ ಬಡತನ, ಮೋಸಗಾರ ಭೂಮಾಲಿಕರ ಅಟ್ಟಹಾಸ ಅವರ ಹುಟ್ಟನ್ನೇ ಅಪಹಾಸ್ಯ ಮಾಡುವುದೆಂದು.

'ಕಿಲಿ ಹಾಕಿದರ ಕೆಲಸ ಸಿಗ್ತದ'?

ಹಣೆಯ ಮೇಲಿನ ಬೆವರು ಕಣ್ಣಿಗಿಳಿದು ಕಣ್ಣ ನೀರೊಂದಿಗೆ ಬೆರೆತು ಕಣ್ಣಂಗಳದಲ್ಲಿ ಒಂದು ನಮೂನೆಯ ಉರಿ ಭಗಭಗ ಎನ್ನುತ್ತಿತ್ತು. ಎದೆಯಾಳದಲ್ಲಿ ಆಕ್ರೋಶ ಭುಸುಗುಡುತ್ತಿತ್ತು. 'ಪಂಚಾಯತ್ ಕಚೇರಿಗಿ ಹೋಗ್ರಿ. ಅರ್ಜಿ ಹಾಕ್ರಿ. ಸಂಘದವರು ಅಲ್ಲಿ ಹರಾ. ಒಂದು ವಾರದಾಗ ಕೆಲಸ ಕುಡಲಾಕ ಒಪ್ಪಾರ. ಕೊಟ್ಟಿಲ್ಲಂದ್ರ ಕಚೇರಿಗಿ ಜಡದ ಕೀಲಿ ಹಾಕರಿ' ಅಂದೆವು. ಅವರ ಕಣ್ಣಲ್ಲಿ ಒಂದೇ ಒಂದು ಭರವಸೆಯ ಕಿರಣ ಹೊಳೆಯಿತು. 'ಕಿಲಿ ಹಾಕದುರ ಕೆಲಸ ಸಿಗ್ತದ'? ಅವರ ಪ್ರಶ್ನೆಯದು. 'ಹಾಂ. ನಮ್ಮ ಹಕ್ಕ ಅದಾ ಕೆಲಸ ತಗೊಮಾದು.' ಅವರು ನಡೆದು ಬಂದ ದಣಿವು ಮರೆತರು. ಗುಳಿ ಬಿದ್ದ ಗಲ್ಲದಲ್ಲಿ ಒಂದು ಪುಟ್ಟ ಕಳೆ ಬಂದಿತು. ಹೋರಾಟವೆಂಬುದು ದುಡಿಯುವ ವರ್ಗದ ಜೀವ ಚೈತನ್ಯ. ನಾವು ನಾಗಮಾರಪಳ್ಳಿಯತ್ತ ಹೊರಟೆವು. ಅವರು ಕೆಲಸಕ್ಕಾಗಿ ಅರ್ಜಿ ಸಲ್ಲಿಸಲು ಸುಂಧಾಳನತ್ತ.

ನಾಗಮಾರಪಳ್ಳಿಯ ಕಾರ್ಯದರ್ಶಿ ಗೆಳೆಯನ ಮದುವೆಗೆಂದು ಹೊರಟು ಹೋಗಿದ್ದ. ಬಿಲ್ ಕಲೆಕ್ಟರ್ ಅನ್ನುವ ಮನುಷ್ಯನನ್ನು ಬಿಟ್ಟರೇ ನರ ಪಿಳ್ಳೆಯೂ ಇರಲಿಲ್ಲ. ಸಮಯ ನಡು ಮಧ್ಯಾಹ್ನದ ಹನ್ನೆರಡು ಹೊಡೆದಿತ್ತು. ಆಗಲೇ ನಾಲ್ಕು ಹಳ್ಳಿಯಿಂದ ಜನ ಬಂದು ನೆರೆದಿದ್ದರು. ಹೆಂಗಸರು ಹಸುಗೂಸುಗಳನ್ನು ಬಗಲಲ್ಲಿ ನೇತಾಡಿಸಿಕೊಂಡೇ ಬಂದಿದ್ದರು. ನಾಲ್ಕು ದಿನ ಮೊದಲೇ ಗ್ರಾಮ ಪಂಚಾಯತ್‌ಗಳ ನಮ್ಮ ಭೇಟಿಯನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಲಾಗಿತ್ತು. ಮತ್ತು ಅವರು ಎಲ್ಲ ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೂ ನಿರ್ದೇಶನ ಮಾಡಿದ್ದರು. ಅರ್ಜಿಗಳು ಕಾರ್ಯದರ್ಶಿಯ ಅಲಮೇರಾದಲ್ಲಿ ಇದ್ದವು. ತಾಲ್ಲೂಕು ಅಧಿಕಾರಿಗೆ ಫೋನಾಯಿಸಿದೆವು. ರಜ... ಪಡೆಯದೆ ವಾರಗಟ್ಟಲೇ ನಾಪತ್ತೆಯಾಗುವ... ಕಾರ್ಯದರ್ಶಿಗಳ ಪಟ್ಟಿಯೇ ಅವರಲ್ಲಿತ್ತು. 'ನಮಗದೆಲ್ಲ ಗೊತ್ತಿಲ್ಲ. ಬಿಳಿ ಹಾಳೆ ಮ್ಯಾಲ ಅರ್ಜಿ... ಕೊಡ್ತೀವಿ. ರೀಸೀವ್ಡ್ ಅಂತ ಕೊಡ್ರಿ. ಕಾರ್ಯಕರ್ತ... ಮ್ಯಾಲ ಕ್ರಮ ತಗೋರಿ, ನಾವು ದೂರು ಕೊಡ್ತೀವಿ... ಒಂದ ವಾರದಾಗ ಕೆಲಸ ಕೊಡಲಿಲ್ಲ ಅಂದ್ರ ಮಾತ... ಬಿರಸಿಗಿ ಬೀಳತದ. ಏನ ಅಂತೀರಿ'? ನಮ್ಮ... ಸಂಗಾತಿಗಳ ಮಾತಿಗೆ ಎದುರು ಅನ್ನುವುದು... ಅಧಿಕಾರಿಗೆ ಸಾಧ್ಯವಾಗಲಿಲ್ಲ.

ಎಲ್ಲರಿಗೂ ಬೇಕು ಬಿಳಿ ಕಾಗದ

ಬಿಲ್ ಕಲೆಕ್ಟರ್ ಅಂತೂ ಇಂತೂ ಪರದಾಡಿ... ಅದೆಲ್ಲಿಂದಲೋ ಬಿಳಿ ಕಾಗದಗಳನ್ನು ಹುಡುಕಾಡಿ... ತಂದನು. ಇಪ್ಪತ್ತು ಜನರ ಹೆಸರುಗಳನ್ನು ಒಂದೊಂದು... ಹಾಳೆಯಲ್ಲಿ ತುಂಬಲು ಹೇಳಿದೆವು. ಎಲ್ಲವೂ ಮುಗಿಸಿ... ಹೊರ ಬಂದೆವು. ಅಷ್ಟರಲ್ಲಿ ಒಳಗೆ ಗದ್ದಲ... ಶುರುವಾಯ್ತು. ಯಾಕೆಂದು ನೋಡಿದರೆ, ಅಲ್ಲಿರುವ... ಪ್ರತಿ ಕಾರ್ಮಿಕರು ಬಿಳಿ ಹಾಳೆ ತಮಗೂ ಬೇಕು... ಅದರಲ್ಲಿ ಬರೆದರೆ ತಮಗೆ ಕೆಲಸ ಸಿಗುವುದು ಎಂದು... ತುಂಡು ಬಿಳಿ ಕಾಗದಕ್ಕಾಗಿ ಮುಗಿ ಬಿದ್ದಿದ್ದರು. ಅದು... ಮುದ್ರಿಸಿದ ಫಾರಂ ಸಹ ಆಗಿರಲಿಲ್ಲ. ಯಾಕೋ... ಹೊಟ್ಟೆಯಲ್ಲಿ ತಳಮಳವಾಯ್ತು. ಆಳುವ ವರ್ಗ... ಈ ನಿಜದ ದುಡಿಮೆಗಾರರನ್ನು ಯಾವ ಹಂತಕ್ಕೆ ತಳ್ಳಿದೆ... ನೋಡಿ. ಎಲ್ಲ ಹಣವನ್ನು ತಮ್ಮ ತಮ್ಮ ಹೈಕಿಯತ್ತಿಗೆ... ತಕ್ಕಂತೆ ಕೊಳ್ಳೆ ಹೊಡೆದವರು ಕಣ್ಮರೆಯಲ್ಲಿದ್ದರು. ಜನತೆಗಾಗಿ ಬಂದ ಹಣ, ಊರ ಅಭಿವೃದ್ಧಿಗಾಗಿ... ಬಂದ ಹಣ ಹಾಡು ಹಗಲೇ ಭೂಮಾಲಕ... ಪ್ರತಿನಿಧಿಗಳು, ಆಳುವ ವರ್ಗದ ಚೇಲಾಗಳು ... ಹೊಡೆದಿರುವರು. ಈ ಬಡಪಾಯಿ ಯತಾರ್ಥ... ಶ್ರಮಜೀವಿಗಳು ಹೀಗೆ ತುಂಡು ಕಾಗದಕ್ಕಾಗಿ... ಪರದಾಡುತ್ತಿರುವರು. ಗಾಳಿಯಲ್ಲಿ ಕಾಗದದ ಹಾಳೆ... ಹಾರಾಡುತ್ತಿತ್ತು. 'ಎಲ್ರಿಗೂ ಕೊಡ್ರಿ. ಮತ್ತ ಎಲ್ಲರ... ಹೆಸರ್ನೂ ಬರೀರಿ' ಅಂದು ಗಾಡಿ ಹತ್ತಿದೆವು.

ಕೆಲಸ ಕುಡು ಅಂತ ಬಂದ್ರ ನೂಕಿ ಹಾಕ್ಯಾನ.

ಮರುದಿನ ಕೌಠಾ ಗ್ರಾಮ ಪಂಚಾಯತ್‌ಗೆ... ಹೊರಟೆವು. ಎಲ್ಲಿಯೋ ಹೋಗಿದ್ದ ಗ್ರಾಮ... ಪಂಚಾಯತ್ ಕಾರ್ಯದರ್ಶಿ ಧಾವಿಸುತ ಬಂದನು. ಹೆಣ್ಣು ಮಕ್ಕಳು ಆಗಲೇ ಕಚೇರಿ ಹೊಕ್ಕಿದ್ದರು. ಅವರು... ಹತ್ತಿರ ಒಂದು ದೊಡ್ಡ ದೂರಿನ ಪಟ್ಟಿಯೇ ಇತ್ತು. 'ಇವ್ರ ಹೆಣಾ ಎತ್ಲಿ. ಹ್ವಾದ ವರ್ಷ ಕೆಲಸ ಕುಡು... ಅಂತ ಬಂದ್ರ ನೂಕಿ ಹಾಕ್ಯಾನ. ನಾಕ ದಿನ ಕೆಲಸ... ಕೊಟ್ಟಂಗ ಮಾಡಿ ಊರ ನಾಲಿ ಗೊಜ್ಜ ನಮ್ಮ... ಕೈಲಿಂದ ಬಳಸ್ಯಾರ. ದಂದ್ಯಾ ಮಾಡಿದ ಕೂಲಿ ಹಿನ್ನಾ... ಕೊಟ್ಟಿಲ್ಲ. ಮಸಿನ್‌ಲಿಂದ ಗೋಕಟ್ಟಾ ಮಾಡಿ ನಮ್ಮ... ಹೆಂಗಸೂರ ಕೈಯಾಗ ನೂರು ಪನ್ನಾಸ್ ಕೊಟ್ಟು... ತಲಿ ಬಡದಾರ. ಇವು ಅವಾ ಅಲಾ ನಮ್ಮ... ಹೆಂಗಸೂರು ಬಾಯಾಗ ಮಣ್ಣ ಹಾಕ್ಯಾ... ಕುಂತಾವ. ಯಾಕ ಸುಮ್ಮ ಕುಂತಿರಿ ಹೇಳ್ರೀ. ನಮ್ಮ...

ಪುಟ 15 ಕ್ಕೆ



ರಾಷ್ಟ್ರೀಯ ನೈಸರ್ಗಿಕ ವಿಕೋಪವೆಂದು ಸಾರಿ ತುರ್ತು ಪರಿಹಾರಕ್ಕೆ ಧಾವಿಸಬೇಕಾದಂತಹ ಭೀಕರ ಚಂಡಮಾರುತದ ದಾಳಿಗೆ ಪಶ್ಚಿಮ ಬಂಗಾಳ ರಾಜ್ಯದ ಹಲವು ಜಿಲ್ಲೆಗಳು ಗುರಿಯಾಗಿವೆ.

ಪಶ್ಚಿಮ ಬಂಗಾಳದಲ್ಲಿ ಸುಂಟರಗಾಳಿ ಮತ್ತು ಭಾರಿ ಮಳೆಯ ತಾಂಡವ

...ೇ 25 ಹಾಗೂ 26 ರಂದು ಸುಂಟರಗಾಳಿ ...ಯೆಲಾ' ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ, ...ತ್ತರ 24 ಪರಗಣ, ಕೊಲ್ಕತ ಮತ್ತು ಹೌರಾ ...ಲ್ಲೆಗಳಲ್ಲಿ ಭಾರೀ ಹಾನಿಗಳನ್ನುಂಟು ಮಾಡಿದೆ. ಅದು ...ಗ್ಲಿ, ಬರ್ದ್ವಾನ್ ಮತ್ತು ಬಾಂಕುರ ಜಿಲ್ಲೆಗಳನ್ನೂ ...ದೆ. ಸುಮಾರು 22 ಲಕ್ಷ ಮಂದಿ ಇದರಿಂದ ...ಂದರೆಗೊಳಗಾಗಿದ್ದಾರೆ. ನೂರಕ್ಕೂ ಹೆಚ್ಚು ... ಈ ಪ್ರಕೃತಿ ವಿಕೋಪಕ್ಕೆ ...ಿಯಾಗಿದ್ದಾರೆ.

ಎಡರಂಗ ಸರಕಾರ ಈಗಾಗಲೇ ...ುದ್ಧೋಪಾದಿಯಲ್ಲಿ ಪರಿಹಾರ ...ುಗಳನ್ನು ಆರಂಭಿಸಿದೆ. ತತ್‌ಕ್ಷಣ 1 ...ೋಟಿ 80 ಲಕ್ಷ ರೂ.ಗಳನ್ನು ಪರಿಹಾರ ...ರ್ಯಗಳಿಗಾಗಿ ಒದಗಿಸಿದೆ. ಮುಖ್ಯ ...ಂತ್ರಿ ಬುದ್ಧದೇಬ್ ಭಟ್ಟಾಚಾರ್ಜಿಯವರು ...ಿ ಹೆಚ್ಚು ನಷ್ಟ ಅನುಭವಿಸಿದ ದಕ್ಷಿಣ ... ಪರಗಣ ಜಿಲ್ಲೆಯ ಸಂತ್ರಸ್ತ ಭಾಗಗಳಲ್ಲಿ ...ಲವೆಡೆ ಭೇಟಿ ನೀಡಿ ಜನಗಳೊಂದಿಗೆ ...ಾತಾಡಿ, ಪರಿಹಾರ, ಪುನರ್ವಸತಿ ಪ್ರಯತ್ನಗಳನ್ನು ...ರಿಶೀಲಿಸಿದರು. ಜಿಲ್ಲೆಯ ತೃಣಮೂಲ ಸಭಾಧಿಪತಿ ...ುಖ್ಯ ಮಂತ್ರಿಗಳ ಸಭೆಯನ್ನು ಬಹಿಷ್ಕರಿಸಿದರು. ...ದು ಅನಿರೀಕ್ಷಿತವೇನೂ ಅಗಿರಲಿಲ್ಲ.

ಮುಖ್ಯ ಮಂತ್ರಿಗಳು ಸಂತ್ರಸ್ತರಿಗೆ ಕಳಕೊಂಡ ಮನೆಗಳ ಬಗ್ಗೆ ಚಿಂತಿಸಬೇಡಿ, ಕೆಲವೇ ದಿನಗಳಲ್ಲಿ ಮತ್ತೆ ಮನೆ ಕಟ್ಟಿಕೊಳ್ಳಲು ಹಣ ಒದಗಿಸಲಾಗುವುದು ಎಂದರು. ಶಿಬಿರಗಳಲ್ಲಿ ಇರುವವರು ತಮ್ಮ ಮಕ್ಕಳ ಮೇಲೆ ನಿಗಾ ಇಟ್ಟಿರಲಿ, ಎಲ್ಲರಿಗೂ ಸರಿಯಾದ ಆಹಾರ ಸಿಗುವಂತೆ ನೋಡಿಕೊಳ್ಳಿ, ಉಳಿದುದನ್ನು ಸರಕಾರ ನೋಡಿಕೊಳ್ಳುತ್ತದೆ ಎಂದು ಸಲಹೆ



ನೀಡಿದರು. ರಾಜ್ಯ ಹಣಕಾಸು ಮಂತ್ರಿ ಅಶೀಂ ದಾಸ್‌ಗುಪ್ತರವರು ತಾಮಲೂಕ್‌ನಲ್ಲಿ ಸಂಚರಿಸಿ, ಸ್ಥಳದಲ್ಲಿಯೆ ಪರಿಹಾರವನ್ನು ಮಂಜೂರು ಮಾಡಿದ್ದರು.

ವಿಕೋಪಕ್ಕೆ ಒಳಗಾದ ಜಿಲ್ಲೆಗಳಲ್ಲಿ ಸುಮಾರು 250 ಕ್ಕೂ ಹೆಚ್ಚು ಪರಿಹಾರ ಶಿಬಿರಗಳನ್ನು ಆರಂಭಿಸಲಾಗಿದೆ. ಸುಮಾರು ಐವತ್ತು ಲಕ್ಷ ಮಂದಿ ಇಲ್ಲಿ ಆಶ್ರಯ ಪಡೆದಿದ್ದಾರೆ.

ಉತ್ತರ ಬಂಗಾಳದ ಡಾರ್ಜಿಲಿಂಗ್, ಉತ್ತರ ದಿನಾಜ್ ಪುರ್, ಮಲ್ದಾ ಮತ್ತು ಕೂಚ್ ಬೆಹಾರ್ ಜಿಲ್ಲೆಗಳಲ್ಲಿಯೂ ಭಾರಿ ಮಳೆ ಮತ್ತು ಗಾಳಿ ಸುಮಾರು ಒಂದು ಲಕ್ಷ ಮಂದಿಯನ್ನು ತಟ್ಟಿದೆ. ಇಲ್ಲಿಯ ಎಲ್ಲ ನದಿಗಳು ತುಂಬಿ ಹರಿಯುತ್ತಿವೆ. ಹನ್ನೊಂದು ಮಂದಿ ಕೊಚ್ಚಿ ಹೋಗಿದ್ದಾರೆ. ಸುಮಾರು ಹನ್ನೆರಡು ಮಂದಿ ಕಾಣೆಯಾಗಿದ್ದಾರೆ. ಹಲವರು ಮನೆ ಕಳಕೊಂಡಿದ್ದಾರೆ.

ಜಿಲ್ಲಾ ಆಡಳಿತ ಈ ವಿಕೋಪದ ನಡುವೆಯೇ ಸಭೆ ಸೇರಿ ಒಂದು ಅನಾಹುತ ನಿರ್ವಹಣಾ ಯೋಜನೆಯನ್ನು ರೂಪಿಸಿದೆ. ನಗರಾಭಿವೃದ್ಧಿ ಮಂತ್ರಿ ಅಶೋಕ ಭಟ್ಟಾಚಾರ್ಜಿ ಮತ್ತು ಸಿಲಿಗುರಿ ಮೇಯರ್ ನೂರುಲ್ ಇಸ್ಲಾಂ ಹಾಜರಿದ್ದರು. ಜಿಲ್ಲಾ ಆಡಳಿತ ಮೂರು ಲಕ್ಷ ಧೋತಿ, ಸೀರೆ, ಲುಂಗಿಗಳನ್ನು ಹಾಗೂ ಟಾರ್ಪಾಲಿನ್, ಪ್ಲಾಸ್ಟಿಕ್ ಶೀಟುಗಳು ಹಾಗೂ ಕಂಬಗಳನ್ನು ಸಿದ್ಧವಾಗಿಡಲಾಗಿದೆ ಎಂದಿದೆ.

ಪರಿಹಾರ ನಿಧಿ ಸಂಗ್ರಹಕ್ಕೆ ಎಡರಂಗ ಕರೆ

ಮೇ 28ರಿಂದ ಜೂನ್ 3 ರವರೆಗೆ ರಾಜ್ಯದಲ್ಲಿ ಬಿರುಗಾಳಿ ಸಂತ್ರಸ್ತರಿಗೆ ಪರಿಹಾರ ಹಾಗೂ ಪುನರ್ವಸತಿಗಾಗಿ ಹಣ ಹಾಗೂ ಪರಿಹಾರ ಸಾಮಗ್ರಿಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಬೇಕು ಎಂದು ಎಡರಂಗ ಕರೆ ನೀಡಿದೆ. ತಕ್ಷಣವೇ ಎಡರಂಗದ ಎಲ್ಲಾ ಘಟಕಗಳು ಮತ್ತು ಅಂಗಪಕ್ಷಗಳು ಸಂತ್ರಸ್ತ ಜನರ ನಡುವೆ ಹೋಗಿ ಅವರ ಬದುಕನ್ನು ಪುನರ್‌ರಚಿಸುವ ಪ್ರಕ್ರಿಯೆಯಲ್ಲಿ ನೆರವಾಗಬೇಕು ಎಂದು ಎಡರಂಗ ಕರೆ ನೀಡಿದೆ.

ಎಡರಂಗದ ಅಧ್ಯಕ್ಷ ಬಿಮನ್ ಬಸು ಕೊಲ್ಕತ ಮತ್ತು ಸುತ್ತಲಿನ ನೆರೆಪೀಡಿತ ಪ್ರದೇಶಗಳಿಗೆ ಭೇಟಿ



ನೀಡಿದರು.

ಸಿಐಟಿಯು ಕೇಂದ್ರ ಕಾರ್ಯದರ್ಶಿ ಮಂಡಳಿ ಈ ಅನಾಹುತದ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುತ್ತಾ 'ಮುಖ್ಯ ಮಂತ್ರಿಗಳ ಪರಿಹಾರ ನಿಧಿ'ಗೆ 1 ಲಕ್ಷ ರೂ. ಕಳಿಸಿದೆ. ಸಿಐಟಿಯುನ ಎಲ್ಲಾ ರಾಜ್ಯ ಸಮಿತಿಗಳು ಸಂತ್ರಸ್ತರಿಗೆ ಪರಿಹಾರ ಸಂಪನ್ಮೂಲಗಳನ್ನು ಸಂಗ್ರಹಿಸಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿ. ಪಶ್ಚಿಮ ಬಂಗಾಳ ಸರಕಾರ, ರೈಟರ್ಸ್ ಬಿಲ್ಡಿಂಗ್, ಬಿ.ಬಿ.ಡಿ.ಬಾಗ್, ಕೊಲ್ಕತಾ- 700001 ಇಲ್ಲಿಗೆ ಕಳಿಸಬೇಕು ಎಂದು ಕರೆ ನೀಡಿದೆ. ○

...ಂಡ ಸರ್ಕಾರದ ವಾರ್ಷಿಕ ಸಂಭ್ರಮ

...ಟ 3 ರಿಂದ

...ರೋಪ ಮಾಡಿದರೂ ನಿರ್ಲಜ್ಜವಾಗಿ ...ಧಿಕಾರದಲ್ಲೂ ಮುಂದುವರಿಯುತ್ತಾ, ಗಣಿ ...ೂಟಿಯನ್ನು ಮುಂದುವರಿಸುತ್ತಿರುವ ಸರ್ಕಾರಕ್ಕೆ ...ತಿಕತೆಯ ಬಗೆಗೆ ಉಸಿರೆತ್ತಲಾದರೂ ಹಕ್ಕಿದೆಯೇ?

ವಿಧಾನಸೌಧದ ಒಳ ಕೋಣೆಗಳಲ್ಲಿ ಮುಖ್ಯ ...ಂತ್ರಿಗಳ ಪುತ್ರವರ್ಯ ನಡೆಸಿದ ವರ್ಗಾವಣೆ ...ಂಧೆಯ ಕಮಟುವಾಸನೆ ರಾಜ್ಯಕ್ಕೆಲ್ಲ ಹರಡಿ ದೂರ ...ೂರದ ನಗರ, ಹಳ್ಳಿಗಳ ಜನ ಮೂಗು ...ುಚ್ಚಿಕೊಳ್ಳುವಂತಹ ಪರಿಸ್ಥಿತಿಯನ್ನು ಸುಲಭವಾಗಿ ...ರೆಯಲಾದೀತೆ?

ಎಲ್ಲಾ ಸಮಸ್ಯೆಗಳಿಗೆ ಬಿಜೆಪಿಯೇ ಪರಿಹಾರ ...ಂಬ ಘೋಷಣೆಯಡಿ ಅಧಿಕಾರಕ್ಕೇರಿದ ಬಿಜೆಪಿ ...ರ್ಕಾರದ ದರ್ಬಾರಿನಲ್ಲಿ ಈಗಾಗಲೇ ...ರ್ಣವಾಗಿರುವ ರಸ್ತೆಗಳಿಗೂ ಜನ ಸುಡು ...ವ 'ಸುಂಕ' ತೆರಬೇಕಾಗಿ ಬಂದಿದೆ ಎಂದರೆ ... ಸರ್ಕಾರ ಯಾರ ಪರ ಇದೆ?

ಹಿಂದೆ ಕರಾವಳಿಯಲ್ಲಿ ಈಗ ರಾಜ್ಯದ ವಿವಿಧ ...ಾಗಗಳಲ್ಲಿ ಜನರು ಚಿಕುನ್‌ಗುನ್ಯಾ, ಡೆಂಗ್ಯೂ ಇತ್ಯಾದಿ ಕಾಯಿಲೆಗಳಿಂದ ನರಳುತ್ತಿದ್ದರೆ, ಈ ಸರ್ಕಾರದ ಚಿಂತೆ ಏನು?

ಬಹುಶ: ದೇಶದಲ್ಲೆಲ್ಲೂ ಕಂಡು ಕೇಳರಿಯದ 'ಆಪರೇಶನ್' ಕಮಲವೇ ಬಿಜೆಪಿ ಸರ್ಕಾರದ ಒಂದು ವರ್ಷದ ನಿಜವಾದ ಸಾಧನೆ. 10 ಜನ ಶಾಸಕರು ಈಗಾಗಲೇ ಅನೈತಿಕ ಆಪರೇಷನ್ ಕಮಲಕ್ಕೆ ಬಲಿಯಾಗಿದ್ದಾರೆ. ಹಲವಾರು ಚುನಾಯಿತ ಸ್ಥಳೀಯ ಸಂಸ್ಥೆಗಳು ಬಲಿಯಾಗಿವೆ.

ಮೈಸೂರು ಮೇಯರ್ ಚುನಾವಣೆಯ ಸಂದರ್ಭದಲ್ಲಿ 'ಆಪರೇಷನ್ ಕಮಲ'ಕ್ಕೆ ಗುರಿಯಾಗಿಯೂ ತಮಗೆ ಮತ ನೀಡದ ಮಹಾನಗರ ಪಾಲಿಕೆ ಸದಸ್ಯರೊಬ್ಬರಿಗೆ 'ಕೊಟ್ಟ ದುಡ್ಡನ್ನು ವಾಪಸ್ ಬಿಸಾಕು' ಅಂತ ಬಿಜೆಪಿ ಮುಖಂಡರು ಅಬ್ಬರಿಸಿದಾಗಲೇ ಬಿಜೆಪಿಯ ಹಾಗೂ ರಾಜ್ಯ ಸರ್ಕಾರದ ಇದ್ದಬದ್ದ ಎಲ್ಲಾ ನೈತಿಕತೆಯು ಕಾವೇರಿ ನದಿಯಲ್ಲಿ ಹರಿದು ಸಮುದ್ರದ ಪಾಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಗಣಿಸಿ ಜನತೆ ಅಳೆದು ತೂಗಿ ನೋಡಿ ತೀರ್ಪು ಕೊಡುವ ಕೆಲಸ ಬಾಕಿಯಿದೆ. ಆ ದಿನ ಬಂದೇ ಬರುತ್ತದೆ. ○

ಕೇಂದ್ರ ಸಂಪುಟದಲ್ಲಿ ಕರ್ನಾಟಕದ ಸಚಿವರು....

ಪುಟ 3 ರಿಂದ


ಎಸ್.ಎಂ.ಕೃಷ್ಣರವರನ್ನು ಧಲಿತರು, ಹಿಂದುಳಿದ ಜಾತಿಗಳಲ್ಲಿ ಕರಾವಳಿ ಮತ್ತು ಉತ್ತರ ಕರ್ನಾಟಕದಲ್ಲಿ ತನ್ನ ನೆಲೆಯನ್ನು ಬಲಪಡಿಸಿಕೊಳ್ಳಲು ವೀರಪ್ಪ ಮೊಯಿಲಿ, ಮಲ್ಲಿಕಾರ್ಜುನ ಖರ್ಗೆಯವರನ್ನು ಆರಿಸಿದ್ದಾರೆ.

ಆದರೆ ಎಲ್ಲಾ ಲೆಕ್ಕಾಚಾರಗಳು ಕೂಡ 10 ವರ್ಷಗಳ ದೀರ್ಘಕಾಲದ ಜನವಿರೋಧಿ ನೀತಿಗಳು, ಬೆಲೆ ಏರಿಕೆ, ನಿರುದ್ಯೋಗಗಳ ಫಲವಾಗಿ ಮುಂದೆ ಕಾಂಗ್ರೆಸ್ ಎದುರಿಸಬೇಕಾಗಿ ಬರುವ ಕಾಂಗ್ರೆಸ್ ವಿರೋಧಿ ಆಡಳಿತ ವಿರೋಧಿ (Anti meamtency) ಅಲೆಯ ವಿರುದ್ಧ ತಲೆಕೆಳಗಾಗುತ್ತವೆ. ಅಂತಿಮವಾಗಿ ಒಂದು ಪಕ್ಷದ ಸೋಲು-ಗೆಲುವು ಆ ಪಕ್ಷದ ನೀತಿ, ಧೋರಣೆಗಳ ಒಟ್ಟು ಮೊತ್ತದ ಮತ್ತು ಆ ನೀತಿಗಳಿಗೆ ಜನರನ್ನು ಒಲಿಸಿಕೊಳ್ಳುವ ಸಂಘಟನಾ ಶಕ್ತಿಯ ಫಲ. 2009ರ ಚುನಾವಣೆಗಳಲ್ಲಿ ಅಡ್ವಾಣಿ-ಮೋದಿ-ವರುಣ್‌ಗಾಂಧಿಯವರ ಹಿಂಸಾತ್ಮಕ, ಭಯೋತ್ಪಾದನೆಗೆ ಪ್ರಚೋದಕವಾದ ಕೋಮುವಾದಿ ನೀತಿಗಳ ವಿರುದ್ಧ ಕಾಂಗ್ರೆಸ್ ಪಡೆದ ಜಯಕ್ಕೂ ನೀತಿ ಧೋರಣೆಗಳೇ ಕಾರಣ. 2009ರ ಚುನಾವಣೆಗಳಲ್ಲಿ ತಮ್ಮ ಜೀವನದ ಸಂಕಟಗಳನ್ನು ಬೆಲೆ ಏರಿಕೆ-ನಿರುದ್ಯೋಗಗಳನ್ನು ಇತರ ಸಮಸ್ಯೆಗಳನ್ನು ಬದಿಗಿಟ್ಟು ಸ್ಥಿರ ಜಾತ್ಯಾತೀತ ಸರ್ಕಾರವನ್ನು ಆಯ್ಕೆ ಮಾಡಿಕೊಂಡ ಜನರು ಈ ಕಾರಣಕ್ಕಾಗಿ ತಮ್ಮ ಜೀವನದ ಸಮಸ್ಯೆಗಳನ್ನು ಎಂದೆಂದಿಗೂ ಮರೆತು ಕಾಂಗ್ರೆಸ್ ಅನ್ನು ಬೆಂಬಲಿಸುತ್ತದೆ ಎಂದು ಭಾವಿಸುವುದು ಮೂರ್ಖತನ.

ಕಾಂಗ್ರೆಸ್ ತನ್ನ ಜನವಿರೋಧಿ ಆರ್ಥಿಕ ನೀತಿಗಳನ್ನು ಜಾಗತೀಕರಣ-ಖಾಸಗೀಕರಣ ಪರ ನೀತಿಗಳನ್ನು, ಭಾರತದ ದುಡಿಯುವ ಜನರನ್ನು ಅಮೇರಿಕನ್ ಸಾಮ್ರಾಜ್ಯಶಾಹಿ ಯ ಶೋಷಣೆಗೆ ಒಡ್ಡುವುದನ್ನು ಕೈ ಬಿಡುವ ಹೊರತು 1991 ರಿಂದ ಈ ನೀತಿಗಳನ್ನು ಆರಂಭಿಸಿದಂದಿನಿಂದ ಕುಗ್ಗಿದ ಕಾಂಗ್ರೆಸ್‌ನ ನೆಲೆ ಕೇವಲ ಕೃಷ್ಣ, ಮೊಯಿಲಿ, ಖರ್ಗೆ, ಮುನಿಯಪ್ಪಗಳ ಮುಖಾರವಿಂದದ ಪ್ರಭಾವಳಿಗೆ ಒಳಗಾಗಿ ವಿಸ್ತಾರವಾಗುವುದಿಲ್ಲ. ○

ಗಾಂಧಿ-ನೆಹರೂ ಪರಂಪರೆ

ಇಎಂಎಸ್ ನಂಬೂದಿರಿಪಾಡ್, 1977ರಿಂದ 1992ರವರೆಗೆ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಯಾಗಿದ್ದ ಪ್ರಖ್ಯಾತ ಕ್ರಾಂತಿಕಾರಿ, ರಾಜಕೀಯ ಮುತ್ಸದ್ದಿ ಹಾಗೂ ಚಿಂತಕರು, ಇಂದು ಬದುಕಿದ್ದರೆ ಈ ಜೂನ್ 14 ಕ್ಕೆ ನೂರು ವರ್ಷ ಪೂರೈಸುತ್ತಿದ್ದರು. ಇಎಂಎಸ್ ಒಬ್ಬ ಅತ್ಯಂತ ಯಶಸ್ವಿ ಲೇಖಕರೂ, ಸಂವಹನಕಾರರೂ ಆಗಿದ್ದರು. ಅವರು ನಮ್ಮ ಸಮಕಾಲೀನ ಇತಿಹಾಸದ ಮಾರ್ಕ್ಸ್‌ವಾದೀ ವಿಶ್ಲೇಷಣೆಗೆ ಹೆಸರಾದವರು. ಅವರ ಜನ್ಮ ಶತಾಬ್ದಿಯ ಸಂದರ್ಭದಲ್ಲಿ, ಇಂತಹ ಒಂದು ಲೇಖನವನ್ನು ಇಲ್ಲಿ ನೆನಪಿಸಿಕೊಳ್ಳುತ್ತಿದ್ದೇವೆ. ಇದು 1988ರಲ್ಲಿ ಪ್ರಕಟವಾದ ಅವರ ಕೃತಿ Nehru: Idealogy Practice(ನೆಹರೂ: ತತ್ವ ಮತ್ತು ಆಚರಣೆ)ಯ ಕೊನೆಯ ಅಧ್ಯಾಯವಾಗಿದ್ದು ಸ್ವಾತಂತ್ರ್ಯ ಆಂದೋಲನದ ಹಾಗೂ ಅದಕ್ಕೆ ನೇತೃತ್ವ ನೀಡಿದ ಕಾಂಗ್ರೆಸಿನ ಇಬ್ಬರು ಅತ್ಯಂತ ಪ್ರಮುಖ ನೇತಾರರಾದ ಗಾಂಧೀಜಿ ಮತ್ತು ನೆಹರೂರವರ ಪರಂಪರೆಯನ್ನು ಕುರಿತು ಅವರು ಮಾಡಿದ್ದ ಅಧ್ಯಯನದ ಸಾರಾಂಶವನ್ನು ಕೊಡುತ್ತದೆ.



ಜವಾಹರಲಾಲ ನೆಹರೂರವರ ಜನ್ಮ ಶತಾಬ್ದಿಯ ದೇಶವ್ಯಾಪಿ ಆಚರಣೆಗಳಿಗೆ ಸಕ್ರಿಯ ತಯಾರಿ ನಡೆಯುತ್ತಿರುವ ಸಂದರ್ಭದಲ್ಲಿ ನಾನು ಈ ಸಂಪುಟದ ಕೊನೆಗೆ ಬರುತ್ತಿದ್ದೇನೆ. ಜವಾಹರಲಾಲ ನೆಹರೂರವರು ಬಿಟ್ಟು ಹೋಗಿರುವ, ಅವರ ಅನುಯಾಯಿಗಳು ಮುಂದುವರೆಸುತ್ತಿರುವ 'ಪರಂಪರೆ'ಯ ಬಗ್ಗೆ ಬಹಳಷ್ಟು ಮಾತುಗಳು ಕೇಳಬರುವುದು ಸಹಜವೇ. ಅಲ್ಲದೆ, ನೆಹರೂ ಮತ್ತು ಮಹಾತ್ಮ ಗಾಂಧಿಯವರ ನಡುವೆ ತತ್ವಸಿದ್ಧಾಂತ ಮತ್ತು ಸ್ವಭಾವದಲ್ಲಿ ಭಿನ್ನತೆಗಳಿದ್ದರೂ, ನೆಹರೂರವರು ಮಹಾತ್ಮ ಗಾಂಧಿಯವರೊಡನೆ ನಿಕಟ ಸಹಯೋಗ ಹೊಂದಿದ್ದು ಈ ಇಬ್ಬರು ವ್ಯಕ್ತಿಗಳು ಹಲವು ರೀತಿಗಳಲ್ಲಿ ಪರಸ್ಪರ ಪೂರಕವಾಗಿದ್ದರು, ಒಬ್ಬರನ್ನೊಬ್ಬರು ಬೆಂಬಲಿಸಿದ್ದರು ಎಂಬ ಕಾರಣದಿಂದಾಗಿ ಈ ಪರಂಪರೆಯ ಮಾತು ನೆಹರೂ ಪರಂಪರೆಯ ಬಗ್ಗೆ ಮಾತ್ರವಲ್ಲ, ಗಾಂಧಿ-ನೆಹರೂ ಪರಂಪರೆಯ ಬಗ್ಗೆ ತಿರುಗುತ್ತದೆ.

57 ವರ್ಷಗಳ ಹಿಂದೆ(1931ರಲ್ಲಿ) ನಾನು ಮಲೆಯಾಳಂ ಭಾಷೆಯಲ್ಲಿ ಜವಾಹರಲಾಲ ನೆಹರೂರವರ ಸಂಕ್ಷಿಪ್ತ ಕಥನ ನೀಡುವ ಒಂದು ಸಣ್ಣ ಪುಸ್ತಕವನ್ನು ಬರೆದಿದ್ದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನನಗೆ ಆಗ ನೆಹರೂ ಬಗ್ಗೆ ಅಭಿಮಾನ ತುಂಬಿತ್ತು. ಮಹಾತ್ಮರು ಅವರನ್ನು ಕಾಂಗ್ರೆಸಿನ ಐತಿಹಾಸಿಕ ಲಾಹೋರ್ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಲು ಆರಿಸಿದ್ದರು. ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಅವರು ಸಂಘಟನೆಯ ಮುಖ್ಯಸ್ಥರಾಗಿದ್ದರು. ನನ್ನನ್ನು ಆಕರ್ಷಿಸಿದ ಸಂಗತಿಯೆಂದರೆ ಅವರು ಮಹಾತ್ಮರಂತೆ ಹಲವು ವಿಷಯಗಳಲ್ಲಿ ಸಂಪ್ರದಾಯವಾದಿಯಾಗಿರದೆ, ರಾಜಕೀಯದಲ್ಲಿ ಮಾತ್ರವಲ್ಲ, ಸಾಮಾಜಿಕ-ಸಾಂಸ್ಕೃತಿಕ ಮತ್ತು ಆರ್ಥಿಕ ವಿಷಯಗಳಲ್ಲೂ ತೀವ್ರಗಾಮಿಯಾಗಿದ್ದರು. ಒಬ್ಬ ವಿದ್ಯಾರ್ಥಿಯಾಗಿ ನಾನು ಉತ್ಸಾಹಭರಿತನಾಗಿದ್ದೆ, ನನಗೆ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ರಾಜಕಾರಣ, ಸಾಮಾಜಿಕ ಸುಧಾರಣೆ, ಸಾಂಸ್ಕೃತಿಕ ಮುನ್ನಡೆ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಅತೀವ ಆಸಕ್ತಿಯಿತ್ತು. ಮಹಾತ್ಮರ ಬಗ್ಗೆ ಗೌರವಭಾವವಿದ್ದರೂ ನೆಹರೂರವರ ಬಗ್ಗೆ ನಾನು ಪಕ್ಷಪಾತಿಯಾಗಿದ್ದೆ, ಅವರು ನನ್ನ ಕಣ್ಣಲ್ಲಿ 'ಭಾರತೀಯ ಯುವಜನರ ಆರಾಧ್ಯ'ರಾಗಿದ್ದರು.

ಎರಡು ವರ್ಷಗಳ ನಂತರ, 1933ರಲ್ಲಿ, ನಾಗರಿಕ ಅಸಹಕಾರ ಆಂದೋಲನವನ್ನು ಹಿಂತೆಗೆದುಕೊಂಡ ಸನ್ನಿವೇಶದಲ್ಲಿ ನೆಹರೂ ಭಾರತ ಎತ್ತ ಸಾಗಿದೆ ಎಂಬ ಶೀರ್ಷಿಕೆಯಲ್ಲಿ ಬರೆದ ಲೇಖನಮಾಲೆ ನನ್ನನ್ನು ಆಕರ್ಷಿಸಿತ್ತು. ಅದು ತೀವ್ರಗಾಮಿ ಕಾಂಗ್ರೆಸಿಗರಿಗೆ ಹಾಗೂ ಎಡಪಂಥೀಯ ಗುಂಪುಗಳಲ್ಲಿ ಸಂಘಟಿತರಾಗಿದ್ದ ತೀವ್ರಗಾಮಿಗಳಿಗೆ ಒಂದು ತೆರನ ಕಾರ್ಯಕ್ರಮವನ್ನು ಕೊಟ್ಟಿತು. ಅದರಲ್ಲಿ ಅಡಕವಾಗಿದ್ದ ವಿಚಾರಗಳು ಎರಡು ವರ್ಷಗಳ ನಂತರ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಗೆ ಆಧಾರವಾದವು. ಈ ಹೊಸ ಪಕ್ಷದ ಒಬ್ಬ ಸ್ಥಾಪಕ ಸದಸ್ಯನಾಗಿ ಮತ್ತು ಅಖಿಲ ಭಾರತ ಜೊತೆ ಕಾರ್ಯದರ್ಶಿಗಳಲ್ಲಿ ಒಬ್ಬನಾಗಿ ನಾನು, ಇತರ ಸಮಾಜವಾದಿ ಮುಖಂಡರಂತೆ(ಇವರಲ್ಲಿ ಮುಂದೆ ಹುಚ್ಚು ಕಮ್ಯುನಿಸ್ಟ್ ವಿರೋಧಿಗಳಾದ ಹಲವರೂ ಸೇರಿದ್ದಾರೆ) ಮೊದಲ ಬಾರಿಗೆ ಕಮ್ಯುನಿಸ್ಟರ ಸಂಪರ್ಕಕ್ಕೆ ಬಂದು ಅವರ ಜೊತೆ ಕೆಲಸ ಮಾಡಿದೆ. ಆ ಕೆಲಸದ ಅನುಭವ ಮತ್ತು ಸುಂದರಯ್ಯ, ಘಾಟೆ, ಭಾರದ್ವಾಜ್, ಅಜೊಯ್ ಘೋಷ್ ಮತ್ತಿತರ ಕಮ್ಯುನಿಸ್ಟ್ ಮುಖಂಡರೊಂದಿಗೆ ಚರ್ಚೆಗಳಿಂದಾಗಿ ನನಗೆ ಕಮ್ಯುನಿಸ್ಟರು ಕಾಂಗ್ರೆಸ್ ಸಮಾಜವಾದಿಗಳಿಗಿಂತ ಹೆಚ್ಚು ವಿಶ್ವಾಸಾರ್ಹವಾದ ಕಾರ್ಯಕ್ರಮಾತ್ಮಕ ಕಣ್ನೋಟ ಹೊಂದಿದ್ದಾರೆ ಎಂದು ಮನವರಿಕೆಯಾಯಿತು. ಆದ್ದರಿಂದ ನಾನು 1936ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದೆ ಮತ್ತು ಒಂದು ವರ್ಷದ ನಂತರ ಮೂರು ಇತರ ಸಂಗಾತಿಗಳೊಡಗೂಡಿ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದ ಘಟಕವನ್ನು ರಚಿಸಿದೆ.

ಆದರೆ, ಸ್ವಲ್ಪ ಸಮಯದವರೆಗೆ ಕಾಂಗ್ರೆಸ್ ಸಮಾಜವಾದಿ ಮತ್ತು ಕಮ್ಯುನಿಸ್ಟ್ ಪಕ್ಷಗಳಲ್ಲಿ ಭಿನ್ನತೆಯೇನೂ ಇರಲಿಲ್ಲ. ನಿಜ ಸಂಗತಿಯೆಂದರೆ ಈ ಎರಡು ಎಡಪಕ್ಷಗಳು ಮತ್ತು ಹಲವು ಎಡ ಒಲವಿನ ಕಾಂಗ್ರೆಸಿಗರು(ಇವರಲ್ಲಿ ಎಲ್ಲರಿಗಿಂತ ಪ್ರಮುಖರಾದವರು ನೆಹರೂ) ಸೇರಿಕೊಂಡು ಒಂದು ಸಾಮ್ರಾಜ್ಯಶಾಹಿ-ವಿರೋಧಿ ರಂಗ ಎಂಬುದರಲ್ಲಿ ಒಟ್ಟು ಸೇರಿದರು. ಆದರೆ ಅವರ ಸಹಕಾರ ಅಲ್ಪಕಾಲದ್ದು; ಅದು ಕಾಂಗ್ರೆಸಿನ 1939ರ(ತ್ರಿಪುರಿ) ಅಧಿವೇಶನದಲ್ಲಿ ದುರ್ಬಲಗೊಂಡಿತು. ಅಂದಿನಿಂದ ಕಮ್ಯುನಿಸ್ಟರು, ಸಮಾಜವಾದಿಗಳು ಮತ್ತು ಸುಭಾಷ್ ಬೋಸರ ಬೆಂಬಲಿಗರು ಪರಸ್ಪರ ಸೆಣಸಾಡಲಾರಂಭಿಸಿದರು. ನೆಹರೂ ತನ್ನಷ್ಟಕ್ಕೇ ಅವರೆಲ್ಲರಿಂದ ದೂರ ಉಳಿದು ಆಗ ಬಲಪಂಥೀಯ ಎಂದು ಪರಿಗಣಿಸಲ್ಪಟ್ಟಿದ್ದ ಕಾಂಗ್ರೆಸ್ ಮುಖಂಡತ್ವದೊಂದಿಗೆ ಶಾಮೀಲಾಗುತ್ತ ನಡೆದರು.

ನನ್ನ ಈ ವೈಯಕ್ತಿಕ ಅನುಭವ- ಒಬ್ಬ ಯುವ ರಾಜಕೀಯ ಉತ್ಸಾಹಿ ಮತ್ತು ಜವಾಹರಲಾಲ ನೆಹರೂರವರ ಅಭಿಮಾನಿ ಒಬ್ಬ ಕಮ್ಯುನಿಸ್ಟನಾಗಿ, ನೆಹರೂರವರ ರಾಜಕೀಯ ವಿರೋಧಿಯಾಗಿ ಪರಿವರ್ತನೆಗೊಂಡದ್ದು ಮತ್ತು ಅದಕ್ಕೆ ಸಮಾಂತರವಾಗಿ 'ಭಾರತೀಯ ಯುವಜನರ ಆರಾಧ್ಯ'ರಾಗಿದ್ದ ನೆಹರೂ ಕಾಂಗ್ರೆಸಿನ ಬಲಪಂಥೀಯ ಮುಖಂಡತ್ವದ ಒಬ್ಬ ವಿಶ್ವಾಸಾರ್ಹ ಮಿತ್ರನಾಗಿ ಪರಿವರ್ತನೆಗೊಂಡದ್ದು ನಾನು ನೆಹರೂರವರ ವ್ಯಕ್ತಿತ್ವದ ಈ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಅಧ್ಯಯನ ಕೈಗೊಳ್ಳುವಂತೆ ಮಾಡಿತು. ನೆಹರೂರವರ ತಂದೆ ಮೋತೀಲಾಲ್, ಅವರ ರಾಜಕೀಯ ಗುರು ಗಾಂಧಿ ಮತ್ತು ಸ್ವತಃ ಅವರು ಒಂದೇ ವರ್ಗದ, ಭಾರತೀಯ ಬೂರ್ಜ್ವಾ ವರ್ಗದ ಮೂರು ಮುಖಗಳು ಎಂಬ ತೀರ್ಮಾನಕ್ಕೆ ನಾನು ತಲುಪಿದ್ದೇನೆ.

ಈ ಮೊದಲು ನಾನು ಮಹಾತ್ಮ ಗಾಂಧಿಯವರ ವ್ಯಕ್ತಿತ್ವ ಮತ್ತು ಕೃತಿಯ ಇದೇ ರೀತಿಯ ಒಂದು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಅಧ್ಯಯನ ಕೈಗೊಂಡಿದ್ದೆ (Mahatma and the Ism- ಮಹಾತ್ಮರು ಮತ್ತು ಅವರ ವಾದ, 1958; ಪರಿಷ್ಕೃತ ಆವೃತ್ತಿ 1981). ಅದರಲ್ಲಿ ನಾನು ಮಹಾತ್ಮ ಗಾಂಧಿಯವರ ವಿಚಾರಗಳು ಮತ್ತು ಆಚರಣೆಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳ ಒಂದು ಸಮತೋಲನಾತ್ಮಕ ಪರಾಮರ್ಶೆಯ ಪ್ರಯತ್ನ ಮಾಡಿದ್ದೆ. ಆ ವಿಶ್ಲೇಷಣೆ ಗಾಂಧಿಯವರ ವ್ಯಕ್ತಿತ್ವದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳೆರಡೂ ಮನುಷ್ಯನ ವರ್ಗ ಸ್ವಭಾವ ಮತ್ತು ಆತನ ವಿಚಾರಗಳಿಂದಲೇ ಉದ್ಭವವಾದದ್ದು ಎಂದು ನಾನು ಅರಿಯುವಂತೆ ಮಾಡಿತು. ಗಾಂಧೀಜಿಯವರ ಬೋಧನೆಗಳ ಪ್ರಖ್ಯಾತ ಕೇಂದ್ರ ಅಂಶ(ಸಾಮ್ರಾಜ್ಯಶಾಹಿಯೊಂದಿಗೆ ಅಹಿಂಸಾತ್ಮಕ ಅಸಹಕಾರ) ಬೂರ್ಜ್ವಾ ವರ್ಗದ ಇಬ್ಬಗೆಯ ವರ್ಗಸ್ವಭಾವಕ್ಕೆ- ಜನಸಮೂಹಗಳನ್ನು ಅಣಿನೆರೆಸುವಲ್ಲಿ ಸಾಮ್ರಾಜ್ಯಶಾಹಿ-ವಿರೋಧ ಮತ್ತು ಜನಸಮೂಹಗಳನ್ನು ಸಮರಶೀಲ ಹೋರಾಟಗಳಿಂದ ದೂರವಿಡುವಲ್ಲಿ ಸಾಮ್ರಾಜ್ಯಶಾಹಿಯೊಂದಿಗೆ ಹೊಂದಾಣಿಕೆ- ಉದಾಹರಣೆಯಾಗಿತ್ತು.

ಆ ಪುಸ್ತಕದಲ್ಲಿ ಮತ್ತು ನಂತರ ಭಾರತದ ಸ್ವಾತಂತ್ರ್ಯ ಆಂದೋಲನದ ಇತಿಹಾಸ ಕುರಿತ ನನ್ನ ಪುಸ್ತಕದಲ್ಲಿ ಭಾರತೀಯ ಬೂರ್ಜ್ವಾಗಳು ಒಂದು ವರ್ಗವಾಗಿ ವಿಕಾಸಗೊಂಡುದನ್ನು ಗುರುತಿಸುತ್ತಾ, ಹೇಗೆ ಮಂದಗಾಮಿ ರಾಜಕೀಯದ ಒಂದು ಅಲ್ಪ ಅವಧಿಯ ನಂತರ ತಿಲಕರು ಮತ್ತು ಗಾಂಧಿಯವರಂತಹ ಮುಖಂಡರು ಜನಸಮೂಹಗಳನ್ನು ಸಮರಶೀಲ ಸಾಮ್ರಾಜ್ಯಶಾಹಿ-ವಿರೋಧಿ ಕಾರ್ಯಾಚರಣೆಗೆ ಇಳಿಸುವಲ್ಲಿ ಯಶಸ್ವಿಯಾದರು ಎಂಬುದನ್ನು ತೋರಿಸಿದ್ದೆ. ಬ್ರಿಟಿಶರು 'ಭಯೋತ್ಪಾದಕರು' ಎಂದು ಕರೆದ ಕ್ರಾಂತಿಕಾರಿಗಳ ನೇತೃತ್ವದ ತೀವ್ರಗಾಮಿ ಸಮರಶೀಲ ಆಂದೋಲನಗಳು, ಮೊದಲ ಮಹಾಯುದ್ಧದ ನಂತರದ ಆರಂಭಿಕ ವರ್ಷಗಳಲ್ಲಿ ರಚನೆಗೊಂಡ ಸಣ್ಣ-ಸಣ್ಣ ಕಮ್ಯುನಿಸ್ಟ್ ಗುಂಪುಗಳು, ಸಂಘಟಿತವಾದ, ಆದರೆ ಕಿರುಕುಳಗಳಿಗೊಳಗಾದ ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ವಿಶಾಲ ವೇದಿಕೆಯಾದ ಭಾರತದ ಕಾರ್ಮಿಕರ ಮತ್ತು ರೈತರ ಪಕ್ಷ(ವರ್ಕರ್ಸ್ ಅಂಡ್ ಪೆಸಂಟ್ಸ್ ಪಾರ್ಟಿ ಆಫ್ ಇಂಡಿಯಾ) ಇತ್ಯಾದಿ ಈ ಪ್ರಕ್ರಿಯೆಯ ಮುಂದಿನ ಬೆಳವಣಿಗೆಗಳು.

ಇದು ನೆಹರೂ ಮತ್ತು ಇತರ ತೀವ್ರಗಾಮಿ ಗುಂಪುಗಳು ಪಡೆದ ಪರಂಪರೆ. ಹೀಗೆ ಈ ಗುಂಪುಗಳು ಮತ್ತು ನೆಹರೂ ಪ್ರತಿನಿಧಿಸಿದ ಸಾಮ್ರಾಜ್ಯಶಾಹಿ-ವಿರೋಧ ನಮ್ಮೆಲ್ಲರಿಗೆ ಸೇರಿದ ಪರಂಪರೆ ಮತ್ತು ನಮ್ಮ ದೇಶದ ಒಂದು ಅಮೂಲ್ಯ ಆಸ್ತಿ. ಈ ಪ್ರತಿಯೊಂದು ಗುಂಪು ಮತ್ತು ಒಬ್ಬ ವ್ಯಕ್ತಿಯಾಗಿ ನೆಹರೂ ಸ್ವಾತಂತ್ರ್ಯ ಆಂದೋಲನದ ಪ್ರತಿಷ್ಠಾಪಿತ ಮುಖಂಡರು ಪ್ರತಿನಿಧಿಸಿದ ಪ್ರಕ್ರಿಯೆಯ 'ಕೆಲವು ಭಿನ್ನ ಮಾರ್ಗಗಳಿರುವ' ಒಂದು ಮುಂದುವರಿಕೆ. ಇವರ ಸಾಮ್ರಾಜ್ಯಶಾಹಿ- ವಿರೋಧ ಸ್ವಾತಂತ್ರ್ಯ ಆಂದೋಲನಕ್ಕೆ ಒತ್ತಾಸೆ ನೀಡಿದ ಸ್ವಾತಂತ್ರ್ಯದ ಸರಳವಾದ ಆಕಾಂಕ್ಷೆಯ ಒಂದು ಹೆಚ್ಚು ಬೆಳವಣಿಗೆ ಹೊಂದಿದ ಸ್ವರೂಪ ಎಂಬ ಅರ್ಥದಲ್ಲಿ ಅದು ಮುಂದುವರಿಕೆಯಾಗಿದ್ದರೆ, ಭಿನ್ನ ಮಾರ್ಗ ಎಂಬುದು ಒಂದು ಹೊಸ ವರ್ಗ(ಕಾರ್ಮಿಕ ವರ್ಗ) ಮತ್ತು ಹೊಸ ಜನಸಮೂಹಗಳು(ರೈತಾಪಿಗಳು ಮತ್ತು ದಮನಿತ ಮಧ್ಯಮ ವರ್ಗಗಳು) ಸ್ವತಂತ್ರ ವರ್ಗ ಶಕ್ತಿಗಳಾಗಿ ಸ್ವಾತಂತ್ರ್ಯ ಆಂದೋಲನಕ್ಕೆ ಸೆಳೆಯಲ್ಪಡಲಾರಂಭಿಸಿದವು ಎಂಬ ಅರ್ಥದಲ್ಲಿ.

ಆರಂಭದ ಕಮ್ಯುನಿಸ್ಟ್ ಗುಂಪುಗಳು, ಅವುಗಳ ಕ್ರೋಡೀಕರಣದಿಂದ ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತದ ಕಾರ್ಮಿಕರ ಮತ್ತು ರೈತರ ಪಕ್ಷದ ರಚನೆ, ದೊಡ್ಡ ಸಂಖ್ಯೆಯಲ್ಲಿ ಕ್ರಾಂತಿಕಾರಿಗಳು(ಭಗತ್ ಸಿಂಗ್ ಕೂಡಾ ಸೇರಿ) ಹೊಸ ತತ್ವಸಿದ್ಧಾಂತ ಮತ್ತು


→

ೀಯುವನ್ನು ಅಂಗೀಕರಿಸಿದ್ದು, ಕಾಂಗ್ರೆಸ್ ಜವಾದಿ ಪಕ್ಷ ಮೂಡಿ ಬಂದದ್ದು ಮತ್ತು ಸ್ಟ್ ಪಕ್ಷದ ಒಂದು ಏಕೀಕೃತ ಕೇಂದ್ರದ ರಚನೆ ಭಾರತೀಯ ಕಾರ್ಮಿಕ ವರ್ಗ ಮತ್ತು ಅದರ ಹಾಗೂ ಮಟ್ಟ ಬಂಡವಾಳಶಾಹಿ ಮಿತ್ರರು ವು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಗೊಳ್ಳುತ್ತಿದ್ದ ಪ್ರಕ್ರಿಯೆಯ ವಿವಿಧ ಹಂತಗಳು. ರು ಬೂರ್ಜ್ವಾ ವರ್ಗದಿಂದ ಸ್ವತಂತ್ರ ುತ್ತಿದ್ದರು. ಮಹಾತ್ಮ ಗಾಂಧಿ ಈ ಬೂರ್ಜ್ವಾ ದ ಅತ್ಯುತ್ತಮ ಮುಖಂಡರಾಗಿದ್ದರು.

ಆದ್ದರಿಂದ, 1930ರ ದಶಕದ ಮಧ್ಯದ ವೇಳೆಗೆ ಸ್ಪರ ವಿರೋಧಿಸುವ ಎರಡು ಸಾಮಾಜಿಕ ಳು - ಬೂರ್ಜ್ವಾವರ್ಗ ಮತ್ತು ಕಾರ್ಮಿಕ ವರ್ಗ- ಮು ಐಕ್ಯರಂಗದಲ್ಲಿ ಒಟ್ಟಿಗೆ ಬಂದಿದ್ದವು, ಆದರೂ ರತೀಯ ಕ್ರಾಂತಿಯ ಮೂಲಭೂತ ಪ್ರಶ್ನೆಗಳ ೀಲೆ ಪರಸ್ಪರ ಸೆಣಸಾಡುವುದನ್ನು ಂದುವರೆಸಿದವು. ಈ ಎರಡು ವರ್ಗ ರಚನೆಗಳು ಯ ಸಮಾಜವನ್ನು ಪರಿವರ್ತಿಸುವ ಯದಲ್ಲಿ ಪ್ರತ್ಯೇಕವಾಗಿ ನ್ನಡೆಯಲಾರಂಭಿಸಿದರೂ ವಸಾಹತು ಶಾಹಿಯ ುದ್ಧ ಒಟ್ಟಾಗಿ ಏಟು ನೀಡುತ್ತಿದ್ದವು. ಮ್ರಾಜ್ಯಶಾಹಿ-ವಿರೋಧಿ ಐಕ್ಯರಂಗ ಈ ಎರಡು ರಚನೆಗಳು ವಿದೇಶೀ ಆಳ್ವಿಕೆಯಿಂದ ದೇಶವನ್ನು ೋಚನೆಗೊಳಿಸುವ ಸಮಾನ ಕಾರ್ಯಕ್ರಮದ ೀಲೆ ಒಂದುಗೂಡಿದುದರ ಪರಿಣಾಮ. ಾಹರಲಾಲ ನೆಹರೂ ಇದರ ಅತ್ಯಂತ ತಿನಿಧಿಕ ವಕ್ತಾರರಾಗಿದ್ದರು.

ಮೂರು ವರ್ಷಗಳ ಐಕ್ಯರಂಗದ ಕೊನೆಯಲ್ಲಿ ್ಯುನಿಸ್ಟರು, ಸಮಾಜವಾದಿಗಳು ಮತ್ತು ಇತರ ಡಪಕ್ಷಗಳಿಗೆ ಜವಾಹರಲಾಲ ನೆಹರೂ ುಖಂಡರು ಎಂದು ಕಾಣಬರುತ್ತಿತ್ತು. ಆದರೆ ರಡನೇ ಮಹಾಯುದ್ಧ ಆರಂಭವಾಗುವ ರ್ವದಲ್ಲಿ ಈ ರಂಗ ಕೊನೆಗೊಂಡಿತು. ತ್ರಿಪುರಿ ಧಿವೇಶನ(1939)ದ ನಂತರದ ಬೆಳವಣಿಗೆ ನೆಹರೂ ತ್ತು ಕಮ್ಯುನಿಸ್ಟರ ನಡುವಿನ ವಿಭಜಕವಾಯಿತು. ್ತಿ ದೃಷ್ಟಿಯಿಂದ ಹೇಳುವುದಾದರೆ ಅದು ಹರೂರವರ 1931ರ ಜೀವನ ಚರಿತ್ರೆ ಬರೆದ ೀಖಕನಾದ ನಾನು ಮತ್ತು ಈ ಪುಸ್ತಕದ ಲೇಖಕನಾಗಿ ನು ಇವರೆಡರ ನಡುವೆ ಉಂಟಾದ ವಿಭಜನೆ ಾಡಾ. 1931ರ ಪುಸ್ತಕದಲ್ಲಿ ನೆಹರೂ ಬಗ್ಗೆ ಂಪೂರ್ಣ ಹೊಗಳಿಕೆಯಿತ್ತು, ಅವರು ಮಹಾತ್ಮರ ಚಾರಗಳು ಮತ್ತು ಆಚರಣೆಗಳಲ್ಲಿ ಕೆಲವು ತಪ್ಪುಗಳನ್ನು ಿಪಡಿಸುವವರು, ಕೆಲವು ನ್ಯೂನ್ಯತೆಗಳನ್ನು ಾರಿಸುವವರು ಎಂದು ಬರೆದಿದ್ದೆ. ಇನ್ನೊಂದೆಡೆ, ಸಂಪುಟದಲ್ಲಿ ಹೇಗೆ ಹಂತ-ಹಂತವಾಗಿ ನೆಹರೂ ಹಾತ್ಮರಿಂದ ತನ್ನ ದೂರವನ್ನು ಇಟ್ಟುಕೊಂಡೇ ವರ ಅತ್ಯಂತ ವಿಶ್ವಾಸಾರ್ಹ ಮಿತ್ರ ಮತ್ತು ಶಿಷ್ಯನಾಗಿ ರ್ತಿಸಿದರು ಎಂಬುದನ್ನು ತೋರಿಸಿದ್ದೇನೆ.

ಹೇಗೆ ನಂತರದ ವರ್ಷಗಳಲ್ಲಿ ನೆಹರೂ ಕಾಂಗ್ರೆಸಿನ ಾಹೋರ್ ಅಧಿವೇಶನಕ್ಕೆ ಅವರನ್ನು ಅಧ್ಯಕ್ಷರಾಗಿ ರಿಸುವಾಗ ಮಹಾತ್ಮರು ಅವರಿಂದ ಏನು ದ್ದರೋ ಅದರಂತೆ ವರ್ತಿಸಿದರು ಎಂಬುದನ್ನು ಪುಸ್ತಕದಲ್ಲಿ ತಿಳಿಸಿದ್ದೇನೆ. 1929ರ ಲಾಹೋರ್ ಧಿವೇಶನದ ಅವರ ಅಧ್ಯಕ್ಷ ಭಾಷಣದಲ್ಲಿ ಹರಡಿದ್ದ ತೀವ್ರಗಾಮಿ ಪದಪುಂಜಗಳು ಮತ್ತು ನಂತರದ ಅವರ ಉದ್ಗಾರಗಳೇನೇ ಇದ್ದರೂ ಅವು ಅವರನ್ನು ಮಹಾತ್ಮರ ನೆಚ್ಚಿಕೆಯ ಸಹಯೋಗಿ ಮತ್ತು ಸಂಗಾತಿಯಾಗುವುದನ್ನು ತಡೆಯಲಿಲ್ಲ. ತ್ರಿಪಕ್ಷೀಯ ಮಾತುಕತೆಗಳಿಗೆ(ಬ್ರಿಟಿಶ್ ಆಳರಸರು ಮತ್ತು ಮುಸ್ಲಿಂ ಲೀಗ್‌ನೊಡನೆ) ರಣತಂತ್ರ ಮತ್ತು ಕಾರ್ಯವ್ಯೂಹವನ್ನು ರೂಪಿಸುವಲ್ಲಿ ಪಟೇಲ್, ರಾಜಗೋಪಾಲಾಚಾರಿ ಮತ್ತು ರಾಜೇಂದ್ರ ಪ್ರಸಾದರಂತಹ ಬಲಪಂಥೀಯ ನಾಯಕರೊಂದಿಗೆ ನೆಹರೂ ಕೂಡಾ ಒಬ್ಬರಾಗಿದ್ದರು. ಈ ಮಾತುಕತೆಗಳ ಅಂತಿಮ ಪರಿಣಾಮವಾಗಿ ಭಾರತದ ವಿಭಜನೆಯಾಯಿತು, ಎರಡು ಸಾರ್ವಭೌಮ, ಆದರೆ ಪರಸ್ಪರ ವೈಷಮ್ಯಪೂರಿತ ಪ್ರಭುತ್ವಗಳ(ಭಾರತ ಸಂಘ ಮತ್ತು ಪಾಕಿಸ್ತಾನ) ರಚನೆಯಾಯಿತು ಮತ್ತು ಅದರ ಜೊತೆಗೆ ಅತೀ ದೊಡ್ಡ ಜನಸಂಹಾರ ನಡೆಯಿತು. ಇವರಿಬ್ಬರ ನಡುವೆ ವ್ಯತ್ಯಾಸವೇನಾದರೂ ಇದ್ದರೆ, ಅದು ಹೀಗಿತ್ತು- ಮಹಾತ್ಮರು ಭಾರತದ ಸ್ವಾತಂತ್ರ್ಯ ಹೋರಾಟದ ಅಂತಿಮ ಪರಿಣಾಮ ತನ್ನ ಒಂದು ವೈಯಕ್ತಿಕ ಸೋಲು ಎಂದು ಬಗೆದರೆ, ನೆಹರೂ ಇದೊಂದು ಭಾಗಶಃ ವಿಜಯ, ಇದರ ಮೇಲಿಂದ



ಸ್ವತಂತ್ರ ಭಾರತದ ಸರಕಾರದಲ್ಲಿ ತಾನು ಮತ್ತು ತನ್ನ ಸಹಯೋಗಿಗಳು ಕಟ್ಟಬಹುದು ಎಂದು ಬಗೆದರು.

ದೈವಭೀರು ಮಾನವತಾವಾದಿಯಾಗಿದ್ದ ಗಾಂಧಿಯವರಿಗೆ 1947ರಲ್ಲಿ ಗೆದ್ದುಕೊಂಡ ಸ್ವಾತಂತ್ರ್ಯವನ್ನು ಅರಗಿಸಿಕೊಳ್ಳಲಾಗಲಿಲ್ಲ. ಅವರು ಸ್ವಾತಂತ್ರ್ಯದ ಅರುಣೋದಯದ ದೇಶವ್ಯಾಪಿ ಉತ್ಸವಗಳಲ್ಲಿ ಭಾಗವಹಿಸಲು ನಿರಾಕರಿಸಿದ ಒಬ್ಬ ರಾಷ್ಟ್ರೀಯ ಮುಖಂಡರು. 'ನನ್ನ ದೇಹಚ್ಛೇದ' ಎಂದು ಅವರು ಸ್ವತಃ ವರ್ಣಿಸಿದ ಭಾರತದ ವಿಭಜನೆಯೊಂದಿಗೆ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಬಂಧುಭಾವ ಛಿದ್ರಗೊಂಡು, ಕೊಲೆ, ಸುಲಿಗೆ, ಮಾನಭಂಗ ಇತ್ಯಾದಿಗಳು ವ್ಯಾಪಕವಾಗಿ ನಡೆಯುತ್ತಿದ್ದುದರ ಬಗ್ಗೆಯೇ ಹೆಚ್ಚು ಆತಂಕಿತರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಿಂದ ದೇಶದ ಹೊಸ ಆಳರಸರಾಗಿ ತಮ್ಮನ್ನು ಪರಿವರ್ತಿಸಿಕೊಂಡ ಕಾಂಗ್ರೆಸಿಗರು ಹೊಸ ಅವಕಾಶಗಳನ್ನು ತಮ್ಮ ವೈಯಕ್ತಿಕ ಹಿತಗಳ ಈಡೇರಿಕೆಗೆ ಬಳಸಿ ಕೊಳ್ಳುತ್ತಿದ್ದರು ಎಂದೂ ಅವರಿಗೆ ಬೇಸರವಾಗಿತ್ತು. ಆದ್ದರಿಂದ ಅವರು, ಕಾಂಗ್ರೆಸ್ ಯಾವ ಗುರಿಸಾಧನೆಗೆ ಸ್ಥಾಪನೆಗೊಂಡಿತ್ತೋ ಅದು ಈಡೇರಿರುವುದರಿಂದ, ಆ ಸಂಘಟನೆ ಮುಂದುವರಿಯಬಾರದು, ಅದನ್ನು ಒಂದು ಲೋಕ ಸೇವಕ ಸಂಘವಾಗಿ ಪರಿವರ್ತಿಸಬೇಕು ಎಂದು ಶಿಫಾರಸು ಮಾಡಿದರು.

ಇನ್ನೊಂದು ಕಡೆ ನೆಹರೂ, ಗಾಂಧಿಯವರ ಇತರ ಶಿಷ್ಯರಂತೆ(ಪಟೇಲ್, ರಾಜೇಂದ್ರ ಪ್ರಸಾದ, ರಾಜಾಜಿ ಮುಂತಾದವರು) ಭಾರತ ಸಂಘ ಮತ್ತು ಪಾಕಿಸ್ತಾನ ಎಂದು ವಿಭಜನೆಗೊಂಡರೂ ದೇಶ ಸ್ವತಂತ್ರವಾಯಿತು ಎಂದು ಹರ್ಷಿಸಿದರು. ನಿಜ, ತಮ್ಮ ಸಹಯೋಗಿಗಳೊಂದಿಗೆ ನೆಹರೂರವರೂ ದೇಶದ ವಿಭಜನೆ ಮತ್ತು ಜತೆಗೇ ನಡೆದ ತೀವ್ರ ಗಲಭೆಗಳಿಂದ ಅಷ್ಟೇ ಆತಂಕಿತರಾಗಿದ್ದರು. ಆದರೆ ತಾವು ಗಳಿಸಿದ ಹೊಸ ಅಧಿಕಾರವನ್ನು ಎದ್ದು ಬಂದಿರುವ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಬಳಸಬಹುದು ಎಂದು ಅವರು ಭಾವಿಸಿದ್ದರು. ಆದ್ದರಿಂದ ಅವರು ಸ್ವತಂತ್ರ ಭಾರತದ ಹೊಸ ಸರಕಾರದ ಮುಖ್ಯಸ್ಥರಾಗಿ ಸಮಸ್ಯೆಗಳು ಎದ್ದು ಬಂದಂತೆ ಅವನ್ನು ಎದುರಿಸಲು ತಮ್ಮ ಸ್ಥಾನಮಾನವನ್ನು ಬಳಸಿದರು. ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯ ತನಗೆ ಮತ್ತು ತನ್ನ ನೇತೃತ್ವದ ಸರಕಾರಕ್ಕೆ ಇದೆ ಎಂಬ ಅಪಾರ ನಂಬಿಕೆ ಅವರಲ್ಲಿತ್ತು.

ಹೇಗೆ ಈ ನಿರೀಕ್ಷೆಗಳು ಒಂದೊಂದಾಗಿ ನುಚ್ಚುನೂರಾದವು, ಹೇಗೆ ಸಾವು ಅವರನ್ನು ನಮ್ಮಿಂದ ದೂರ ಒಯ್ಯುವ ಬಹಳ ಮೊದಲೇ ಅವರು ದೈಹಿಕವಾಗಿ ಬದುಕಿದ್ದರೂ, ಆಧ್ಯಾತ್ಮಿಕವಾಗಿ ಸತ್ತಂತೆ ಆಗಿದ್ದರು ಎಂಬುದನ್ನು ಹಿಂದಿನ ಪುಟಗಳಲ್ಲಿ(ಅವರ ಕೃತಿ Nehru: Idealogy Practise ನ ಇದರ ಹಿಂದಿನ ಅಧ್ಯಾಯಗಳಲ್ಲಿ-ಅನು) ವರ್ಣಿಸಲಾಗಿದೆ. ಕೋಮುವಾದದ ವಿಷವನ್ನು (ಸ್ವಾತಂತ್ರ್ಯದ ಆರಂಭದ ತಿಂಗಳುಗಳಲ್ಲಿ ಗಾಂಧಿಯವರೊಂದಿಗೆ ಅವರು ಇದರ ವಿರುದ್ಧ ಹೋರಾಡುವಲ್ಲಿ ಕೈಜೋಡಿಸಿದ್ದರು) ತಡೆದಿಡುವಲ್ಲಿ ಅವರ ವಿಫಲತೆ, ಸ್ವಾತಂತ್ರ್ಯದ ಅರುಣೋದಯ ದಲ್ಲಿಯೇ ಅವರ ಸರಕಾರ ಬಳುವಳಿಯಾಗಿ ಪಡೆದ ಆಹಾರ ಸಮಸ್ಯೆಯನ್ನು ಪರಿಹರಿಸುವಲ್ಲಿ ಅವರ ವಿಫಲತೆ, ಆರ್ಥಿಕ ಯೋಜನಾ ಪ್ರಕ್ರಿಯೆಯ(ಅವರು ವೈಯಕ್ತಿಕವಾಗಿ ಅದರ ಕರ್ತೃ ಮತ್ತು ನಾಯಕರಾಗಿದ್ದರು) ಆಭಾಸ, ಅವರು ಸದಾ ಹೀಗಳೆಯುತ್ತಿದ್ದ ಕಮ್ಯುನಿಸ್ಟರು ಚುನಾವಣೆಗಳಲ್ಲಿ ಅವರ ಪಕ್ಷವನ್ನು ಸೋಲಿಸಿ ಒಂದು ರಾಜ್ಯದಲ್ಲಿ ಪ್ರಥಮ ಕಾಂಗ್ರೆಸೇತರ ಸರಕಾರವನ್ನು ರಚಿಸಿದಾಗ ಅವರಿಗೆ ಬಿದ್ದ ಭಾರೀಹೊಡೆತ, ಕೇರಳದಲ್ಲಿ ಮುಸ್ಲಿಂ ಲೀಗಿನೊಂದಿಗೆ ಚುನಾವಣಾ-ರಾಜಕೀಯ ಮೈತ್ರಿಗೆ ಅವರ ಆಶೀರ್ವಾದ- ಈ ಎಲ್ಲಾ ಸ್ವಾತಂತ್ರ್ಯಾನಂತರದ ಬೆಳವಣಿಗೆಗಳು ಪ್ರಧಾನ ಮಂತ್ರಿ ನೆಹರೂ ಸ್ವಾತಂತ್ರ್ಯ ಸಮರದ ದಿನಗಳಲ್ಲಿ ಎಡಪಂಥೀಯರ ಮುಖಂಡರಾಗಿದ್ದ ನೆಹರೂರವರಿಗಿಂತ ಭಿನ್ನರಾಗಿದ್ದರು ಎಂಬುದನ್ನು ತೋರಿಸಿ ಕೊಟ್ಟವು. ಅವರ ಪ್ರಧಾನ ಮಂತ್ರಿತ್ವದ ವರ್ಷಗಳ ಈ ಸರ್ವವ್ಯಾಪಿ ಆಭಾಸಗಳಿಗೆ ಕಿರೀಟವಿಟ್ಟಂತೆ ಭಾರತ-ಚೀನಾ ಗಡಿಯಲ್ಲಿ ಅವರ ಸಾಹಸದ ದುರಂತಮಯ ಕೊನೆಯ ಅತ್ಯಂತ ಕಹಿ ಆಘಾತವನ್ನು ಅವರು ಸಹಿಸಬೇಕಾಗಿ ಬಂತು. ಆದ್ದರಿಂದ ಯಾವುದೇ ಋಜುತ್ವದಿಂದ ಕೂಡಿದ ಪರಾಮರ್ಶೆ ಪ್ರಧಾನ ಮಂತ್ರಿಯಾಗಿ ಅವರ ಹದಿನೇಳು ವರ್ಷಗಳ ಬದುಕು ಮತ್ತು ಕೆಲಸ ಒಂದು ಸಂಪೂರ್ಣ ವೈಫಲ್ಯ ಎಂದು ಪರಿಗಣಿಸಬೇಕಾಗುತ್ತದೆ.

ಅಂತಿಮವಾಗಿ ಮುಂದಿಡಬೇಕಾದ ಪ್ರಶ್ನೆಯೆಂದರೆ: ನಮ್ಮ ಸ್ವಾತಂತ್ರ್ಯ ಆಂದೋಲನದ ಇಬ್ಬರು ಅತ್ಯಂತ ಪ್ರಮುಖ ನಾಯಕರು -ಮಹಾತ್ಮ ಗಾಂಧಿ ಮತ್ತು ಜವಾಹರಲಾಲ ನೆಹರೂ- ತಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳದೆ ಈ ಜಗತ್ತನ್ನು ಬಿಟ್ಟುಹೋದರೇಕೆ? ಭಾರತದ ಐಕ್ಯತೆ ಗಾಂಧೀಜಿಯವರ ಆಕಾಂಕ್ಷೆಯಾಗಿತ್ತು, ಅದರಲ್ಲಿ ಹಿಂದು-ಮುಸ್ಲಿಂ ಐಕ್ಯತೆ ನಿರ್ಣಾಯಕ ಅಂಶವಾಗಿತ್ತು. ನೆಹರೂರವರದ್ದು ಸ್ವಾತಂತ್ರ್ಯದ ಅರುಣೋದಯ ಮತ್ತು ಸ್ವತಂತ್ರ ಭಾರತದ ಆಡಳಿತದ ತನ್ನ ಪಾರುಪತ್ಯವನ್ನು ಒಂದು ಹೊಸ, ಪ್ರಜಾಪ್ರಭುತ್ವವಾದಿ, ಪುರೋಗಾಮಿ ಮತ್ತು ಸಮೃದ್ಧಿಶೀಲ ಭಾರತವನ್ನು ಕಟ್ಟಲು ಬಳಸಬಹುದು ಎಂಬ ಮಹದಾಸೆ, ನಿರೀಕ್ಷೆ. ಇದಕ್ಕೆ ಉತ್ತರವೆಂದರೆ ಈ ಇಬ್ಬರೂ ಒಂದು ವರ್ಗದ, ಭಾರತೀಯ ಬೂರ್ಜ್ವಾ ವರ್ಗದ ನೇತಾರರಾಗಿ ಭಾರತವನ್ನು ಒಂದು ಬೂರ್ಜ್ವಾ ಪ್ರಜಾಪ್ರಭುತ್ವದ ಮಾದರಿಯಲ್ಲಿ ಕಟ್ಟಲು ಪ್ರಯತ್ನಿಸಿದರು. ಆದರೆ ಬೂರ್ಜ್ವಾ ವ್ಯವಸ್ಥೆ ಒಂದು ಆಳವಾದ ಬಿಕ್ಕಟ್ಟಿನಲ್ಲಿರುವಾಗಲೇ ಈ ಪ್ರಯತ್ನ ನಡೆಸಿದರು. ತಮ್ಮ ನಿರೀಕ್ಷೆಗಳು ನುಚ್ಚುನೂರಾಗುತ್ತಿರಲು ಇದು ಕಾರಣ ಎಂದು ಅವರಿಬ್ಬರೂ ಕಾಣದಾದರು.

ಆದರೆ ಗಾಂಧಿಯವರು ನೆಹರೂರವರಿಗಿಂತ ಒಂದು ಅಂಗುಲ ಎತ್ತರವಾಗಿ ಕಾಣುತ್ತಾರೆ. ಏಕೆಂದರೆ ಅವರು ತಮ್ಮ ಕನಸುಗಳು ಒಡೆಯುತ್ತಿರುವುದನ್ನು ಒಪ್ಪಿಕೊಂಡರೆ, ನೆಹರೂ ಮಾತ್ರ ಕೊನೆಯ ಗಳಿಗೆಯ ವರೆಗೂ(ಅವರ ಚೀನಾ ಗಡಿ ಸಾಹಸದ ಆಭಾಸದ ನಂತರವೂ)ಭಾರತವನ್ನು ಬಂಡವಾಳಶಾಹಿ ಪಥದಲ್ಲಿ ಅಭಿವೃದ್ಧಿಪಡಿಸಬಹುದು ಎಂಬ ಭ್ರಮೆಯನ್ನು ಹೊಂದಿದ್ದರು.

ಒಟ್ಟಾರೆಯಾಗಿ ಗಾಂಧೀ ನೆಹರೂ ಪರಂಪರೆ ನಕಾರಾತ್ಮಕವಾಗಿದೆ. ಆ ಪರಂಪರೆಯನ್ನು ಅನುಸರಿಸುವುದಕ್ಕಿಂತ ಇಂದಿನ ಭಾರತ ಅದರಿಂದ ಬಿಡಿಸಿಕೊಳ್ಳುವುದು ಅಗತ್ಯವಾಗಿದೆ. ○

ಲಂಕಾ ತಮಿಳರ ಬವಣೆಗೆ ಕೊನೆಯಂತು ?

ಪುಟ 9 ರಿಂದ

ಎಲ್.ಟಿ.ಟಿ.ಇ.ಯ ಇತರ ನಾಯಕರು 'ಕಾರ್ಯಸಾಧ್ಯ ಈಳಂ' ಎಂದು ಕರೆದ 2002 ರ ಒಸ್ಲೋ ಘೋಷಣೆಯನ್ನೂ ನಾಯಕ ಪ್ರಭಾಕರನ್ ಎಂದೂ ಅಂಗೀಕರಿಸೇ ಇರಲಿಲ್ಲ. ಆ ಅವಧಿಯಲ್ಲಿ ಎಲ್.ಟಿ.ಟಿ.ಇ. ತನ್ನದೇ ನೌಕಾ ಸೈನ್ಯ ಮತ್ತು ವಾಯು ಸೈನ್ಯ ಸ್ಥಾಪಿಸಿ ನಾಲ್ಕನೇ ಹಂತದ ಯುದ್ಧಕ್ಕೆ ತಯಾರಿ ನಡೆಸಿತ್ತು. ಪ್ರತೀ ಹಂತದ ಯುದ್ಧ ಹಿಂದಿನ ಹಂತಕ್ಕಿಂತ ಭೀಕರವಾಗಿತ್ತು. ಅಗಸ್ಟ್ 2006 ರಿಂದ ನಾಲ್ಕನೇ ಹಂತದ ಯುದ್ಧ ಆರಂಭಿಸಿತು. ಇದು ನಿರ್ಣಾಯಕ ಕೊನೆಯ ಹಂತ ಎಂದು ಪ್ರಭಾಕರನ್ ಭಾವಿಸಿದ್ದ. ನಿರ್ಣಾಯಕ ಕೊನೆಯ ಹಂತವೆಂಬುದೇನೋ ನಿಜವಾಯಿತು. ಆದರೆ ನಿರ್ಣಯ ಬೇರೆಯದೇ ಆಗಿತ್ತು. ಈ ಯುದ್ಧಗಳ ನಡುವೆ ಶ್ರೀಲಂಕಾದ ರಾಜಕೀಯದಲ್ಲಿ ಮತ್ತು ಸರ್ಕಾರದಲ್ಲಿ ಹಲವು ಮಹತ್ವದ ಬದಲಾವಣೆಗಳು ಆಗಿ ಹೋದವು. ತಮಿಳು ಸಮಸ್ಯೆ ಬಗೆಹರಿಸಲು ಒಲವು ತೋರಿಸಿದ ಹಲವು ಅವಕಾಶಗಳು ಒದಗಿ ಬಂದವು. ಆದರೆ ಎಲ್.ಟಿ.ಟಿ.ಇ. ಇವ್ಯಾವನ್ನೂ ಬಳಸಿಕೊಳ್ಳುವ ಆಸಕ್ತಿ ತೋರಲಿಲ್ಲ. ಈಗ ಎಲ್.ಟಿ.ಟಿ.ಇ. ಸೋಲು ಮತ್ತು ಕೊನೆ ತಮಿಳು ಸಮಸ್ಯೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿವೆ. ತಮಿಳು ಚಳುವಳಿಯ ಬಲ ಪ್ರಭಾವಗಳನ್ನು ಬಹಳಷ್ಟು ಕುಗ್ಗಿಸಿವೆ.

ರಾಜಕೀಯ ಪರಿಹಾರ

ಹಾಗಾದರೆ ಈಗಿನ ಸಂದರ್ಭದಲ್ಲಿ ತಮಿಳು ಸಮಸ್ಯೆಗೆ ಪರಿಹಾರ ಏನು ? ಈಗ ಸಂಕೀರ್ಣವಾಗಿರುವ ಸಮಸ್ಯೆಗೆ ಮಿಲಿಟರಿ ಪರಿಹಾರ ಇಲ್ಲ ಎಂಬುದು 33 ವರ್ಷಗಳ ಈ ಅರ್ಥಹೀನ ಯುದ್ಧ ತೋರಿಸುತ್ತದೆ. ತಮಿಳರು, ಎಲ್.ಟಿ.ಟಿ.ಇ., ಶ್ರೀಲಂಕಾ ಸೈನ್ಯ, ಶ್ರೀಲಂಕಾ ನಾಗರಿಕರು - ಹೀಗೆ ಎಲ್ಲರಿಗೂ ಅಪಾರ ಸಾವು-ನೋವು, ಸಂಕಟ, ನೆಮ್ಮದಿ ಭಂಗ ತಂದ ಮಿಲಿಟರಿ ಪರಿಹಾರದ ಹುಚ್ಚು ಇನ್ನಾದರೂ ಕೊನೆಗೊಳ್ಳಬೇಕು. ಎಲ್ಲರಿಗೂ ಒಪ್ಪಿಗೆ ಆಗುವ ರಾಜಕೀಯ ಪರಿಹಾರ ಮಾತ್ರ ಇದಕ್ಕೆ ಸಾಧ್ಯ ಎಂದು ಎಲ್ಲರೂ ಅರಿತುಕೊಳ್ಳಬೇಕು. ಈ ಪ್ರಕ್ರಿಯೆಗೆ ತೊಡಕಾಗಿ ಇದ್ದದ್ದು ಎಲ್.ಟಿ.ಟಿ.ಇ.ಯ ಉದ್ಧಟತನ ಮಾತ್ರವಲ್ಲ. ಶ್ರೀಲಂಕಾದ ಈಗಿನ ಸರ್ಕಾರ ಸಹ ಇದೇ ಧೋರಣೆ ಹೊಂದಿದೆ. ಎಲ್.ಟಿ.ಟಿ.ಇ.ಯನ್ನು ಮುಗಿಸಿದರೆ ತಮಿಳು ಸಮಸ್ಯೆ ಬಗೆಹರಿದಂತೆ ಎಂದುಕೊಂಡಿದೆ. ಶ್ರೀಲಂಕಾದ ಹಲವು ಪಕ್ಷಗಳು ಸಿಂಹಳೀ ಸಂಕುಚಿತವಾದವನ್ನು ತಮ್ಮ ರಾಜಕೀಯದ ಆಧಾರ ಆಗಿಸಿಕೊಂಡಿವೆ. ಶ್ರೀಲಂಕಾದ ಆಳುವ ವರ್ಗದ ಪಕ್ಷಗಳು ಜನರ ಗಮನವನ್ನು ತಮ್ಮ ದುರಂತಕಾರಿ ನೀತಿಗಳ ದುಷ್ಪರಿಣಾಮಗಳಿಂದ ಬೇರೆಡೆಗೆ ತಿರುಗಿಸುವ ಉತ್ತಮ ಸಾಧನವಾಗಿ ತಮಿಳು ಸಮಸ್ಯೆಯನ್ನು ಬಳಸುತ್ತಿವೆ. ಶ್ರೀಲಂಕಾದ ಸರ್ಕಾರ, ಆಡಳಿತ ಮತ್ತು ಮಿಲಿಟರಿಯ ಉನ್ನತ ವಲಯಗಳಲ್ಲಿ 'ಮಿಲಿಟರಿ ಪರಿಹಾರ'ದ ಬೆಂಬಲಿಗರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ.



ಹಲವು ದಶಕಗಳಿಂದ ನೆನೆಗುದಿಗೆ ಬಿದ್ದ ತಮಿಳು ಸಮಸ್ಯೆಗೆ ರಾಜಕೀಯ ಪರಿಹಾರ ಹುಡುಕುವ ಪ್ರಕ್ರಿಯೆಯಿಂದ ತಪ್ಪಿಸಿ ಕೊಳ್ಳುವುದು ಆತ್ಮಘಾತಕ ಎಂದು ಶ್ರೀಲಂಕಾದ ಎಲ್ಲಾ ಜನವಿಭಾಗಗಳು ಅರಿತು ಕೊಳ್ಳಬೇಕು. ಎಲ್.ಟಿ.ಟಿ.ಇ. ಮೂಲ ಭೂತ ಸಮಸ್ಯೆ ಅಲ್ಲ. ಎಲ್.ಟಿ.ಟಿ.ಇ. ತಮಿಳು ಸಮಸ್ಯೆಗೆ ರಾಜಕೀಯ ಪರಿಹಾರ ಹುಡುಕದೆ ಮಾಡಿದ ಅಪರಾಧಗಳ ಕೂಸು. ತಮಿಳರನ್ನು ಎಲ್.ಟಿ.ಟಿ.ಇ. ಮಡಿಲಿಗೆ ತಳ್ಳಿದ ಜವಾಬ್ದಾರಿಯನ್ನು ಶ್ರೀಲಂಕಾದ ಎಲ್ಲಾ ಜನವಿಭಾಗಗಳು ಹೊತ್ತುಕೊಳ್ಳಬೇಕು. ಈ ಸಮಸ್ಯೆಯನ್ನು ಸಮಾಧಾನಕರವಾಗಿ ಬಗೆಹರಿಸದಿದ್ದರೆ, ಇನ್ನೊಂದು ಎಲ್.ಟಿ.ಟಿ.ಇ.ಯಂತಹ ಸಂಘಟನೆ ಹುಟ್ಟಿಕೊಂಡರೆ ಏನೂ ಆಶ್ಚರ್ಯ ಪಡಬೇಕಾಗಿಲ್ಲ. ಸಮಗ್ರ ಶಾಂತಿಯುತ ಸಮೃದ್ಧ ಶ್ರೀಲಂಕಾಕ್ಕೆ ಸಂಕಟಕ್ಕೀಡಾದ ಲಕ್ಷಾಂತರ ತಮಿಳರನ್ನು ಸಮಾಧಾನ ಮಾಡಲು ಧಾವಿಸುವುದು, ಆ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕುವ ಭರವಸೆ ಮೂಡಿಸುವುದು ತುರ್ತಿನ ಅಗತ್ಯ. ಐಕ್ಯ ಶ್ರೀಲಂಕಾದ ಚೌಕಟ್ಟಿನೊಳಗೆ ತಮಿಳರಿಗೆ ಗರಿಷ್ಠ ಸ್ವಾಯತ್ತತೆ ಕೊಡುವಂತೆ ಸಂವಿಧಾನ ತಿದ್ದುಪಡಿ ರಾಜಕೀಯ ಪರಿಹಾರದ ಮುಖ್ಯ ತಿರುಳಾಗುವುದು ಅನಿವಾರ್ಯ.

ಇತರ ಕೆಲವು ಅಗತ್ಯ ತುರ್ತಿನ ಕ್ರಮಗಳು :

- ತಮಿಳು ನಿರಾಶ್ರಿತರಿಗೆ ಪರಿಹಾರ ಸಾಮಗ್ರಿಗಳನ್ನು ಒದಗಿಸುವಲ್ಲಿ ರೆಡ್ ಕ್ರಾಸ್ ಮತ್ತು ವಿಶ್ವಸಂಸ್ಥೆಯ ಸಂಘಟನೆಗಳೊಂದಿಗೆ ಶ್ರೀಲಂಕಾ ಸರ್ಕಾರ ಸಹಕರಿಸಬೇಕು
- ಶ್ರೀಲಂಕಾ ಸರ್ಕಾರ ತಮಿಳರಿಗೆ ಶಾಂತಿ ಮತ್ತು ಘನತೆಯಿಂದ ಬಾಳುವ ಬಗ್ಗೆ ಭರವಸೆ ಹುಟ್ಟಿಸಬೇಕು
- ಶ್ರೀಲಂಕಾದ ಸರ್ವ ಪಕ್ಷಗಳ ಸಭೆ ಕರೆದು ರಾಜಕೀಯ ಪರಿಹಾರ ಹುಡುಕುವ ಪ್ರಕ್ರಿಯೆ ಆರಂಭಿಸುವಂತೆ ಆ ಸರ್ಕಾರದ ಮೇಲೆ ಭಾರತ ಸರ್ಕಾರ ಒತ್ತಡ ಹೇರಬೇಕು.
- ನಿರಾಶ್ರಿತರು ಪುನಃ ತಮ್ಮ ಮನೆಗಳಿಗೆ ವಾಪಸಾಗಿ ತಮ್ಮ ಜೀವನ ಪುನಃ ಆರಂಭಿಸುವ ಪರಿಸ್ಥಿತಿ ನಿರ್ಮಾಣ ಮಾಡುವುದು ಅಗತ್ಯ. ಉತ್ತರ ಮತ್ತು ಪೂರ್ವ ಜಿಲ್ಲೆಗಳಲ್ಲಿ ತಮಿಳು ಬಹುಮತ ಹೋಗಲಾಡಿಸಲು ಹೊರಗಿಂದ ಬಂದ ಸಿಂಹಳಿಯರನ್ನು ಅಲ್ಲಿ ನೆಲೆಸಲಾಗುತ್ತದೆ. ನಿರಾಶ್ರಿತರು ಶಾಶ್ವತವಾಗಿ ಕ್ಯಾಂಪುಗಳಲ್ಲಿ ಇರಬೇಕಾದೀತು ಎಂಬ ಭಯ ನಿವಾರಿಸಬೇಕು.
- ಉತ್ತರ ಮತ್ತು ಪೂರ್ವ ಜಿಲ್ಲೆಗಳ ಅಭಿವೃದ್ಧಿಗೆ ವಿಶೇಷ ಪ್ಯಾಕೇಜು ತಯಾರಿಸಿ ಘೋಷಿಸಬೇ
- ಯುದ್ಧ ಕಾಲದಲ್ಲಿ ಇದ್ದ 'ಎಲ್ಲ ತಮಿಳರು ಎಲ್.ಟಿ.ಟಿ.ಇ. ಕಾರ್ಯಕರ್ತರು ಅಥವಾ ಗೂಢಚಾರ ಎಂದು ಅನುಮಾನ ಪಡುವ ಧೋರಣೆ ಹೋಗಿ ವಾತಾವರಣ ತಿಳಿಯಾಗಿಸಬೇಕು. ಬಂ ನಿರಪರಾಧಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು.
- ತಮಿಳು ಅಧಿಕೃತ ಭಾಷೆ ಎಂಬ ಸಂವಿದಾನದ ಅಂಶವನ್ನು ದೇಶದ ತುಂಬಾ ಜಾರಿಗೆ ಪ್ರಾಮಾ ಪ್ರಯತ್ನ ಮಾಡಬೇಕು.
- ರಾಜಕೀಯ ಪರಿಹಾರಕ್ಕೆ ಒತ್ತಡ ಹಾಕುವುದಲ್ಲದೆ, ಯುದ್ಧಾ ನಂತರದ ಪುನರ್ರಚನೆಗೆ ನೆರವು ಕೊಡಲು ಭಾರತ ಸೇರಿದಂತೆ ಅಂತರ್ರಾಷ್ಟ್ರೀಯ ಸಮುದಾಯ ಮುಂದಾಗಬೇಕು.

ಕೇರಳದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ಮತಗಳಿಕೆ ವಿವರ

ಕ್ರ.ಸ	ಕ್ಷೇತ್ರ	ಅಭ್ಯರ್ಥಿ	ಮತಗಳಿಕೆ	ಸ್ಥಾನ	ಗೆಲುವು /ಎರಡನೇ ಸ
1	ಕಾಸರಗೋಡು	ಪಿ.ಕರುಣಾಕರನ್	3,85,522	ಗೆಲುವು	ಕಾಂಗ್ರೆಸ್ 3,2
2	ಕಣ್ಣೂರು	ಕೆ.ಕೆ.ರಾಘೇಶ್	3,89,727	2ನೇ ಸ್ಥಾನ	ಕಾಂಗ್ರೆಸ್ 4,32,
3	ವಡಕರ	ಪಿ.ಸತೀದೇವಿ(ಮಹಿಳೆ)	3,65,069	2ನೇ ಸ್ಥಾನ	ಕಾಂಗ್ರೆಸ್ 4,21,
4	ಕೋಜಿಕ್ಕೋಡ್	ವಕೀಲ ಮೊಹಮ್ಮದ್ ರಿಯಾಜ್	3,41,471	2ನೇ ಸ್ಥಾನ	ಕಾಂಗ್ರೆಸ್ 3,42,
5	ಮಲಪ್ಪುರಂ	ಟಿ.ಕೆ.ಹಂಜ	3,12,343	2ನೇ ಸ್ಥಾನ	IUML 4,27,
6	ಪಾಲಕ್ಕಾಡ್	ಎಂ.ಬಿ.ರಾಜೇಶ್	3,38,070	ಗೆಲುವು	ಕಾಂಗ್ರೆಸ್ 3,36,
7	ಅಲತ್ತೂರ್(ಪ.ಜಾ.)	ಪಿ.ಕೆ.ಬಿಜು	3,87,352	ಗೆಲುವು	ಕಾಂಗ್ರೆಸ್ 3,66,
8	ಚಲಕ್ಕುಡಿ	ಯು.ಪಿ.ಜೋಸೆಫ್	3,27,356	2ನೇ ಸ್ಥಾನ	ಕಾಂಗ್ರೆಸ್ 3,99,0
9	ಎರ್ನಾಕುಲಂ	ಸಿಂಧು ಜೊಯ್(ಮಹಿಳಾ)	3,31,055	2ನೇ ಸ್ಥಾನ	ಕಾಂಗ್ರೆಸ್ 3,42,8
10	ಕೊಟ್ಟಾಯಂ	ಸುರೇಶ್ ಕುರುಪ್	3,33,392	2ನೇ ಸ್ಥಾನ	ಕಾಂಗ್ರೆಸ್ 4,04,9
11	ಅಲಪ್ಪುಜಾ	ಡಾ.ಕೆ.ಎಸ್.ಮನೋಜ್	4,11,044	2ನೇ ಸ್ಥಾನ	ಕಾಂಗ್ರೆಸ್ 4,68,6
12	ಪಟನ ತಿಟ್ಟ	ಅನಂತಗೋಪನ್	2,97,026	2ನೇ ಸ್ಥಾನ	ಕಾಂಗ್ರೆಸ್ 4,08,2
13	ಕೊಲ್ಲಮ್	ಪಿ.ರಾಜೇಂದ್ರನ್	3,39,870	2ನೇ ಸ್ಥಾನ	ಕಾಂಗ್ರೆಸ್ 3,57,4
14	ಅಟ್ಟಿಂಗಲ್	ಎ.ಸಂಪತ್	3,28,036	ಗೆಲುವು	ಕಾಂಗ್ರೆಸ್ 3,09,6

ಪಶ್ಚಿಮ ಬಂಗಾಳದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ಮತಗಳಿಕೆ ವಿವ

1	ಜಲಪೈಗುರಿ (ಎಸ್‌ಸಿ)	ಮಹೇಂದ್ರರಾಯ್	4,69,613	ಗೆಲುವು	ಕಾಂಗ್ರೆಸ್3,81,292
2	ಡಾರ್ಜಿಲಿಂಗ್	ಜಿಬೇಶ್ ಸರ್ಕಾರ್	2,44,360	2ನೇ ಸ್ಥಾನ	ಬಿಜೆಪಿ4,97,64
3	ರಾಯ್‌ಗಂಜ್	ಬೈರೇಶ್ವರ್‌ಲಹಿರಿ	3,46,573	2ನೇ ಸ್ಥಾನ	ಕಾಂಗ್ರೆಸ್4,51,7
4	ಮಾಲ್ದಾ ಉತ್ತರ	ಸೈಲನ್ ಸರ್ಕಾರ್	3,80,123	2ನೇ ಸ್ಥಾನ	ಕಾಂಗ್ರೆಸ್4,40,264
5	ಮಾಲ್ದಾ ದಕ್ಷಿಣ	ಡಾ.ಅಬ್ದುರ್ ರಿಜಾಕ್	3,07,097	2ನೇ ಸ್ಥಾನ	ಕಾಂಗ್ರೆಸ್4,43,377
6	ಜಂಗಿಪುರ್	ಮೃಗಾಂಕ ಭಟ್ಟಾಚಾರ್ಯ	3,78,600	2ನೇ ಸ್ಥಾನ	ಕಾಂಗ್ರೆಸ್5,06,749
7	ಮುರ್ಷಿದಾಬಾದ್	ಅನಿಸುರ್ ರೆಹಮಾನ್	4,60,701	2ನೇ ಸ್ಥಾನ	ಕಾಂಗ್ರೆಸ್4,96,348
8	ಕೃಷ್ಣನಗರ	ಜ್ಯೋತಿರ್ಮೋಯಿ ಸಿಕ್ದಾರ್(ಮ)	3,66,293	2ನೇ ಸ್ಥಾನ	ಎಐಟಿಸಿ4,43,679
9	ರಾಣಘಾಟ್(ಎಸ್‌ಸಿ)	ಡಾ.ಬಸುದೇವ್ ಬರ್ಮನ್	4,73,235	2ನೇ ಸ್ಥಾನ	ಎಐಟಿಸಿ5,75,058
10	ಬಾಂಗನ್ (ಎಸ್‌ಸಿ)	ಅಸಿಮ್‌ಬಾಲ	4,53,770	2ನೇ ಸ್ಥಾನ	5,46.596
11	ಬರಾಕ್‌ಪುರ್	ತಾರಿಟ್‌ಬರಾನ್ ತೋಪ್‌ದರ್	3,72,675	2ನೇ ಸ್ಥಾನ	ಎಐಟಿಸಿ4,28,699
12	ಡಂಡಂ	ಅಮಿತಾವ ನಂದಿ	4,38,510	2ನೇ ಸ್ಥಾನ	ಎಐಟಿಸಿ4,58,988
13	ಮಥುರಾಪುರ್ (ಎಸ್‌ಸಿ)	ಅನಿಮೇಶ್ ನಾಸ್ಕರ್	4,35,542	2ನೇ ಸ್ಥಾನ	ಎಐಟಿಸಿ5,65,505
14	ಡೈಮಂಡ್ ಹಾರ್ಬರ್	ಸಮಿಕ್ ಲಹಿರಿ	4,12,923	2ನೇ ಸ್ಥಾನ	ಎಐಟಿಸಿ5,64,576
15	ಜಾದವ್‌ಪುರ್	ಡಾ.ಸುಜನ್ ಚಕ್ರವರ್ತಿ	4,84,400	2ನೇ ಸ್ಥಾನ	ಎಐಟಿಸಿ5,40,667
16	ಕೋಲ್ಕತ್ತಾ ದಕ್ಷಿಣ	ರಬಿನ್‌ದೇವ್	3,56,474	2ನೇ ಸ್ಥಾನ	ಎಐಟಿಸಿ5,76,045
17	ಕೋಲ್ಕತ್ತ ಉತ್ತರ	ಎಂ.ಡಿ ಸಲಿಮ್	3,51,368	2ನೇ ಸ್ಥಾನ	ಎಐಟಿಸಿ4,60,646
18	ಹೌರಾ	ಸ್ವದೇಶ್ ಚಕ್ರವರ್ತಿ	4,40,057	2ನೇ ಸ್ಥಾನ	ಎಐಟಿಸಿ4,77,449
19	ಉಲ್ಬೇರಿಯಾ	ಹನ್ನನ್ ಮೊಲ್ಲಾ	4,15,257	2ನೇ ಸ್ಥಾನ	ಎಐಟಿಸಿ 5,14,193
20	ಶ್ರೀರಾಮ್‌ಪುರ	ಸಂತಶ್ರೀ ಚಟರ್ಜಿ	4,32,535	2ನೇ ಸ್ಥಾನ	ಎಐಟಿಸಿ5,69,7
21	ಹೂಗ್ಲಿ	ರೂಪ್‌ಚಂದ್ ಪಾಲ್	4,92,499	2ನೇ ಸ್ಥಾನ	ಎಐಟಿಸಿ574,022
22	ಅರಂಬಾಗ್ (ಎಸ್‌ಸಿ)	ಶಕ್ತಿ ಮೋಹನ್ ಮಲಿಕ್	6,30,254	ಗೆಲುವು	ಕಾಂಗ್ರೆಸ್4,28,696
23	ತಮ್ಲುಕ್	ಲಕ್ಷ್ಮಣ್ ಶೇಟ್	4,65,084	2ನೇ ಸ್ಥಾನ	ಎಐಟಿಸಿ6,37,
24	ಕಾಂತಿ	ಪ್ರಶಾಂತ ಪ್ರಧಾನ್	4,77,609	2ನೇ ಸ್ಥಾನ	ಎಐಟಿಸಿ6,06,712
25	ಝಾರ್‌ಗ್ರಾಮ್ (ಎಸ್‌ಟಿ)	ಡಾ.ಪುಲಿನ್ ಬಿಹಾರಿ ಬಾಸ್ಕಿ	5,45,231	ಗೆಲುವು	ಕಾಂಗ್ರೆಸ್2,52,886
26	ಬಂಕುರ	ಬಸುದೇವ್ ಆಚಾರ್ಯ	6,69,233	ಗೆಲುವು	ಕಾಂಗ್ರೆಸ್3,61,421
27	ಬಿಷ್ಣುಪುರ (ಎಸ್‌ಸಿ)	ಶುಸ್ಮಿತಾ ಬೌರಿ (ಮಹಿಳೆ)	5,41,075	ಗೆಲುವು	ಎಐಟಿಸಿ4,11,709
28	ಭರ್ದಮಾನ್ ಪುರ್ಬಾ (ಎಸ್‌ಸಿ)	ಡಾ.ಅನುಪ್ ಷಾಹ	5,31,987	ಗೆಲುವು	ಎಐಟಿಸಿ4,72,568
29	ಭರ್ದಮಾನ್ ದುರ್ಗಾಪುರ	ಸೈದುಲ್ ಹಾಕ್	5,73,399	ಗೆಲುವು	ಕಾಂಗ್ರೆಸ್4,65,162
30	ಅಸಾನ್ಸಲ್	ಬನ್ಸಗೋಪಾಲ್ ಚೌದರಿ	4,35,161	ಗೆಲುವು	ಎಐಟಿಸಿ3,62,205
31	ಬೊಲ್‌ಪುರ್(ಎಸ್‌ಸಿ)	ಡಾ.ರಾಮಚಂದ್ರ ಡೋಮ್	5,38,383	ಗೆಲುವು	ಕಾಂಗ್ರೆಸ್4,11,501
32	ಬಿರ್‌ಭುಮ್	ಬ್ರಾಜ ಮುಖರ್ಜಿ	4,25,034	2ನೇ ಸ್ಥಾನ	ಎಐಟಿಸಿ4,86,553

9ನೇ ಲೋಕಸಭಾ ಚುನಾವಣೆ -ವಿವಿಧ ರಾಜ್ಯಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ಮತ ಗಳಿಕೆ

ರಾಜ್ಯ	ನಂ.	ಕ್ಷೇತ್ರ	ಅಭ್ಯರ್ಥಿ	ಗಳಿಸಿದ ಮತ	ಸ್ಥಾನ	ಗೆಲುವು / ಎರಡನೇ ಸ್ಥಾನ
ಡಮಾನ್ ಮತ್ತು ನಿಕೋಬಾರ್	1	ದ್ವೀಪ	ತಪನ್ ಬೇಪರಿ	7,190	3ನೇ ಸ್ಥಾನ	ಬಿಜೆಪಿ-75,211 ಕಾಂಗ್ರೆಸ್-72,221
ಸ್ಸಾಂ	1	ಬಾರ್ಪೆಟ	ದುರ್ಗೆ ದೇಕ	36,045	4ನೇ ಸ್ಥಾನ	ಕಾಂಗ್ರೆಸ್-3,22,137
	2	ಸಿಲ್ಚರ್	ದೀಪಕ್ ಬಟ್ಟಾಚಾರ್ಯ	11,831	4ನೇ ಸ್ಥಾನ	ಬಿಜೆಪಿ-2,43,532 ಎಯುಡಿಎಫ್-2,02,062
	3	ತೇಜ್‌ಪುರ್	ಜಿತೇನ್‌ಸುಂಧಿ	36,734	4ನೇ ಸ್ಥಾನ	ಎಜಿಪಿ-3,52,246 ಕಾಂಗ್ರೆಸ್-3,22,093
ಬಿಹಾರ್	1	ಸುಪೌಲ್	ಬಲರಾಂ ಸಿಂಗ್‌ಯಾದವ್	9,718	8ನೇ ಸ್ಥಾನ	ಜೆಡಿ(ಯು)-3,313,677 ಐಎನ್‌ಸಿ-1,47,602
	2	ಉಜಿಯಾರ್ಪುರ್	ರಾಮ್‌ದೇವ್ ವರ್ಮ	58,900	3ನೇ ಸ್ಥಾನ	ಜೆಡಿ(ಯು)-1,80,082
	3	ಭಗಲ್‌ಪುರ್	ಸುಭೋದ್‌ರಾಯ್	17,087	6ನೇ ಸ್ಥಾನ	ಬಿಜೆಪಿ-2,28,384
	4	ನಾವಧ್	ಗಣೇಶ್‌ಶಂಕರ್ ವಿದ್ಯಾರ್ಥಿ	14,840	9ನೇ ಸ್ಥಾನ	ಬಿಜೆಪಿ-1,30,608, ಎಲ್‌ಜೆಪಿ-95,691
	5	ಚಂಪಾರಣ್ ಪಶ್ಚಿಮ್	ರಾಮಶ್ರೇಯ್ ಸಿಂಘ್	23,462	3ನೇ ಸ್ಥಾನ	ಬಿಜೆಪಿ-1,98,781, ಎಲ್‌ಜೆಪಿ-1,51,438
ಚತ್ತೀಸ್‌ಗರ್	1	ಸರ್ಗುಜಾ	ಬಾಲಸಿಂಗ್	11,667	6ನೇ ಸ್ಥಾನ	ಬಿಜೆಪಿ-4,16,532, ಕಾಂಗ್ರೆಸ್-2,56,984
ಗುಜರಾತ್	1	ದಾಹೋಡ್(ಪ.ಪಂ)	ಸಿಂಗ್‌ಜಿ ಕಟಾರ	29,522	3ನೇ ಸ್ಥಾನ	ಕಾಂಗ್ರೆಸ್-2,50,586 ಬಿಜೆಪಿ-1,92,050
	2	ರಾಜ್‌ಕೋಟ್	ಸುಧೀರ್‌ಬಾಯ್ ಜೋಷಿ	2,908		ಕಾಂಗ್ರೆಸ್-3,74,034 ಬಿಜೆಪಿ-2,82,742
ಹರ್ಯಾಣ	1	ಸಿರ್ಸ(ಎಸ್‌ಸಿ)	ರಾಮ್‌ಕುಮಾರ್	18,869	5ನೇ ಸ್ಥಾನ	ಕಾಂಗ್ರೆಸ್-4,11,624 ಐಎನ್‌ಎಲ್‌ಡಿ-3,71,499
ಹಿಮಾಚಲಪ್ರದೇಶ	1	ಮಂಡಿ	ಒಂಕಾರ್‌ಷಾದ್	20,937	3ನೇ ಸ್ಥಾನ	ಕಾಂಗ್ರೆಸ್-3,40973 ಬಿಜೆಪಿ-3,26,976
ಝಾರ್ಖಂಡ್	1	ರಾಜ್‌ಮಹಲ್ (ಎಸ್‌ಟಿ)	ಜ್ಯೋತಿನ್ ಸೋರೆನ್	27,411	6ನೇ ಸ್ಥಾನ	ಬಿಜೆಪಿ-1,68,355 ಜೆಎಂಎಂ-1,59,373
	2	ರಾಂಚಿ	ರಾಜೇಂದ್ರ ಸಿಂಗ್ ಮುಂಡ	21,996	3ನೇ ಸ್ಥಾನ	ಕಾಂಗ್ರೆಸ್-3,10,499 ಬಿಜೆಪಿ-2,97,149
ಕರ್ನಾಟಕ	1	ದಕ್ಷಿಣ ಕನ್ನಡ	ಬಿ.ಮಾಧವ	18,238	3ನೇ ಸ್ಥಾನ	ಬಿಜೆಪಿ-4,99,385 ಕಾಂಗ್ರೆಸ್-4,58,965
ಲಕ್ಷದ್ವೀಪ	1	ಲಕ್ಷದ್ವೀಪ	ಲೋಕ್‌ಮಾನುಲ್ ಹಕ್ಕಿಂ.ಎಂ.ಕೆ	467	3ನೇ ಸ್ಥಾನ	ಕಾಂಗ್ರೆಸ್-20,492 ಎನ್.ಸಿ.ಪಿ-18,294
ಮಧ್ಯಪ್ರದೇಶ್	1	ಮೊರೆನ	ಜೆ.ಕೆ.ಫೈಸಲ್	5,537	5ನೇ ಸ್ಥಾನ	ಬಿಜೆಪಿ-3,00,595 ಕಾಂಗ್ರೆಸ್-1,99,532
ಮಹಾರಾಷ್ಟ್ರ	1	ದಿಂಡೋರಿ(ಎಸ್‌ಟಿ)	ಜಿವಪಾಂಡು ಗವಿಟ್	1,05,352	3ನೇ ಸ್ಥಾನ	ಬಿಜೆಪಿ-2,81,254, ಎನ್‌ಸಿಪಿ -2,43,907
	2	ಪಾಲ್ಗರ್ (ಎಸ್‌ಟಿ)	ಲಹನು ಶಿದ್ವ ಕೊಮ್	92,224	4ನೇ ಸ್ಥಾನ	ಬಿವಿಎ-2,23,234, ಬಿಜೆಪಿ -2,10,874
ಒರಿಸ್ಸಾ	1	ಸುಂದರ್‌ಗರ್(ಎಸ್‌ಟಿ)	ಸಲೊಮಿ ಮಿಂಜ್ (ಮಹಿಳೆ)	71,416	4ನೇ ಸ್ಥಾನ	ಕಾಂಗ್ರೆಸ್-2,79,522 ಬಿಜೆಪಿ-2,67,464
ಪಂಜಾಬ್	1	ಆನಂದಪುರ ಸಾಹಿಬ್	ಮಹಾನ್ ಸಿಂಗ್ ರೋರಿ	17,124	4ನೇ ಸ್ಥಾನ	ಕಾಂಗ್ರೆಸ್-4,04,836 ಎಸ್‌ಎಡಿ-3,37,632
ರಾಜಸ್ಥಾನ್	1	ಸಿಕಾರ್	ಅಮ್ರರಾಮ್	1,61,590	3ನೇ ಸ್ಥಾನ	ಕಾಂಗ್ರೆಸ್-3,24,812 ಬಿಜೆಪಿ-1,75,386
	2	ಬಿಕಾನರ್(ಎಸ್‌ಸಿ)	ಪವನ್ ದುಗ್ಗಲ್	36,355	4ನೇ ಸ್ಥಾನ	ಕಾಂಗ್ರೆಸ್-2,24,962 ಬಿಜೆಪಿ-2,44,537
	3	ಶ್ರೀ ಗಂಗಾನಗರ್ (ಎಸ್‌ಸಿ)	ಶೋಪತ್‌ರಾಮ್ ಮೆಘ್‌ವಾಲ್	26,923	4ನೇ	ಬಿಜೆಪಿ-3,35,886 ಕಾಂಗ್ರೆಸ್-4,76,554
	1	ಫಿರೋಜಾಬಾದ್	ರಾಜ್ಯೋದೇವಿ(ಮಹಿಳೆ)	3,612	9ನೇ ಸ್ಥಾನ	ಎಸ್‌ಪಿ-2,87,011 ಬಿಎಸ್‌ಪಿ-1,19,710
	2	ಅಜಾಮ್‌ಗರ್	ಅರುಣ್‌ಕುಮಾರ್ ಸಿಂಗ್	7,088	7ನೇ ಸ್ಥಾನ	ಬಿಜೆಪಿ-2,47,648 ಬಿಎಸ್‌ಪಿ-1,98,609
ಉತ್ತರಖಂಡ	1	ತೆಹರಿ	ಬಾಚಿರಾಂ ಕೌನ್ಸ್‌ವಾಲ್	5,562	5ನೇ ಸ್ಥಾನ	ಕಾಂಗ್ರೆಸ್-2,63,083 ಬಿಜೆಪಿ-2,10,144
ಆಂಧ್ರಪ್ರದೇಶ	1	ಅರಕು (ಎಸ್‌ಟಿ)	ಡಾ.ಎಂ.ಬಾಬುರಾವ್	1,68,014	2ನೇ ಸ್ಥಾನ	ಕಾಂಗ್ರೆಸ್-3,60458 ಪಿಆರ್‌ಪಿ-1,28,649
	2	ಭುವನಗಿರಿ	ನೊಮುಲ ನರಸಿಂಹಯ್ಯ	3,64,215	2ನೇ ಸ್ಥಾನ	ಕಾಂಗ್ರೆಸ್-5,04,103 ಪಿಆರ್‌ಪಿ-1,04,872

ತಮಿಳುನಾಡು

ಯಮತ್ತೂರು		ಮಧುರೈ		ಕನ್ಯಾಕುಮಾರಿ	
ಒಟ್ಟು ಮತದಾರರು	11,63,328	ಒಟ್ಟು ಮತದಾರರು	10,22,421	ಒಟ್ಟು ಮತದಾರರು	11,73,308
ಒಟ್ಟು ಮತ ಚಲಾವಣೆ	8,24,407	ಒಟ್ಟು ಮತ ಚಲಾವಣೆ	7,90,902	ಒಟ್ಟು ಮತ ಚಲಾವಣೆ	7,65,286
ಆರ್.ನಟರಾಜನ್ (ಸಿಪಿಐ(ಎಂ)	2,93,165	ಎಂ.ಕೆ.ಅಲಗಿರಿ (ಡಿ.ಎಂ.ಕೆ)	4,31,295	ಹೆಲೆನ್ ಡೆವಿಡ್‌ಸನ್ (ಡಿಎಂಕೆ)	3,19,968
ಪಾಂಡಿಯನ್ (ಡಿಎಂಡಿ)	73,188	ಪಿ.ಮೋಹನ್, ಸಿಪಿಐ(ಎಂ)	2,90,310	ಪಿ.ರಾಧಾಕೃಷ್ಣನ್ (ಬಿಜೆಪಿ)	2,54,324
.ಪ್ರಭು (ಕಾಂಗ್ರೆಸ್)	2,54,501	ಕೆ.ಕವಿಯರಸು (ಡಿ.ಎಂ.ಡಿ.ಕೆ)	54,419	ಎ.ವಿ.ಬೆಲ್ಲಾರ್‌ಮಿನ್ (ಸಿಪಿಐ(ಎಂ)	85,572
		ಜೆ.ಕೆ.ಎಸ್. ಸೆಲ್ವಕುಮಾರ್(ಬಿಜೆಪಿ)	37,909	ಎಸ್. ಆಸ್ಟಿನ್ (ಡಿಎಂಡಿಕೆ)	68,457

'ಖಾಸಗೀಕರಣ ಕೈಬಿಡಿ' ಬಿಸಿಯೂಟ ನೌಕರರ ಆಗ್ರಹ

ಪುಟ 6 ರಿಂದ

ಶಕ್ತಿಗಳನ್ನು ಅವರು ಬಯಲಿಗೆಳೆದರು. ಇಸ್ಕಾನ್ ಸಂಸ್ಥೆ ಸರ್ಕಾರದಿಂದಲೂ ಹಣ ಪಡೆದು ಮಕ್ಕಳ ಹೆಸರಿನಲ್ಲಿ ವಿದೇಶಗಳಲ್ಲಿಯೂ ದುಡ್ಡು ಎತ್ತುವ ವಂಚನೆಯನ್ನು ವಿವರಿಸಿದರು.ಸಮಸ್ಯೆ ಬಗೆಹರಿಯದಿದ್ದಲ್ಲಿ ಚುನಾಯಿತ ಸದಸ್ಯರ ಮೇಲೆ ಒತ್ತಡ ಹಾರುವ ನಿಟ್ಟಿನಲ್ಲಿ ರಾಜ್ಯ ಎಲ್ಲ 223 ಶಾಸಕರ ಮನೆ ಮುಂದೆ ಧರಣಿ ನಡೆಸಲು ಕರೆ ನೀಡಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಸಿಐಟಿಯುವಿನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ: ವಿ.ಜೆ.ಕೆ.ನಾಯರ್ ಹೋರಾಟವನ್ನು ಬೆಂಬಲಿಸಿ ಮಾತನಾಡಿ, ಬೆಳಿಗ್ಗೆ 10 ರಿಂದ 3 ವರೆಗೆ ಮೈ ಮುರಿದು ದುಡಿಯುವ ಬಿಸಿಯೂಟದ ಮಹಿಳೆಯರಿಗೂ ಹೊಟ್ಟೆ ಇದೆ. ಮಕ್ಕಳು, ಗಂಡ ಸಂಸಾರವಿದೆ. ತಿಂಗಳಿಗೆ 600-500 ರೂ. ಕೊಡುವುದು ಸರಿಯಲ್ಲ. ಯಾವುದೇ ರೀತಿಯ ಕೆಲಸಗಾರರಿಗೆ ಕನಿಷ್ಠ ಜನಕ್ಕೆ 100 ರೂ. ಆದರೂ ವೇತನ ನೀಡಬೇಕೆಂದು ಆಗ್ರಹಪಡಿಸಿದರು.ಕರ್ನಾಟಕ ರಾಜ್ಯ ಸ್ತ್ರೀ ಶಕ್ತಿ ಸ್ವಸಹಾಯ ಗುಂಪುಗಳ ಸಂಘ ರಾಜ್ಯ ಮುಖಂಡರಾದ ಸಿ.ಕುಮಾರಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಮುಂತಾದವರು ಹೋರಾಟಕ್ಕೆ ಬೆಂಬಲ ನೀಡಿ ಮಾತನಾಡಿದರು.

ಬಿಸಿಯೂಟ ಯೋಜನೆಯ ಸಹ ನಿರ್ದೇಶಕ ವೆಂಕಟೇಶಯ್ಯ ಮನವಿ ಸ್ವೀಕರಿಸಲು ಸ್ಥಳಕ್ಕೆ ಬಂದವರು ಏನನ್ನಬೇಕು! ಸರ್ಕಾರ ಬಿಸಿಯೂಟವನ್ನು ಖಾಸಗೀಕರಣ ಮಾಡುತ್ತಲೇ ಇಲ್ಲ ಎನ್ನಬೇಕೆ? ಅದೂ ಕೆಲಸ ಕಳೆದುಕೊಂಡು ಸರ್ಕಾರಕ್ಕೆ ಧಿಕ್ಕಾರ ಕೂಗುತ್ತಾ ಬೀದಿಯಲ್ಲಿ ನಿಂತಿರುವ ಹುಕ್ಕೇರಿ ಅನುಸೂಯ ಸಿದ್ದರಾಮ ಚೌಹಾಣ್‌ರಂತಹ ಮಹಿಳೆಯರು ನೂರಾರು ಸಂಖ್ಯೆಯಲ್ಲಿ ಎದುರು ಇರುವಾಗ!

ಪ್ರತಿಭಟನಾಕಾರರ ತಾಳ್ಮೆಗೂ ಮಿತಿ ಇಲ್ಲವೇ !? ಜವಾಬ್ದಾರಿಯುತ ಹಿರಿಯ ಅಧಿಕಾರಿ ಬರುವವರೆಗೆ ಇಲ್ಲಿಂದ ಕದಲುವುದಿಲ್ಲ ಅಂತ ಕುಳಿತರು ಮಹಿಳೆಯರು. ತಮ್ಮನ್ನು ಕೇಳಲು ಗಂಟೆ ಗಟ್ಟಲೆ ಯಾರೂ ಬರದೇ ಹೋದಾಗ ರಸ್ತೆ ತಡೆ ಮಾಡಲೂ ಹಿಂಜರಿಯಲಿಲ್ಲ. ಕೊನೆಗೆ ಪ್ರತಿಭಟನಾ ಸ್ಥಳಕ್ಕೆ ಹಾಜರಾದವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತ ಜಿ. ಕುಮಾರನಾಯಕ್. ಸಂಘದ ಪದಾಧಿಕಾರಿಗಳೊಂದಿಗೆ ಜೂನ್ 8 ಕ್ಕೆ ಸಭೆ ನಿಗದಿಯಾಗಿದೆ. ಸಮಸ್ಯೆಯನ್ನು ಪರಿಶೀಲಿಸುವ ಭರವಸೆ ಸಿಕ್ಕ ಮೇಲೆ ಅಂದಿನ ಪ್ರತಿಭಟನೆ ಮುಗಿಯಿತು. ಎಲ್ಲೆಲ್ಲಿ ಯೋಜನೆ ಖಾಸಗೀಕರಣ ಆಗುವುದೋ ಆ ಕ್ಷೇತ್ರದ ಶಾಸಕರ ಮನೆಯ ಮುಂದೆ ತೀವ್ರ ಪ್ರತಿಭಟನೆಗೆ ನಿರ್ಧರಿಸಲಾಗಿದೆ.

ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಎಸ್.ವರಲಕ್ಷ್ಮಿ ಕಾರ್ಯದರ್ಶಿ ಟಿ.ಲೀಲಾವತಿ ರಾಜ್ಯ ಮುಖಂಡರಾದ ಮಾಲಿನಿ ಪಿ. ಮೇಸ್ತ್ರಾ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

...ಯಾಕ ಕೆಲಸ ಕೊಟ್ಟಿಲ್ಲ ?...

... 10 ರಿಂದ

...ಸ್ ಬುಕ್ ಊರಿನ ಸಾವ್ಕಾರ ತಗೊಂಡಾನ ಏನಿಲ್ಲ? ಅವ್ರಿಗಿ ...ವು ಸೈ(ಸಹಿ) ಕೊಟ್ಟಿರೇನಿಲ್ಲ? ಉರಿ ಬಿಸಲಾಗ ಕೂಸುಗೋಳಿಗಿ ...ಂಡು ಕೈಗಿ ಗುಳ್ಳಿ ಬಂದರ್ರೂ ಕೆಲಸ ಮಾಡಿದೆವು. ಅಂದರ್‌ಬೀ ...ವು ಮಾಡಿದ ಕೂಲಿ ಪೂರಾ ಕೊಟ್ಟಿಲ್ಲ?..' ಹೀಗೆಂದು ಸತ್ಯದರ್ಶನ ...ಡಿಸಿದವಳು ರಮಕ್ಕ. ಆಕಿಯ ಮಾತು ನೂರಕ್ಕೆ ನೂರು ಖರೆ ...ತ್ತು. ಎಲ್ಲ ಭಾನಗಡಿಗಳು ಅಲ್ಲಿ ನಡೆದು ಹೋಗಿದ್ದವು. ಮತ್ತು ...ವಾಗಿಯೂ ಕೆಲಸ ಕೇಳಿ ಬಂದವರನ್ನು ನಾಯಿಯಂತೆ ಓಡಿಸಿ ...ಡಲಾಗಿತ್ತು. ಈಗ ಅಂಥ ಸೇಡು ತೀರಿಸಿಕೊಳ್ಳಲು ಅವರೆಲ್ಲ ...ಘಟನೆಯ ಶಕ್ತಿಯೊಂದಿಗೆ ಬಂದಿದ್ದರು. ಅವರ ಒಡಲೊಳಗಿನ ... ರಟ್ಟಿಗೆ ಬರತೊಡಗಿತ್ತು. ಕಾರ್ಯದರ್ಶಿ ಚೇರಮನ್ ಮತ್ತಿತರರಿಗೆಲ್ಲ ...ಳಗೆ ನಡುಕ ಸುರುವಾಯ್ತು. ಒಬ್ಬ ಅಜ್ಜಿ ಹತ್ತಿರ ಬಂದು ...ಡಿದುಡಿದು ಒರಟಾದ ಕೈಬೆರಳುಗಳಿಂದ ತಿವಿಯುವಂತೆ ಕಣ್ಣಗಲಿಸಿ ... ಸಾಯಾಗ ಚಂದ ಸಾಯ್ತಿ' 'ನಿನಗ ಲಕ್ವಾ ಹೊಡ್ಯಾಲಾ' 'ನಿನ ...ಡ್ರು ಮಕ್ಕಳು ಚಂದ ಇರ್ತಾರ' ನಮ ಹೊಟ್ಟಿ ಮ್ಯಾಲ ಹೊಡದು ನಿನ ಮನಿ ತುಂಬಕೊಂಡಿದಿ. ನಮ ಉಸುರು ಹತ್ತಿ ನೀ ಉರದು ಹೋಗ್ತಿ ನೋಡು?..' ಅವಳ ಕಣ್ಣುಗಳು ಉರಿವ ಅಗ್ನಿ ಕುಂಡದಂತೆ ಜ್ವಲಿಸುತ್ತಿದ್ದವು. ಎಷ್ಟು ದಿನಗಳ ರೊಚ್ಚು ಜಮಗಟ್ಟಿತೊ ಅಂತೂ ಅವಳ ಅರ್ಭಟಕ್ಕೆ ಇಡೀ ನೂರಾರು ಜನ ಗರಬಡಿದಂತೆ ನಿಂತಿದ್ದರು. ಅವಳ ಮಾತುಗಳಲ್ಲಿನ ಸತ್ಯವು ಸರ್ವಶಕ್ತಿಯಿಂದ ಕೂಡಿದ್ದರಿಂದ ಅಧಿಕಾರಿಗಳೂ ಪಾಪ ಪ್ರಜ್ಞೆಯಿಂದ ಪಿಳಿಪಿಳಿ ಕಣ್ಣು ಹೊರಳಿಸುತ ಕೂತರು. ಅಂತೂ ಕಡೆಗೆ ಇಂದು ಅರ್ಜಿ ಕೊಟ್ಟು ಎರಡೇ ದಿನಕ್ಕೆ ಕೆಲಸ ಕೊಡುವುದಾಗಿ ಮತ್ತು ಈ ವರ್ಷ ನೂರು ದಿನಗಳ ಕೆಲಸ ಕೊಟ್ಟೇ ಕೊಡುವುದಾಗಿ ಹೇಳಿದ ಮೇಲೆ ಬಂದವರು ಚೂರು ಶಾಂತರಾದರು. ಎಲ್ಲರಿಗೂ ಚಹಾ ತರಿಸಿದರು. ಜನರ ನಡುವೆ ಊರಿನ ಕಸ ಬಳಿಯುವ ಅವ್ವ ಒಬ್ಬಾಕಿ ಇದ್ದಳು. ಆಕಿ ತನ್ನ ಎರಡೂ ಕೈಗಳನ್ನು ಎತ್ತಿ ಮುಗಿದು 'ಎವ್ವಾ ಇಪ್ಪತ್ತು ವರ್ಷದಿಂದ ಈ ಪಂಚಾಯತ್ ಆಫಿಸ್ನಾಗ ದುಡಿತಿನಿ. ಊರ ಕಸ ಹೊಡದು ಹಸನ ಮಾಡಿನಿ. ಆದರ ಇವತ್ತೇ ನೋಡು ಈ ಆಫಿಸ್ನಾಂದು ಒಂದ್ ಕಪ್ ಚಹಾ ಕಂಡಿನಿ'.! ಅವಳ ಕಣ್ಣಲ್ಲಿ ಅಕ್ಷರಶಃ ಹನಿ ನೀರು ತೇಲಾಡುತ್ತಿತ್ತು.

ಇಷ್ಟು ವರ್ಷ ದುಡಿದರೂ ಅವಳಿಗೆ ಸಿಕ್ಕ ಫಲವೇನು? ಎಲ್ಲರಿಂದಲೂ ಛೀ ಥೂ. ನನಗೆ ಸುಂಧಾಳ ಪಂಚಾಯತ್‌ನ ಘಟನೆ ನೆನಪಾಯ್ತು. ಅಲ್ಲಿಗೆ ಬಹಳ ಜನ ಬಂದಿರುವುದರಿಂದ ಕೂಡಲು ಆಸನಗಳ ಕೊರತೆ ಇತ್ತು. ಎಲ್ಲ ಸೀಟುಗಳು ಭರ್ತಿಯಾಗಿದ್ದವು. ಖಾಲಿಯಿದ್ದಿದ್ದು ಚೇರಮನ್ ಚೇರ್ ಒಂದೇ. ಒಬ್ಬಾಕಿ ಕೂತೆ ಬಿಟ್ಟಳು. ಯಾರೋ ಒಬ್ಬಾತ, 'ಏಯ್ ಅದು ಅಧ್ಯಕ್ಷಂದು, ಹಾಂಗೆಲ್ಲ ಕುಂದ್ರಬಾರದು' ಅಂದನು. ಅದಕ್ಕೆ ಆಕೆ, 'ಯಾಕ' ನಾವ್ ಓಟು ಹಾಕಿದಕ ಅಂವ ಅಧ್ಯಕ್ಷ ಆಗ್ಯಾನ. ಆಗಿ ಅರೆ ಏನ ಫಾಯದಾ ಅದಾ. ನಮಗ ಬಂದಿದ್ದ ಕೆಲಸ ಎಲ್ಲ ನುಂಗಿ ಹಾಕಾದ್ರಾಗ ಅಂವಂದನೂ ಕೈ ಅದಾ. ಈ ಸೀಟೀಗಿ ನಾಲಾಯಕ್ ಹನಾ?..' ಅಂದು ತನ್ನ ಹಕ್ಕು ಚಲಾಯಿಸಿದಳು. ಯಾರೋ ಹೇಳಿದರು ನಗುತ, 'ನೀಬೀ ಗೆದ್ದ ಬಾ ಆಮ್ಯಾಲ ಕುಂದ್ರು' ಅಂದಾಗ 'ಹಾಂ ಯಾಕಾಗಾಲ' ನಾ ಇಲ್ಲಂದ್ರನೂ ನನ್ನಂಥವರಿಗಿ ಗೆಲ್ಲಸ್ತೇವು?..' ಅಂದು 'ನಂದನೂ ಹೆಸರು ಬರೀರಿ' ಅಂತ ಗತ್ತಿನಿಂದ ಹೇಳುವ ಪರಿಗೆ ಅಚ್ಚರಿ ಖುಷಿ ಯಾರಿಗಾಗುವುದಿಲ್ಲ ಹೇಳಿ'



ಮಿಸ್ಸಿಂಗ್ ಲಿಂಕ್ ಮತ್ತೆ ಸುದ್ದಿಯಲ್ಲಿ

ಮಿಸ್ಸಿಂಗ್ ಲಿಂಕ್ ಎಂದಾಕ್ಷಣ ನಮಗೆಲ್ಲ ನೆನಪಾಗೋದು ಪತ್ತೇದಾರಿ ಕಾದಂಬರಿಯಂತಿರುವ ವೈಜ್ಞಾನಿಕ ವಸ್ತುವನ್ನುಳ್ಳ ಪೂರ್ಣಚಂದ್ರ ತೇಜಸ್ವಿಯವರ 'ಮಿಸ್ಸಿಂಗ್ ಲಿಂಕ್' ಪುಸ್ತಕವೇ. ಮಾನವನನ್ನು ಒಳಗೊಂಡಂತೆ ಜೀವಿಗಳ ವಿಕಾಸದ ವಿವಿಧ ಹಂತಗಳು ಬೆಳೆದು ಬಂದ ಬಗೆಯನ್ನು ವೈಜ್ಞಾನಿಕವಾಗಿ ಕಟ್ಟುವ ಕೆಲಸ ನಡೆಯುತ್ತಲೇ ಇದೆ. ಪೂರ್ಣವಾಗಿ ವಿಕಾಸ ಪಳಿಯುಳಿಕೆಗಳ ಸಾಕ್ಷ್ಯಗಳು ದೊರೆಯದೆ ಕಳೆದುಹೋದ ಕೊಂಡಿಗಳನ್ನು (ಮಿಸ್ಸಿಂಗ್ ಲಿಂಕ್) ಶೋಧಿಸುವ ಕಾರ್ಯದಲ್ಲಿ ತೊಡಗಿರುವ ವಿಜ್ಞಾನಿಗಳು ಆಗಾಗ್ಗೆ ಮಿಸ್ಸಿಂಗ್ ಲಿಂಕ್‌ಗಳನ್ನು ಹುಡುಕಿ ವಿಕಾಸದ ಸರಣಿಯ ಕೊಂಡಿಗಳನ್ನು ಜೋಡಿಸುತ್ತಿರುವಂತೆಯೇ, ಮಿಸ್ಸಿಂಗ್ ಲಿಂಕ್ ಮತ್ತೆ ಸುದ್ದಿ ಮಾಡಿದೆ.

ಉದಾಹರಣೆಗೆ, ಸುಮಾರು 14ಕೋಟಿ ವರ್ಷಗಳಿಗೂ ಹಿಂದೆ ಜುರಾಸಿಕ್ ಅವಧಿಯಲ್ಲಿ ಡೈನೋಸಾರ್‌ಗಳ ಸಂತತಿಯು ಅಳಿಯುತ್ತಿರುವಾಗಲೇ ಅವು ಪಕ್ಷಿಗಳಾಗಿ ರೂಪಾಂತರ ಹೊಂದುವ ಕಾಲಘಟ್ಟದಲ್ಲಿ ಮೊದಲಬಾರಿಗೆ ಆರ್ಕಿಯೋಪ್ಟೆರಿಕ್ಸ್ ಎಂಬ ಪಕ್ಷಿ ಸಂತತಿಯು ಅಸ್ತಿತ್ವದಲ್ಲಿದ್ದವು. ನಂತರ ಇದೇ ಸಂತತಿಯು ಪಕ್ಷಿ ಸಂತತಿಯ ವಿಕಾಸಕ್ಕೆ ನಾಂದಿಯಾಯಿತು. ಹಾಗಾಗಿ ಆರ್ಕಿಯೋಪ್ಟೆರಿಕ್ಸ್‌ನ್ನು ಡೈನೋಸಾರ್ ಮತ್ತು ಆಧುನಿಕ ಪಕ್ಷಿ ಸಂತತಿಯ ನಡುವಿನ ಪರಿವರ್ತನಾ ರೂಪ ಎಂದು ಹೇಳುತ್ತಾರೆ.

ಹೊಸ ಮಿಸ್ಸಿಂಗ್ ಲಿಂಕ್

ಸುಮಾರು ನಾಲ್ಕು ಮುಕ್ಕಾಲು ಕೋಟಿ ವರ್ಷಗಳಷ್ಟು ಹಳೆಯದಾದ ಅತ್ಯಂತ ಸುರಕ್ಷಿತವಾಗಿ ಕಾಪಾಡಲಾಗಿರುವ ಕೋತಿಯ ದೇಹದಂತೆ ಕಾಣುವ ಪಳಿಯುಳಿಕೆಯನ್ನು ವಿಜ್ಞಾನಿಗಳು ಕಳೆದ ವಾರ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಪತ್ತೆ ಹಚ್ಚಿದ್ದಾರೆ. ಈ ಪಳಿಯುಳಿಕೆಯು ಮಾನವ ವಿಕಾಸದ ಬೆಳವಣಿಗೆಯಲ್ಲಿ ಈವರೆಗೆ ಕಳೆದುಹೋಗಿದ್ದ ವಿಕಾಸ ಸರಣಿಯ ಕೊಂಡಿಯನ್ನು ಒದಗಿಸಬಹುದೆಂದು ಹೇಳಲಾಗಿದೆ. ಈ ಪಳಿಯುಳಿಕೆ ಯ ಕಾಲಿನ ಮಂಡಿಯ ಕೆಳಭಾಗವನ್ನು ಹೊರತುಪಡಿಸಿದರೆ ದೇಹದ ಮಿಕ್ಕೆಲ್ಲ ಭಾಗಗಳು ಸುಸ್ಥಿತಿಯಲ್ಲಿರುವುದು.



ಇದು ಮಾನವನ ನೇರ ಪೂರ್ವಜವಲ್ಲವಾದರೂ, ಮಾನವನಿಗೆ ಹತ್ತಿರದ ಪೂರ್ವಜ ಎಂದು



ಹೇಳಲಾಗುತ್ತಿದೆ. ನಾರ್ವೆಯ ವಿಜ್ಞಾನಿಯು ಹೇಳುವಂತೆ 'ಇದು ಮಾನವನ ಅಜ್ಜಿ ಮುತ್ತಜ್ಜಿ ಅಲ್ಲದಿದ್ದರೂ, ಅಜ್ಜಿ ಮುತ್ತಜ್ಜಿಯರ ಚಿಕ್ಕಮ್ಮ' ! ನಾಲ್ಕು ಮುಕ್ಕಾಲು ಕೋಟಿ ವರ್ಷಗಳ ಹಿಂದೆ ಸುಮಾರು 10 ತಿಂಗಳ ಕಾಲ ಬದುಕಿದ್ದ ಈ ಜೀವಿ ಮಳೆಪೀಡಿತ ಅರಣ್ಯ ಪ್ರದೇಶದಲ್ಲಿ ಮರದೆಲೆಗಳು ಮತ್ತು ಹಣ್ಣುಗಳನ್ನು ತಿನ್ನುತ್ತಿತ್ತು ಎನ್ನಲಾಗಿದೆ.

ಜೀವಿಗಳ ಸೃಷ್ಟಿವಾದ ಮತ್ತು ವಿಕಾಸವಾದ

ಆಧುನಿಕ ವಿಕಾಸವಾದ ಸಿದ್ಧಾಂತದ ಪ್ರಕಾರ ಪ್ರತಿಯೊಂದು ಕಾಲಘಟ್ಟದಲ್ಲೂ ಜೀವಿಗಳು ರೂಪಾಂತರ ಹೊಂದುತ್ತಾ ಪರಿವರ್ತನಾ ಸ್ಥಿತಿಯಲ್ಲಿರುತ್ತವೆ. ಹೀಗೆ ಪರಿವರ್ತನೆ ಹೊಂದುವ ಎಲ್ಲ ಕಾಲಘಟ್ಟದ ಜೀವಿಗಳ ಪಳಿಯುಳಿಕೆಗಳು ನಮಗೆ ಲಭ್ಯವಿದ್ದಲ್ಲಿ ವಿಕಾಸ ಸರಣಿಯ ಸರಪಳಿಯನ್ನು ಪೂರ್ಣವಾಗಿ ಕಟ್ಟಬಹುದು. 1859ರಲ್ಲಿ ಚಾರ್ಲ್ಸ್ ಡಾರ್ವಿನ್ ಭೂಗರ್ಭದ ಶಿಲಾಪದರುಗಳಲ್ಲಿ ನೈಸರ್ಗಿಕವಾಗಿ ಸಂರಕ್ಷಿಸಿದ್ದ ಜೀವಿಗಳ ಪಳಿಯುಳಿಕೆಗಳ ಆಧಾರದ ಮೇಲ ಅವುಗಳು ವಿಕಾಸದ ಹೊಂದಿ ಬೆಳವಣಿಗೆಯಾಗು ಪ್ರಕ್ರಿಯೆಯನ್ನು ವೈಜ್ಞಾನಿಕವಾಗಿ ನಿರೂಪಿಸಿ ಜೀವಿಗಳು ಈಗಿರುವ ಸ್ಥಿತಿಯಲ್ಲೇ ಸೃಷ್ಟಿಯಾದವುಗಳಲ್ಲ, ಬದಲಿಗೆ ನಿಸರ್ಗದತ್ತವಾಗಿ ವಿಕಾಸ ಹೊಂದಿ ವಿವಿಧ ರೂಪಗಳನ್ನು ಪಡೆಯುತ್ತಾ ನಿಸರ್ಗ ಆಯ್ಕೆಯನುಸಾರ ಬೆಳವಣಿಗೆ ಹೊಂದುತ್ತಾ ಬಂದಿದೆಯೆಂದು ಸಾಧಿಸಿ ತೋರಿದರು. ಹಾಗೆಯೇ ದೈವ ಸೃಷ್ಟಿವಾದಕ್ಕೆ ಕೊಡಲಿ ಪೆಟ್ಟು ನೀಡಿದರು. ಅವರ ಕಾಲದಲ್ಲಿ ಭೂಗರ್ಭದ ಶಿಲಾಪದರುಗಳಲ್ಲಿದ್ದ ಜೀವಿಗಳ ಪಳಿಯುಳಿಕೆಗಳನ್ನು ಪತ್ತೆ ಮಾಡುವ ಕೆಲಸ ಅಷ್ಟಾಗಿಯೇನೂ ನಡೆದಿರಲಿಲ್ಲ. ಕಾಲಕ್ರಮೇಣ ಭೂಗರ್ಭ ಶೋಧನೆ ಹೆಚ್ಚಾದಂತೆ, ದೊರಕುತ್ತಾ ಬಂದಿರುವ



ಪಳಿಯುಳಿಕೆಗಳು ಚಾರ್ಲ್ಸ್ ಡಾರ್ವಿನ್ 'ಜೀವಿಗಳ ಉಗಮ' ಎಂಬ ಕೃತಿಯಲ್ಲಿ ಮಂಡಿಸಿದ ವಿಕಾಸ ಸಿದ್ಧಾಂತವನ್ನು ಸಾಬೀತುಪಡಿಸುತ್ತಾ ಬಂದಿವೆ.

'ಬೆಳಕು ಹಂಚಿದ ಬಾಲಕ' ಮಕ್ಕಳ ನಾಟಕದ ಪರಿಣಾಮಕಾರಿ ಪ್ರಯೋಗ

ಇತ್ತೀಚಿನ ವರ್ಷಗಳಲ್ಲಿ ಬೇಸಿಗೆ ಶಿಬಿರಗಳೆಂದರೆ ಲಾಭಕೋರ ದಂಧೆಯೇ ಆಗಿದೆ. ಕೆಲವರು ಅನಿವಾರ್ಯವಾಗಿ, ಕೆಲವರು ಮಕ್ಕಳು ಏನೋ ಕಲಿತುಬಿಡುತ್ತಾರೆ ಎಂಬ ಭ್ರಮೆಯಿಂದ, ಎಲ್ಲಾರೂ ಸೇರಿಸುತ್ತಾರಲ್ಲ ಎಂದು ಅನುಕರಣೆಯಿಂದ ಕೆಲವರು ಹೀಗೆ ವಿವಿಧ ಕಾರಣಗಳಿಂದ ಪೋಷಕರು ಮಕ್ಕಳನ್ನು ಬೇಸಿಗೆ ಶಿಬಿರಗಳಿಗೆ ಸೇರಿಸುತ್ತಾರೆ. ಅಪವಾದವೆಂಬತೆ ಕೆಲವರು ಉತ್ತಮ ಉದ್ದೇಶದಿಂದ, ಸೇವಾ ಮನೋಭಾವದಿಂದ, ಶಿಬಿರಗಳನ್ನು ನಡೆಸುವುದೂ ಉಂಟು. ಇದಕ್ಕೆ ಒಂದು ಉದಾಹರಣೆ, ಶಿವಮೊಗ್ಗದಲ್ಲಿ 'ಸಮುದಾಯ' ವ ಇತ್ತೀಚಿಗೆ ಹಮ್ಮಿಕೊಂಡಿದ್ದ 'ಮಕ್ಕಳ ಮನೆ' ಎಂಬ ಬೇಸಿಗೆ ರಂಗ ತರಬೇತಿ ಶಿಬಿರ. ಈ ಶಿಬಿರದಲ್ಲಿ ಮಕ್ಕಳು ಅಜ್ಜ ಅಜ್ಜಿ ಮನೆಯಲ್ಲಿ ಖುಷಿಯಿಂದ ಕುಣಿಯುವ ಮಕ್ಕಳಂತೆ, ಕುಣಿದಾಡುತ್ತಾ, ಕೇವಲ ಹತ್ತು ದಿನಗಳಲ್ಲಿ ಒಂದು ನಾಟಕವನ್ನು ಕಲಿತು ಕುವೆಂಪು ರಂಗ ಮಂದಿರದಲ್ಲಿ ಅಚ್ಚುಕಟ್ಟಾಗಿ ಪ್ರದರ್ಶನವನ್ನೂ ನೀಡಿದರು. ಶಿಬಿರದಲ್ಲಿ ಮಕ್ಕಳು ಮನರಂಜನೆಯ ದೇಸೀ ಆಟಗಳೊಂದಿಗೆ, ರಂಗ ಪರಿಕರಗಳ ತಯಾರಿಕೆ, ಮೇಕಪ್, ಮುಂತಾದುವುಗಳನ್ನೂ ಕಲಿತರು.



ಶಿಬಿರದಲ್ಲಿ ಮಕ್ಕಳು ಕಲಿತ ನಾಟಕ 'ಬೆಳಕು ಹಂಚಿದ ಬಾಲಕ' (ರಚನೆ: ಡಾ.ಆರ್.ವಿ. ಭಂಡಾರಿ, ನಿರ್ದೇಶನ: ಡಾ.ಶ್ರೀಪಾದ್ ಭಟ್)

ಒಂದು ಉತ್ತಮ ಪ್ರಯೋಗವಾಗಿತ್ತು. ಡಾ. ಬಿ.ಆರ್. ಅಂಬೇಡ್ಕರ್ ರವರ ಬಾಲ್ಯದ ದಿನಗಳ ಘಟನೆಗಳ ಈ ಮಕ್ಕಳ ನಾಟಕ ಇಂದಿಗೂ ಪ್ರಸ್ತುತವೆನಿಸಿ, ದೊಡ್ಡವರಿಗೂ ಕಣ್ಣು ತೆರೆಸುವ ರೀತಿಯಿದೆ ಬಾಲಕ ಅಂಬೇಡ್ಕರ್ ನೀರಿಗಾಗಿ ಹಪಹಪಿಸುವುದು.

ಮೇಲ್ಜಾತಿಯವರು ಅವನನ್ನು ಹೀಯಾಳಿಸುವುದು ಪ್ರೇಕ್ಷಕರ ಮನ ಕಲಕಿತು. ಮೇಲ್ಜಾತಿಯ ಬಾಲಕರಿಗೆ ತಿಳಿ ಹೇಳಿ, ಬಾಲಕ ಅಂಬೇಡ್ಕರನಿಗೆ ನೀರು ಪಡೆಯುವುದು ನಿನ್ನ ಹಕ್ಕು ಎಂದು ಆತ್ಮ ವಿಶ್ವಾಸ ತುಂಬುವ ಉಪಾಧ್ಯಾಯರ ಪಾತ್ರ ಪರಿಣಾಮಕಾರಿಯಾಗಿ ಮೂಡಿ ಬಂದಿತು. ಬುದ್ಧನ ನಾಟಕ ಅಭ್ಯಾಸ ಮಾಡುವ ಪ್ರಸಂಗದಲ್ಲಿ 'ಯಾವ ಧರ್ಮ ನಮ್ಮನ್ನು ಶೋಷಣೆಗೆ ಗುರಿಪಡಿಸುತ್ತದೋ ಅದನ್ನು ಸರಿಪಡಿಸಬೇಕು' ಎಂದು ನೀಡುವ ಸಂದೇಶ ಇಂದಿಗೂ ಪ್ರಸ್ತುತವಾಗುವುದೇ ನಾಟಕದ ಯಶಸ್ಸು. ಲಭ್ಯ ಪರಿಕರಗಳಿಂದ ಸಿದ್ಧಪಡಿಸಿದ ರಂಗ ಸಜ್ಜಿಕೆ ಮೆಚ್ಚುಗೆ ಗಳಿಸಿತು. ಬೆಳಕು ಪರಿಣಾಮಕಾರಿಯಾಗಿತ್ತು. (ಸಹ ನಿರ್ದೇಶನ, ರಂಗ ಸಜ್ಜಿಕೆ, ಬೆಳಕು : ಶ್ರೀ ದಾಮೋದರ ನಾಯ್ಕ್, ಶ್ರೀ ಶ್ರೀನಿವಾಸ ಮಾಡ್ಗೇರಿ, ಶ್ರೀ ಮನೋಜ್ ಭಟ್).

ಮಕ್ಕಳು ಲೀಲಾಜಾಲವಾಗಿ ಅಭಿನಯಿಸಿದ ಈ ನಾಟಕದಲ್ಲಿ ಕೊರತೆಗಳೇನೂ ಇರಲಿಲ್ಲವೆಂದಲ್ಲ. ಕೆಲವು ದೃಶ್ಯಗಳು ಹೊಂದಾಣಿಕೆಯಿಲ್ಲದಂತೆ ಬಿಡಿಬಿಡಿಯಾಗಿದ್ದಂತೆನಿಸಿತು. ಹಾಡುಗಳ ಆಯ್ಕೆ ಉತ್ತಮವಾಗಿದ್ದರೂ, ಗೀತೆಗಳಿಗೂ, ದೃಶ್ಯಗಳಿಗೂ ಹೊಂದಾಣಿಕೆಯ ಕೊರತೆ ಕಾಣಿಸಿತು.

● ಶ್ರೀ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY
OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published
at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH